ರಂಜನೆ ಬೋಧನೆ ಪ್ರಬೋಧನೆ

ಗೌ ರಿ

ಲಂಕೇಶ್


ಜನವರಿ 21, 2009 ರೂ. 12/-

TV9ನಲ್ಲಿ ಸತ್ಯಂ ದುಡ್ಡು?



ಸತ್ಯಂ ಮಿಥ್ಯಂ

ಕೇಸರಿ ತೆಕ್ಕೆಗೆ ಹಾವೇರಿ ಜಿಪಂ



ನಂಬಿದ ಭಕ್ತನ ಕತ್ತು ಕುಯ್ದ ಯೋಗೇಶ್ವರ

ಜೈಲುಪಾಲಾದ ಪತ್ರಕರ್ತ ಸೀತಾರಾಂ



ಕೂಗುಮಾರಿಯ ಕೇಸರಿ ಮೇಕಪ್




ಶ್ರೀಲಂಕಾದಲ್ಲಿ ಹುಲಿ-ಸಿಂಹಗಳ ಯುದ್ಧ!



ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಪ್ರತ್ಯೇಕ ತಮಿಳು ರಾಷ್ಟ್ರಕ್ಕಾಗಿ ದಶಕಗಳಿಂದ ಹೋರಾಟ ನಡೆಸುತ್ತಿರುವ **Liberation Tigers of Tamil Eelam** (ಎಲ್‌ಟಿಟಿಇ)ನ ಪಾರಂಪರಿಕ ಭದ್ರ ನೆಲೆಗಳ ಮೇಲೆ ಶ್ರೀಲಂಕಾದ ಸಿಂಹಳೀಯ ಸೈನ್ಯ ಭಾರಿ ಪ್ರಮಾಣದ ದಾಳಿ ನಡೆಸುವುದರೊಂದಿಗೆ ಇತ್ತೀಚಿನ ಹಿಂಸಾಚಾರದ ಮತ್ತೊಂದು ಅಧ್ಯಾಯ ಪ್ರಾರಂಭವಾಗಿದೆ. ಕಳೆದ ಒಂಭತ್ತು ವರ್ಷಗಳಿಂದ ತಮಿಳು ಹುಲಿಗಳ ಭದ್ರಕೋಟೆಯಾಗಿದ್ದ ಹಾಗೂ ಅವರ ರಾಜಕೀಯ ರಾಜಧಾನಿ ಎಂದೇ ಗುರುತಿಸಲಾಗಿದ್ದ ಕಿಲಿನೋಚಿ ಪಟ್ಟಣ ಮೊನ್ನೆ ಜನವರಿ ಎರಡರಂದು ಶ್ರೀಲಂಕಾ ಸೈನ್ಯದ ಪಾಲಾಗಿದೆ. ಇದಾದ ಒಂದೇ ವಾರದಲ್ಲಿ ತಮಿಳು ಹುಲಿಗಳ ಮತ್ತೊಂದು ವ್ಯೂಹತಾಂತ್ರಿಕ ಭದ್ರನೆಲೆಯಾದ ಎಲಿಫಂಟ್ ಪಾಸ್ ಕೂಡ ಎಲ್‌ಟಿಟಿಇ ಕೈತಪ್ಪಿ ಶ್ರೀಲಂಕಾ ಸೇನೆಯ ಪಾಲಾಗಿದೆ.

ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಅವರು ಎಲ್‌ಟಿಟಿಇ ವಿರುದ್ಧ ಆಲ್-ಔಟ್ ಯುದ್ಧಕ್ಕೆ ಕಳೆದ ಕೆಲವು ವರ್ಷಗಳಿಂದಲೂ ಸಿದ್ಧತೆ ನಡೆಸಿದ್ದರು. ತಮಿಳು ಹುಲಿಗಳು ಕೇವಲ ಶ್ರೀಲಂಕಾಕ್ಕೆ ಮಾತ್ರವಲ್ಲ ಇಡೀ ದಕ್ಷಿಣ ಏಷ್ಯಾಕ್ಕೆ ಅಪಾಯಕಾರಿ ಎಂದು ಹೇಳುತ್ತಾ ದಕ್ಷಿಣ ಏಷ್ಯಾದ ಎಲ್ಲ ದೇಶಗಳನ್ನು ಎಲ್‌ಟಿಟಿಇ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆಸಿದ್ದರು. ಎಲ್ಲಾ ಸಿದ್ಧತೆಯೊಂದಿಗೆ ಎಲ್‌ಟಿಟಿಇ ಮೇಲೆ ಎರಗಿರುವ ರಾಜಪಕ್ಸೆ ನೂರಾರು ಎಲ್‌ಟಿಟಿಇ ಹೋರಾಟಗಾರರು, ಲಂಕಾ ಸೇನೆಯ ಯೋಧರನ್ನು ಬಲಿಕೊಟ್ಟು ತಮಿಳು ಹುಲಿಗಳ ಭದ್ರ ನೆಲೆಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಇಂತಹ ಸಂದರ್ಭದಲ್ಲಿ ಶ್ರೀಲಂಕಾದಲ್ಲಿನ ತಮಿಳು ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ, ಅದಕ್ಕಾಗಿ ನಡೆದ ಸುದೀರ್ಘ ಹೋರಾಟಗಳ ಬಗ್ಗೆ, ಸಶಸ್ತ್ರ ಸ್ವರೂಪದ ಹೋರಾಟ ಮಾದರಿಯ ಬಗ್ಗೆ ಹತ್ತು ಹಲವು ಪ್ರಶ್ನೆಗಳು ಏಳುತ್ತಿವೆ. ಕೆಲವರು ಎಲ್‌ಟಿಟಿಇ ಸಶಸ್ತ್ರ ಹೋರಾಟದ ಹಾದಿ ಹಿಡಿದಿರುವುದರಿಂದ ಅವರನ್ನು ಭಯೋತ್ಪಾದಕರೆಂಬಂತೆ ಕಂಡರೆ ಮತ್ತೆ ಕೆಲವರಿಗೆ ಅದು ನ್ಯಾಯಸಮ್ಮತ ತಮಿಳು ವಿಮೋಚನಾ ಹೋರಾಟವಾಗಿ ಕಾಣುತ್ತದೆ.



ರಾಜಪಕ್ಸೆ

ಶ್ರೀಲಂಕಾದಲ್ಲಿ ನಡೆಯುತ್ತಿರುವ ತಮಿಳು ಪ್ರತ್ಯೇಕತಾವಾದಿ ಹೋರಾಟದ ಹಿಂದೆ ನ್ಯಾಯ ಸಮ್ಮತವಾದ ಮತ್ತು ತಾರ್ಕಿಕ ಕಾರಣಗಳಿವೆ. ಶ್ರೀಲಂಕಾದಲ್ಲಿರುವ ತಮಿಳರು ಭಾರತದ ತಮಿಳುನಾಡಿನಿಂದ ಹೋದವರೆಂದೂ, ಇನ್ನೊಬ್ಬರ ದೇಶಕ್ಕೆ ಹೋಗಿ ತಮ್ಮದೇ ಸ್ವತಂತ್ರ ದೇಶ ಬೇಕೆಂದು ಮೊಂಡು ಹಠ ಹಿಡಿದು ಸುಖಾ ಸುಮ್ಮನೇ ಹಿಂಸಾಚಾರದಲ್ಲಿ ತೊಡಗಿದ್ದಾರೆಂದೂ ಬಿಂಬಿಸುವ ಅಸಂಬದ್ಧವಾದವೊಂದಿದೆ. ಅದು ಶ್ರೀಲಂಕಾದ ಸಿಂಹಳೀಯ ದುರಭಿಮಾನಿಗಳು ಹರಿಬಿಟ್ಟಿರುವ ಹುಸಿಹುಸಿ ಸುಳ್ಳು. ಸತ್ಯ ಏನೆಂದರೆ, ಶ್ರೀಲಂಕಾದ ತಮಿಳರಲ್ಲಿ ಶೇ.90ರಷ್ಟು ಜನ ಅದೇ ನಾಡಿನ ಮೂಲನಿವಾಸಿಗಳೇ ಹೊರತು ಭಾರತದಿಂದ ವಲಸೆ ಹೋದವರಲ್ಲ.

ತಮಿಳು ರಾಷ್ಟ್ರೀಯತೆಯ ಪ್ರಶ್ನೆ ಕೂಡ ನಿನ್ನೆಮೊನ್ನೆ ಹುಟ್ಟಿಕೊಂಡಿದ್ದಲ್ಲ, ಅದಕ್ಕೆ ಬರೋಬ್ಬರಿ ಒಂದು ಶತಮಾನದ ಚರಿತ್ರೆಯಿದೆ. ವಿಶ್ವಸಂಸ್ಥೆಯು ಶ್ರೀಲಂಕಾವನ್ನು ಒಂದು ದೇಶ ಎಂದು ಗುರುತಿಸಿ ಒಪ್ಪಿಕೊಂಡಿದ್ದರೂ ಶ್ರೀಲಂಕಾದಲ್ಲಿ ವಾಸಿಸುತ್ತಿರುವ ಜನರೆಲ್ಲರೂ ಇದು ನಮ್ಮ ದೇಶ ಎಂದು ಒಪ್ಪಿಕೊಂಡಿಲ್ಲ, ಏಕೆಂದರೆ, ಅಲ್ಲಿ ಸಿಂಹಳೀಯರು, ತಮಿಳರು, ಮುಸ್ಲಿಮರು, ಬರ್ಗರ್‌ಗಳು, ವೇಡ್ಡಾಗಳು-ಹೀಗೆ ಹಲವು ಜನಾಂಗಿಯರು ಶತಶತಮಾನಗಳಿಂದ ವಾಸಿಸುತ್ತಿದ್ದು ಅವರೆಲ್ಲರ ಭಾಷೆ, ಭೌಗೋಳಿಕ ಪ್ರದೇಶ, ಸಂಸ್ಕೃತಿಗಳು ಬೇರೆ ಬೇರೆಯಾಗಿಯೇ ಇವೆ. ಅವರೆಲ್ಲರೂ ತಮ್ಮ ತಮ್ಮ ಜನಾಂಗದ ಮೂಲಕವೇ ಗುರುತಿಸಿಕೊಳ್ಳುತ್ತಾರೆಯೇ ವಿನಃ ತಮ್ಮನ್ನು 'ಶ್ರೀಲಂಕಿಯರು' ಅಥವಾ 'ಲಂಕಿ'ಯರು ಎಂದು ಗುರುತಿಸಿಕೊಳ್ಳುವುದಿಲ್ಲ. ಆ ಎಲ್ಲ ಜನಾಂಗಗಳ ಅನನ್ಯತೆಯ ಗುರುತು ಕ್ರಿ.ಪೂ. 3 ನೇ ಶತಮಾನದಿಂದಲೂ ಇರುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ಶ್ರೀಲಂಕಾದಲ್ಲಿ ಇಂದು ಆಡಳಿತ ನಡೆಸುತ್ತಿರುವ ಸಿಂಹಳೀಯರು ತಮ್ಮನ್ನು ಆರ್ಯ ಮೂಲದವರೆಂದು ಕರೆದುಕೊಳ್ಳುತ್ತಾರೆ. ಎರಡು ಸಾವಿರದ ವರ್ಷಗಳ ಹಿಂದೆ ಭಾರತಕ್ಕೆ ದಾಳಿಯಿಟ್ಟ ಆರ್ಯರು ನಂತರದ ದಿನಗಳಲ್ಲಿ ದಕ್ಷಿಣದ ಕಡೆ ಲಗ್ಗೆ ಹಾಕುತ್ತಾ ಕ್ರಿ.ಪೂ. 500 ರ ಹೊತ್ತಿಗೆ ಶ್ರೀಲಂಕಾಕ್ಕೆ ಬಂದು ಅಲ್ಲಿನ ಮೂಲ ನಿವಾಸಿಗಳಾದ ದ್ರಾವಿಡರ ಮೇಲೆ ಆಧಿಪತ್ಯ ಸಾಧಿಸಿದರು ಎಂಬುದು ಚಾರಿತ್ರಿಕ ಸತ್ಯ.


ಸಿಂಹಳೀಯರಂತೆಯೇ ಇತರ ಹಲವು ಜನಾಂಗಗಳ ತಾಣವಾದ ಶ್ರೀಲಂಕಾ ದ್ವೀಪದಲ್ಲಿ ಕಾಲಕ್ರಮೇಣ ಆ ಎಲ್ಲಾ ಜನಾಂಗಗಳು ಒಂದೊಂದು ರಾಷ್ಟ್ರೀಯತೆಯಾಗಿ ರೂಪುಗೊಂಡವು. ಅವುಗಳ ನಡುವೆ ಘರ್ಷಣೆಗಳೂ ಸಾಮಾನ್ಯವಾಗಿದ್ದವು. ಬ್ರಿಟಿಷ್ ವಸಾಹತುಶಾಹಿಗಳು ಭಾರತ ಉಪಖಂಡವನ್ನೆಲ್ಲಾ ಆಕ್ರಮಿಸಿಕೊಂಡಾಗ ಸಿಂಹಳೀಯರು ಅವರ ನಿಕಟವರ್ತಿ ಏಜೆಂಟರಾಗಿ ಸೇವೆ ಸಲ್ಲಿಸಿದ ಕಾರಣ ಅವರು ಪ್ರಬಲವಾಗಿ ಬೆಳೆದರು. 1948 ರಲ್ಲಿ ಬ್ರಿಟಿಷರು ಅಲ್ಲಿಂದ ಕಾಲ್ತೆಗೆದಾಗ ಅಧಿಕಾರಕ್ಕೆ ಬಂದ ಸಿಂಹಳೀಯರು ತಮಿಳು ಭಾಷಿಕರ ಪ್ರದೇಶದ ಮೇಲೆ ಹಿಡಿತ ಸ್ಥಾಪಿಸಲು ಪ್ರಯತ್ನಿಸತೊಡಗಿದರು.

ಶ್ರೀಲಂಕಾದ ಆಳುವವರ್ಗದ ಸಿಂಹಳೀಯರು ತಮಿಳರನ್ನು ಅಪ್ರಜಾತಾಂತ್ರಿಕವಾಗಿ ನಡೆಸಿಕೊಂಡು ಅವರ ಮೇಲೆ ಹೇಳತೀರದ ದೌರ್ಜನ್ಯಗಳನ್ನು ಹರಿಬಿಟ್ಟದ್ದೇ ಈ ಹೊತ್ತು ಶ್ರೀಲಂಕಾ ಹಿಂಸಾಚಾರದಿಂದ ತತ್ತರಿಸುವುದಕ್ಕೆ ಮೂಲಕಾರಣವಾಗಿದೆ. ಮೊದಮೊದಲು ಸಿಂಹಳೀಯರು ಲಂಕಾದ ಪ್ಲಾಂಟೇಶನ್ನುಗಳಲ್ಲಿ ಕೆಲಸ ಮಾಡುತ್ತಿದ್ದ ತಮಿಳು ಕೆಲಸಗಾರರ 'ಪೌರತ್ವ ಹಕ್ಕ'ನ್ನೇ ಕಿತ್ತುಕೊಂಡಿದ್ದರು; ಸರ್ಕಾರದ ಯಾವುದೇ ಹುದ್ದೆಗೆ, ಅದು ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಸೇರಬೇಕಾದರೆ ಸಿಂಹಳೀಯ ಭಾಷೆ ಕಡ್ಡಾಯವಾಗಿ ಬರಬೇಕೆಂಬ ಶರತ್ತುಗಳನ್ನು ಹೇರಲಾಗಿತ್ತು. ಈ ಮೂಲಕ ಸಿಂಹಳೀಯ ಭಾಷೆ ಬಾರದ ಬಹುತೇಕ ತಮಿಳರನ್ನು ಸರ್ಕಾರಿ ಕೆಲಸದಿಂದ ವಂಚಿಸಲಾಯಿತು. ಶಿಕ್ಷಣ ನೀಡುವಲ್ಲಿಯೂ ತಮಿಳರಿಗೆ ತಾರತಮ್ಯ ಮಾಡಲಾಯಿತು. ಸಿಂಹಳೀಯ ದುರಭಿಮಾನ ಎಷ್ಟರಮಟ್ಟಿಗೆ ಪ್ರಭಾವಶಾಲಿಯಾಗಿತ್ತೆಂದರೆ ಸಿಂಹಳೀಯರು ಎಂದೂ ತಮಿಳರನ್ನು ತಮ್ಮ ದೇಶದ ನಾಗರಿಕರೆಂದು ಒಪ್ಪಿಕೊಳ್ಳಲೇ ಇಲ್ಲ. ತಮಿಳರೆಲ್ಲರೂ ಸಿಂಹಳೀಯರ ಸೇವೆಗಾಗಿ ಭಾರತದಿಂದ ಬಂದವರು ಎಂಬ ಭಾವನೆ ಇಂದಿಗೂ ಗಾಢವಾಗಿ ಬೇರೂರಿದೆ. ಹಾಗಾಗಿ ಅವರನ್ನು ಇಂದಿಗೂ ಸೇವಕರಂತೆಯೇ ನೋಡಿಕೊಳ್ಳಲಾಗುತ್ತಿದೆ.

ಮೊದಮೊದಲು ಈ ಎಲ್ಲಾ ತಾರತಮ್ಯ, ಅವಮಾನ, ಅನ್ಯಾಯ, ದೌರ್ಜನ್ಯಗಳನ್ನು ತಮಿಳರು ಶಾಂತಿಯುತವಾಗಿಯೇ ವಿರೋಧಿಸಿದರು, ಪ್ರತಿಭಟಿಸಿದರು. ಈ ಶಾಂತಿಯುತ ಪ್ರತಿರೋಧ ಅವರಿಗೆ ಯಾವ ನ್ಯಾಯವನ್ನೂ ದೊರಕಿಸಿ ಕೊಡಲಿಲ್ಲ, ಬದಲಾಗಿ ಇನ್ನಷ್ಟು ದೌರ್ಜನ್ಯವನ್ನೇ ಅನುಭವಿಸಬೇಕಾಯಿತು.

ಶ್ರೀಲಂಕಾದ ತಮಿಳರ ಮೇಲೆ ನಡೆಯುತ್ತಿದ್ದ ಶೋಷಣೆ-ದಮನಗಳ ವಿರುದ್ಧದ ಚಳವಳಿ ಹೊಸ ತಿರುವು ಪಡೆದುಕೊಂಡದ್ದು 1972 ರಲ್ಲಿ ಹುಟ್ಟಿದ ಚಾರಿತ್ರಿಕ ಹುಲಿಗಳ ಚಳವಳಿಯೊಂದಿಗೆ. ಇದನ್ನು ಹುಟ್ಟು ಹಾಕಿದವರು ಇಂದಿನ ಚಳವಳಿಯ ನಾಯಕ ಮತ್ತು ತಮಿಳು ಹುಲಿಗಳ ಮಿಲಿಟರಿ ಕಮ್ಯಾಂಡರ್ ವೇಲುಪಿಲ್ಲೈ ಪ್ರಭಾಕರನ್. 1976 ರಲ್ಲಿ 'ತಮಿಳು ಐಕ್ಯ ವೇದಿಕೆ'ಯು ರಾಷ್ಟ್ರೀಯ ವಿಚಾರ ಸಂಕಿರ್ಣವನ್ನು ಸಂಘಟಿಸಿತ್ತು. ಆ ಸಭೆಯಲ್ಲಿಯೇ ಸಂಪೂರ್ಣ ಪ್ರತ್ಯೇಕ ಮತ್ತು ಸ್ವತಂತ್ರ ತಮಿಳು ರಾಷ್ಟ್ರಕ್ಕಾಗಿ ಸಶಸ್ತ್ರ ಹೋರಾಟ ನಡೆಸುವ ಚಾರಿತ್ರಿಕ ನಿರ್ಣಯವನ್ನು ಕೈಗೊಳ್ಳಲಾಯಿತು. ಹೀಗೆ, ಆರಂಭದಲ್ಲಿ ತಮ್ಮ ಮೇಲೆ ಸಿಂಹಳೀಯರು ನಡೆಸುತ್ತಿದ್ದ ಶೋಷಣೆ, ದಮನಗಳ ವಿರುದ್ಧ ಶುರುವಾದ ತಮಿಳರ ಶಾಂತಿಯುತ ಹೋರಾಟ ಕ್ರಮೇಣ ರಾಷ್ಟ್ರೀಯತೆಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕಿನ (**Right to Self-determination**) ಬೇಡಿಕೆಯ ಮೇಲೆ ಪ್ರತ್ಯೇಕ ತಮಿಳು ರಾಷ್ಟ್ರದ ಸ್ಥಾಪನೆಯ ತಿರುವು ಪಡೆದುಕೊಂಡಿತು.

'ತಮಿಳು ಹುಲಿಗಳು' ಎಂದೇ ಪ್ರಸಿದ್ಧವಾಗಿರುವ ಎಲ್‌ಟಿಟಿಇಯ ಹೋರಾಟಗಾರರು ತಮಿಳರೇ ಬಹುಸಂಖ್ಯಾತರಾಗಿರುವ ಶ್ರೀಲಂಕಾದ ಉತ್ತರ ಭಾಗಗಳನ್ನು ಬೇರ್ಪಡಿಸಿ ತಮಿಳರೇ ರಾಜ್ಯಾಧಿಕಾರ ಮಾಡುವ ಸ್ವತಂತ್ರ ಪ್ರತ್ಯೇಕ ತಮಿಳು ರಾಷ್ಟ್ರವನ್ನು ನಿರ್ಮಿಸಬೇಕೆಂದು 1970ರ ದಶಕದಿಂದಲೂ ಹೋರಾಟ ನಡೆಸುತ್ತಾ ಬಂದಿದ್ದಾರೆ. ದಶಕಗಳ ಹೋರಾಟದ ಫಲವಾಗಿ ಈ ಹೊತ್ತು ಎಲ್‌ಟಿಟಿಇ ಎಷ್ಟೊಂದು ಪ್ರಬಲ ಸಂಘಟನೆಯಾಗಿ ಬೆಳೆದಿದೆಯೆಂದರೆ, ಅದರ ವಿವಿಧ ಸೈನಿಕ ವಿಭಾಗಗಳಲ್ಲಿ ಸುಮಾರು 20 ಸಾವಿರದಷ್ಟು ತರಬೇತಿ ಹೊಂದಿದ ನುರಿತ ಹೋರಾಟಗಾರರಿದ್ದಾರೆಂದು ಅಂದಾಜಿಸಲಾಗಿದೆ. ಅದರ ಬಳಿ ಇರುವ ಶಸ್ತ್ರಾಸ್ತ್ರಗಳೂ ತುಂಬಾ ಆಧುನಿಕವಾಗಿದೆ. ವಿಶ್ವದ ಇತರ ಹಲವಾರು ದೇಶಗಳಲ್ಲಿ ಅದಕ್ಕೆ ಶಸ್ತ್ರಾಸ್ತ್ರ ಪೂರೈಸುವ, ಪ್ರಚಾರ ಕಾರ್ಯ ನಡೆಸುವ 'ಬೆಂಬಲ ರಚನೆ'ಗಳಿವೆ. ಇತರ ದೇಶಗಳ ರೆಗ್ಯೂಲರ್ ಸೈನ್ಯದಂತೆ ಎಲ್‌ಟಿಟಿಇಗೂ ಭೂಸೇನೆ, ವಾಯುಸೇನೆ ಮತ್ತು ನೌಕಾಪಡೆ ಎಂಬ ವಿಭಾಗಗಳಿವೆ; ತನ್ನದೇ ಆದ ಗುಪ್ತಚಾರ ವಿಭಾಗವಿದೆ. ಇದಲ್ಲದೇ, 'ಕಪ್ಪು ಹುಲಿಗಳು' (**Black Tigers**) ಎಂಬ ಪ್ರತ್ಯೇಕ ಸೈನಿಕ ವಿಭಾಗವನ್ನು ಸ್ಥಾಪಿಸಲಾಗಿದೆ. ಇದರಲ್ಲಿರುವ ಹೋರಾಟಗಾರರು ತಮ್ಮ ಗುರಿ ಸಾಧಿಸಲು ಅಗತ್ಯವೆನಿಸಿದಲ್ಲಿ ಆತ್ಮಹತ್ಯಾ ದಳಗಳನ್ನು ರಚಿಸಿ ದಾಳಿ ನಡೆಸುತ್ತಾರೆ. ವಿಶ್ವದ ಅತ್ಯಂತ ಪರಿಣಾಮಕಾರಿ ಆತ್ಮಹತ್ಯಾದಳವೆಂದು ಕಪ್ಪು ಹುಲಿಗಳನ್ನು ಗುರುತಿಸಲಾಗುತ್ತಿದೆ.



ಪ್ರಭಾಕರನ್

ಉತ್ತರ ಶ್ರೀಲಂಕಾದಲ್ಲಿ ತಮಿಳರೇ ಪ್ರಧಾನವಾಗಿರುವ ಪ್ರದೇಶಗಳನ್ನು ಶ್ರೀಲಂಕಾ ಆಡಳಿತದಿಂದ ಮುಕ್ತಗೊಳಿಸಿ ತಮ್ಮದೇ ಆದ ಸ್ವತಂತ್ರ ಪರ್ಯಾಯ ಆಡಳಿತವನ್ನು ಅವರು ಸ್ಥಾಪಿಸಿದ್ದಾರೆ. ಇತರ ಎಲ್ಲ ದೇಶಗಳಂತೆ ಎಲ್‌ಟಿಟಿಇ ಸರ್ಕಾರದಲ್ಲಿಯೂ ಆರೋಗ್ಯ, ಅಭಿವೃದ್ಧಿ, ಶಿಕ್ಷಣ, ಮಿಲಿಟರಿ, ಹಣಕಾಸು-ಹೀಗೆ ಹಲವಾರು ಪ್ರತ್ಯೇಕ ಇಲಾಖೆಗಳಿವೆ. ಅದಕ್ಕೆ ತನ್ನದೇ ಆದ ನ್ಯಾಯಾಂಗ ಇಲಾಖೆಯೂ ಇದೆ. ಎಲ್‌ಟಿಟಿಇ ಸರ್ಕಾರದ ಪ್ರಸರಣಾ ವಿಭಾಗವನ್ನು **Voice of Tigers** ಎಂದು ಕರೆಯಲಾಗುತ್ತದೆ. ನ್ಯಾಷನಲ್ ಟೆಲಿವಿಷನ್ ಆಫ್ ತಮಿಳು ಈಳಂ (NTE) ಎಂಬ ಸೆಟಲೈಟ್ ದೂರದರ್ಶನ

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಸೇವೆಯನ್ನೂ ಅದು ಹೊಂದಿದೆ. ಆದರೆ ಅದು ಸದ್ಯಕ್ಕೆ ಶ್ರೀಲಂಕಾ ಸರ್ಕಾರ ಉಪಯೋಗಿಸುವ ಕರೆನ್ಸಿಯನ್ನೇ ಉಪಯೋಗಿಸುತ್ತಿದೆ.

ಶ್ರೀಲಂಕಾದ ಸೈನ್ಯವು ತಮಿಳು ನೆಲೆ ಜಾಫ್ನಾವನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ 1987 ರಲ್ಲಿ ಹೊಸ ದಾಳಿಯನ್ನು ಪ್ರಾರಂಭಿಸಿ ಹೇಳತೀರದಷ್ಟು ತಮಿಳರ ಮಾರಣಹೋಮವನ್ನು ನಡೆಸಿತ್ತು. ಅದಕ್ಕೆ ಪ್ರತಿಯಾಗಿ ಎಲ್‌ಟಿಟಿಇ ಪ್ರತಿದಾಳಿ ಪ್ರಾರಂಭಿಸಿದ್ದರಿಂದ ಇದೊಂದು ಪೂರ್ಣ ಪ್ರಮಾಣದ ಯುದ್ಧವಾಗಿ ಪರಿವರ್ತನೆಗೊಂಡಿತು.

ಆ ಸಂದರ್ಭದಲ್ಲಿಯೇ ಭಾರತದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಶ್ರೀಲಂಕಾಕ್ಕೆ ಭಾರತೀಯ ಶಾಂತಿ ಪಾಲನಾ ಪಡೆ IPKF ಅನ್ನು ಕಳಿಸಿಕೊಟ್ಟರು. ಶ್ರೀಲಂಕಾದಲ್ಲಿ ಶಾಂತಿ ಸ್ಥಾಪಿಸುವ ನೆಪದಲ್ಲಿ IPKF ಲಂಕಾದ ತಮಿಳರ ಮೇಲೆ, ಎಲ್‌ಟಿಟಿಇ ಮೇಲೆ ಭಾರಿ ಪ್ರಮಾಣದ ಮಿಲಿಟರಿ ಕಾರ್ಯಾಚರಣೆಗಳನ್ನು ಮಾಡಿ ಸಾವಿರಾರು ಜನರನ್ನು ಕೊಂದು ಹಾಕಿತು. ಆದರೆ ಎಲ್‌ಟಿಟಿಇ ಒಡ್ಡಿದ ಪ್ರಬಲ ಮಿಲಿಟರಿ ಪ್ರತಿರೋಧದಿಂದಾಗಿ ಶಾಂತಿಪಾಲನಾ ಪಡೆಗೆ ಯಶಸ್ಸು ಸಿಗಲಿಲ್ಲ. ಅದೇ ಹೊತ್ತಿನಲ್ಲಿ ಭಾರತದ ಸೈನ್ಯ ಶ್ರೀಲಂಕಾದ ತಮಿಳರ ಮೇಲೆ ನಡೆಸುತ್ತಿದ್ದ ಬರ್ಬರ ದಮನವನ್ನು ವಿರೋಧಿಸಿ ದೇಶದಾದ್ಯಂತ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನಲ್ಲಿ ಭಾರಿ ಪ್ರತಿಭಟನೆಗಳು ಭುಗಿಲೆದ್ದವು. ಕೊನೆಗೆ ಅನಿವಾರ್ಯವಾಗಿ ಭಾರತ ಸರ್ಕಾರವು ತನ್ನ ಶಾಂತಿಪಾಲನಾ ಪಡೆಯನ್ನು ವಾಪಸ್ಸು ಕರೆಸಿಕೊಳ್ಳಬೇಕಾಯಿತು.

ಶ್ರೀಲಂಕಾಕ್ಕೆ ಭಾರತದ ಸೈನ್ಯ ಕಳುಹಿಸಿ ಶ್ರೀಲಂಕಾದ ತಮಿಳರ ಮಾರಣಹೋಮಕ್ಕೆ ನೇರವಾಗಿ ಕಾರಣಕರ್ತರಾದ ರಾಜೀವ್ ಗಾಂಧಿಯ ಮೇಲೆ ಸೇಡು ತೀರಿಸಿಕೊಳ್ಳಲು ಎಲ್‌ಟಿಟಿಇ ನಿರ್ಧರಿಸಿತು. ರಾಜೀವ್ ಗಾಂಧಿಯವರು ಚುನಾವಣಾ ಪ್ರಚಾರಕ್ಕೆಂದು ತಮಿಳುನಾಡಿನ ಶ್ರೀಪೆರಂಬದೂರಿಗೆ ಬಂದಾಗ ಎಲ್‌ಟಿಟಿಇಯ ಆತ್ಮಹತ್ಯಾದಳವು ಅವರನ್ನು ಬಾಂಬ್ ಹಾಕಿ ಹತ್ಯೆ ಮಾಡಿತು.

ಭಾರತೀಯ ಶಾಂತಿಪಾಲನಾ ಪಡೆ ಶ್ರೀಲಂಕಾದಿಂದ ಕಾಲ್ತೆಗೆದಿತ್ತಾದರೂ ಶ್ರೀಲಂಕಾ ಸೈನ್ಯ ಎಲ್‌ಟಿಟಿಇ ನೆಲೆಗಳ ಮೇಲಿನ ತನ್ನ ದಾಳಿಯನ್ನು ಮುಂದುವರೆಸಿತು. 1995 ಮತ್ತು 1996 ರಲ್ಲಿ ಭಾರಿ ಸರಣಿ ದಾಳಿಗಳನ್ನು ವ್ಯವಸ್ಥಿತವಾಗಿ ಸಂಘಟಿಸುವ ಮೂಲಕ ಎಲ್‌ಟಿಟಿಇಯ ವಶದಲ್ಲಿದ್ದ ಉತ್ತರದ ಭದ್ರನೆಲೆ ಜಾಫ್ನಾ ಮತ್ತು ಕಿಲಿನೋಚ್ಚಿ ಎಂಬ ನಗರವನ್ನು ಶ್ರೀಲಂಕಾ ವಶಪಡಿಸಿಕೊಂಡಿತು. ನಂತರದ ದಿನಗಳಲ್ಲಿ ಎಲ್‌ಟಿಟಿಇಗೆ ಬಹಳಷ್ಟು ನಷ್ಟವುಂಟಾಗಿ ಬಹುತೇಕ ಪ್ರದೇಶಗಳ ಮೇಲಿನ ತನ್ನ ನಿಯಂತ್ರಣವನ್ನು ಕಳೆದುಕೊಳ್ಳಬೇಕಾಯಿತು. ಆದರೆ ಇವು ಎಲ್‌ಟಿಟಿಇಗೆ ತಾತ್ಕಾಲಿಕ ಹಿನ್ನಡೆಗಳಾಗಿದ್ದವು. 1998 ರಿಂದ ಮೊದಲುಗೊಂಡು ಕಳೆದುಕೊಂಡ ಎಲ್ಲಾ ಪ್ರದೇಶಗಳನ್ನು ವಾಪಸ್ಸು ಪಡೆಯಿತು. ಅಂತಿಮವಾಗಿ ಶ್ರೀಲಂಕಾ ಸೈನ್ಯದೊಂದಿಗೆ ನಡೆದ ಸುದೀರ್ಘ ಮತ್ತು ತೀವ್ರ ಹೋರಾಟದ ನಂತರ 2000ದ ಏಪ್ರಿಲ್‌ನಲ್ಲಿ 'ಎಲಿಫೆಂಟ್ ಪಾಸ್' ಎಂಬ ನೆಲೆಯನ್ನು ಎಲ್‌ಟಿಟಿಇಯು ತನ್ನ ವಶಕ್ಕೆ ತೆಗೆದುಕೊಂಡಿತು. ಈ ಕಾಲಾವಧಿಯಲ್ಲಿಯೇ ಅದರ ಮಿಲಿಟರಿ ಶಕ್ತಿಯೂ ಗಣನೀಯವಾಗಿ ಏರಿಕೆಯಾಯಿತು.

2001 ರಲ್ಲಿ ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರದ ನಡುವೆ ಮಾತುಕತೆ ನಡೆಸುವುದಕ್ಕಾಗಿ ನಾರ್ವೆ ಸರ್ಕಾರವನ್ನು ಆಹ್ವಾನಿಸಲಾಯಿತು. ಚರ್ಚೆಯ ಫಲಿತಾಂಶವಾಗಿ ಎರಡೂ ಕಡೆಯಿಂದ ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂಬ 'ಕದನ ವಿರಾಮ'ದ ಒಪ್ಪಂದಕ್ಕೆ ಬರಲಾಯಿತು. ನಾರ್ವೆ ಮತ್ತು ನಾರ್ಡಿಕ್ ದೇಶಗಳು ಜಂಟಿಯಾಗಿ ಕದನ ವಿರಾಮವನ್ನು ಪರಿವೀಕ್ಷಿಸಬೇಕೆಂದು ತೀರ್ಮಾನವೂ ಆಯಿತು. ಆದರೆ, ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರಗಳೆರಡೂ ಈ ಕದನ ವಿರಾಮವನ್ನು ಉಲ್ಲಂಘಿಸುವಂತಹ ಚಟುವಟಿಕೆಗಳನ್ನು ಮುಂದುವರಿಸಿಯೇ ಇದ್ದವು.

ನಂತರ ಶ್ರೀಲಂಕಾದಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ಈ ಸಮಸ್ಯೆಗೆ ಮಧ್ಯಂತರ ಪರಿಹಾರ ಹುಡುಕುವ ಪ್ರಯತ್ನಕ್ಕೆ ಹಿನ್ನಡೆಯುಂಟು ಮಾಡಿದವು. ಶ್ರೀಲಂಕಾದ ಅಧ್ಯಕ್ಷೆ ಚಂದ್ರಿಕಾ ಕುಮಾರ ತುಂಗರವರು 2004 ರಲ್ಲಿ ಅಂದಿನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ಸರ್ಕಾರ ಎಲ್‌ಟಿಟಿಇ ಬಗ್ಗೆ ಮೃದು ಸ್ವಭಾವ ತೋರುತ್ತಿದೆ ಎಂದು ಆಪಾದಿಸಿ ಸರ್ಕಾರವನ್ನು ವಜಾ ಮಾಡಿದರು. ನಂತರ 2005 ರ ನವೆಂಬರ್‌ನಲ್ಲಿ ಅಧ್ಯಕ್ಷ ಪಟ್ಟಕ್ಕೆ ಬಂದ ಮಹಿಂದ ರಾಜಪಕ್ಸೆ ಎಲ್‌ಟಿಟಿಇ ವಿರುದ್ಧ ಕಠೋರ ನಿಲುವು ತಾಳಿದರು. ಅವರ ಪ್ರಧಾನಿ ರತ್ನಸಿರಿ ವಿಕ್ರೆನಾಯಕೆ ಕೂಡ ಅವರನ್ನೇ ಹಿಂಬಾಲಿಸಿದರು. ಹೀಗಾಗಿ ಮತ್ತೆ ಎಲ್‌ಟಿಟಿಇಯು ಸಶಸ್ತ್ರ ಹೋರಾಟವನ್ನು ಮುಂದುವರೆಸುವ ಅನಿವಾರ್ಯತೆಗೆ ಮತ್ತೆ ದೂಡಲ್ಪಟ್ಟಿತು.

ಈಗ ನಾವು ನೋಡುತ್ತಿರುವುದು ಆ ಹೋರಾಟದ ಮುಂದುವರಿದ ಭಾಗ. ಎಲ್ಲಿಯತನಕ ಶ್ರೀಲಂಕಾ ಎಂಬ ಆ ಪುಟ್ಟ ರಾಷ್ಟ್ರದಲ್ಲಿ ತಮಿಳರ ಸ್ವತಂತ್ರ ಮತ್ತು ಸಾರ್ವಭೌಮ ದೇಶವೊಂದು ಅಸ್ತಿತ್ವಕ್ಕೆ ಬರುವುದಿಲ್ಲವೋ ಅಲ್ಲಿಯತನಕ ಈ ರಕ್ತಸಿಕ್ತ ಅಂತರ್ಯುದ್ಧ ನಡೆಯುತ್ತಲೇ ಇರುತ್ತದೆ. ದಶಕಗಳ ತಮ್ಮ ವಿರೋಚಿತ ಹೋರಾಟದಲ್ಲಿ ತಮಿಳು ಹುಲಿಗಳು ಅನೇಕ ಸಾವುನೋವುಗಳನ್ನು ಅನುಭವಿಸಿದ್ದಾರೆ, ಹಲವು ಹಿನ್ನಡೆಗಳನ್ನೂ ಕಂಡಿದ್ದಾರೆ. ಆದರೆ, ಅವೆಲ್ಲಾ ತಾತ್ಕಾಲಿಕವಾಗಿದ್ದವು. ಈಗಲೂ ಸಹ ತಮಿಳು ಹುಲಿಗಳು ಸಾಕಷ್ಟು ಹಿನ್ನಡೆ ಅನುಭವಿಸಿರುವುದು ನಿಜವಾದರೂ ಮುಂದೊಂದು ದಿನ ಮತ್ತೆ ಅವರೆಲ್ಲಾ ಸಿಡಿದೇಳುತ್ತಾರೆ. ಏಕೆಂದರೆ, ಸ್ವಾತಂತ್ರ್ಯಾಕಾಂಕ್ಷೆಯನ್ನು ಮಿಲಿಟರಿ ದಮನದ ಮೂಲಕ ಬಹಳ ದಿನಗಳ ಕಾಲ ಅದುಮಿಡಲು ಸಾಧ್ಯವಿಲ್ಲ.

ಭಾರತದ ರಾಜಕೀಯ ನಾಯಕತ್ವವೂ ಈ ವಿಚಾರದಲ್ಲಿ ಎಚ್ಚರಿಕೆಯಿಂದ ಮತ್ತು ಪ್ರಬುದ್ಧತೆಯಿಂದ ವರ್ತಿಸಬೇಕು. ಶ್ರೀಲಂಕಾದ ತಮಿಳರ ನ್ಯಾಯಯುತ ಹೋರಾಟವನ್ನು ಅರ್ಥಮಾಡಿಕೊಳ್ಳುವ ಬುದ್ಧಿವಂತಿಕೆಯನ್ನು ಪ್ರದರ್ಶಿಸಬೇಕು. ಜೊತೆಗೆ ಶ್ರೀಲಂಕಾ ತಮಿಳರ ಸ್ವಾತಂತ್ರ್ಯಾಕಾಂಕ್ಷೆಯನ್ನು, ಅವರ 'ಸ್ವಯಂ-ನಿರ್ಣಯಾಧಿಕಾರದ ಹಕ್ಕನ್ನು' ಪ್ರತಿಯೊಬ್ಬರೂ ಗೌರವಿಸಬೇಕು. ಅವರ ಮೇಲೆ ಅನ್ಯಾಯದ ಯುದ್ಧ ಸಾರಿರುವ ಸಿಂಹಳೀಯ ರಾಜಪಕ್ಸೆಯ ಕ್ರಮವನ್ನು ಖಂಡಿಸಬೇಕು. ■

ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್

ಸೀತಾರಾಮ್ ಬಂಧನ ಮತ್ತು ಚೆಡ್ಡಿಗಳ ಫ್ಯಾಸಿಸಂ

ಕಳೆದ ಭಾನುವಾರ ಪತ್ರಿಕೆಯ ಕೆಲಸವನ್ನು ಮುಗಿಸಿ ಪುಟಗಳನ್ನು ಪ್ರೆಸ್‌ಗೆ ಕಳುಹಿಸಿ ನಾವು ಆಫೀಸಿನಿಂದ ಹೊರಡಲು ಸಿದ್ಧವಾಗುತ್ತಿದ್ದಾಗ 'ಕರಾವಳಿ ಅಲೆ' ಪತ್ರಿಕಾ ಬಳಗದ ಅಧ್ಯಕ್ಷ ಬಿ.ವಿ. ಸೀತಾರಾಮ್ ಅವರ ಪತ್ನಿ ರೋಹಿಣಿಯವರು ನನ್ನ ಮೊಬೈಲ್‌ಗೆ ಫೋನ್ ಮಾಡಿದರು. "ನಮ್ಮ ಕಾರ್ ಅನ್ನು ಐದಾರು ಪೊಲೀಸ್ ಜೀಪ್‌ಗಳು ಸುತ್ತುವರೆದಿದೆ. ನಾವು ನಮ್ಮ ಊರಿಗೆ ಹೊರಟಿದ್ದೆವು. ಈಗ ಕಾಡಿನ ಮಧ್ಯೆ ನಮ್ಮನ್ನು ನಿಲ್ಲಿಸಿರುವ ಪೊಲೀಸರು ಸೀತಾರಾಮ್ ಅವರನ್ನು ಅರೆಸ್ಟ್ ಮಾಡುವುದಾಗಿ ಹೇಳುತ್ತಿದ್ದಾರೆ" ಎಂದು ರೋಹಿಣಿ ಹೇಳಿದರು. ಸಹಜವಾಗಿಯೇ ಅವರ ದನಿಯಲ್ಲಿ ಭಯ ಮತ್ತು ಆತಂಕ ಹೆಪ್ಪುಗಟ್ಟಿದ್ದವು.

ಆದರೆ ಸೀತಾರಾಮ್ ಅವರ ಬಂಧನ ನನ್ನಲ್ಲಿ ಯಾವ ರೀತಿಯ ಅಚ್ಚರಿಯನ್ನೂ ಮೂಡಿಸಲಿಲ್ಲ, ಏಕೆಂದರೆ ಅವರ ಮೇಲೆ, ಅವರ ಪತ್ರಿಕೆ ಮೇಲೆ ಎರಡು ತಿಂಗಳುಗಳಿಂದ ಸಂಘಪರಿವಾರದ ವಿವಿಧ ಸಂಘಟನೆಗಳು ನಡೆಸುತ್ತಿರುವ ದಾಳಿಗಳು ಅವರ ಬಂಧನದ ಮುನ್ಸೂಚನೆಯನ್ನು ನೀಡಿದ್ದವು. ಇಲ್ಲಿಯ ತನಕ ಸೀತಾರಾಮ್ ಅವರ ಪತ್ರಿಕಾ ಕಚೇರಿ ಮೇಲೆ ದಾಳಿ ಮಾಡಿದವರನ್ನಾಗಲಿ, ಅವರ ಪತ್ರಿಕೆಯ ಪ್ರತಿಗಳನ್ನು ಸುಟ್ಟವರನ್ನಾಗಲಿ, ಪತ್ರಿಕೆಯ ವಿತರಣೆ ಮತ್ತು ಮಾರಾಟ ವ್ಯವಸ್ಥೆಯ ಮೇಲೆ ಹಲ್ಲೆ ಮಾಡಿದವರನ್ನಾಗಲಿ ಬಂಧಿಸುವಲ್ಲಿ ವಿಫಲರಾಗಿರುವ ಪೊಲೀಸರು ಇವತ್ತಲ್ಲ ನಾಳೆ ಸೀತಾರಾಮ್ ಅವರನ್ನು ಯಾವುದೋ ನೆಪದ ಮೇಲೆ ಬಂಧಿಸುತ್ತಾರೆ ಎಂಬ ಅರಿವು ನನಗಲ್ಲ ಸ್ವತಃ ಸೀತಾರಾಮ್ ಅವರಿಗೂ ಇತ್ತು.



ಆದರೆ ಶಾಕ್ ಆಗಿದ್ದು ಮಾರನೆ ದಿನ ಸೀತಾರಾಮ್ ಅವರ ಕೈಗಳಿಗೆ ಕೋಳ ತೊಡಿಸಿ ಅವರೊಬ್ಬ ಭಯೋತ್ಪಾದಕನೋ, ಭೂಗತ ಜಗತ್ತಿನ ಕ್ರಿಮಿಯೋ ಎಂಬಂತೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಮತ್ತು ಸಾರ್ವಜನಿಕವಾಗಿ ಪ್ರದರ್ಶಿಸಿದ್ದು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರ ದಕ್ಷತೆ ಮತ್ತು ಕಾನೂನಿನ ಅರಿವು ಎಂತಹದ್ದು ನೋಡಿ. ಮುಲ್ಕಿ ರಫೀಕ್ ಎಂಬ ಭೂಗತ ಲೋಕದ ಕ್ರಿಮಿನಲ್ ಒಬ್ಬನನ್ನು ಸೆರೆಹಿಡಿದು ತರುವಾಗ ಆತನ ಕೈಗಳಿಗೆ ಕೋಳಗಳನ್ನು ತೊಡಿಸುವುದಿಲ್ಲ, ಅಷ್ಟೇ ಅಲ್ಲ, ಆತ ಸುಲಭವಾಗಿ 'ಎಸ್ಕೇಪ್' ಆಗುವಂತೆ ನೋಡಿಕೊಂಡು ಆನಂತರ ಆತನನ್ನು ನಕಲಿ 'ಎನ್‌ಕೌಂಟರ್'ನಲ್ಲಿ ಕೊಂದು ಹಾಕಿದ್ದರು. ಆದರೆ ಉಗ್ರಗಾಮಿ ಅಲ್ಲದ, ತಪ್ಪಿಸಿಕೊಳ್ಳಲು ಯತ್ನಿಸುವ ಕ್ರಿಮಿನಲ್ ಕೂಡ ಅಲ್ಲದ ಸೀತಾರಾಮ್ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರು ಸರಪಳಿ ಹಾಕಿ ಕರೆತರುತ್ತಾರೆ. ಮಾತ್ರವಲ್ಲ, ಆರೋಪಿಗೆ ಕೋಳಗಳನ್ನು ಹಾಕುವುದು ಆತನ ಮಾನವಹಕ್ಕುಗಳ ಉಲ್ಲಂಘನೆ ಎಂದು ಸ್ವತಃ ಸುಪ್ರೀಂಕೋರ್ಟ್ ಪದೇಪದೇ ಹೇಳಿರುವಾಗಲೂ ಇಂತಹ ದೌರ್ಜನ್ಯವನ್ನು ಪೊಲೀಸರು ಎಸಗುತ್ತಾರೆಂದರೆ ಇವರನ್ನು ಖಾಕಿ ತೊಟ್ಟಿರುವ, ಕಾನೂನನ್ನು ಪಾಲಿಸಬೇಕಿರುವ ಪೊಲೀಸರೆನ್ನಬೇಕೋ ಅಥವಾ ಸಂಘ ಪರಿವಾರದ ಚೆಡ್ಡಿ ತೊಟ್ಟಿರುವ, ಕಾನೂನುಗಳನ್ನು ಉಲ್ಲಂಘಿಸುವುದರಲ್ಲೇ ಮೋಜು ತೆಗೆದುಕೊಳ್ಳುವ ಜನ ಎನ್ನಬೇಕೋ?

ಸೀತಾರಾಮ್ ಅವರ ಮೇಲೆ ನಡೆದ ಸತತ ದಾಳಿ ಮತ್ತು ಬಂಧನದ ದೃಶ್ಯಗಳನ್ನು ನೋಡಿ ನನ್ನಂತೆ ಪತ್ರಿಕೋದ್ಯಮದಲ್ಲಿರುವ ಹಲವು ಮಿತ್ರರು ದಂಗಾದರು. ನಾವೆಲ್ಲ ಚರ್ಚಿಸಿ ಸೀತಾರಾಮ್ ಪರವಾಗಿ ಬೆಂಗಳೂರಿನಲ್ಲಿ ಒಂದು ಪ್ರತಿಭಟನೆಯನ್ನು ಯೋಜಿಸಬೇಕೆಂದು; ಮತ್ತು ಅದಕ್ಕೆ ಮಾಧ್ಯಮದ ಎಲ್ಲರನ್ನು ಕರೆಯಬೇಕೆಂದು ನಿರ್ಧರಿಸಿದೆವು. ರಾಷ್ಟ್ರಮಟ್ಟ ಮತ್ತು ರಾಜ್ಯ ಮಟ್ಟದ ಇಂಗ್ಲಿಷ್, ಕನ್ನಡ ಮತ್ತು ಟಿವಿ ಚಾನೆಲ್‌ನವರನ್ನು ಸಂಪರ್ಕಿಸುವ ಜವಾಬ್ದಾರಿಯನ್ನು ಹಂಚಿಕೊಂಡೆವು. ಕನ್ನಡದ ಪ್ರಮುಖ ಪತ್ರಿಕೆಗಳ ಸಂಪಾದಕರನ್ನು, ಹಿರಿಯ ಪತ್ರಕರ್ತರನ್ನು ಕರೆಯುವ ಜವಾಬ್ದಾರಿಯನ್ನು ನನಗೆ ವಹಿಸಲಾಯಿತು.

ಅವರಿಗೆಲ್ಲ ನಾನು ಹೇಳಿದ್ದು ಒಂದೇ ಮಾತು: "ನಿಮ್ಮ ಅಭಿಪ್ರಾಯ ಮತ್ತು ನಿಲುವುಗಳೊಂದಿಗೆ ನನ್ನ ಸಮ್ಮತಿ ಇಲ್ಲ, ಹಾಗೆಯೇ ನನ್ನ ನಿಲುವು ಮತ್ತು ಧೋರಣೆಗಳನ್ನು ನೀವು ಒಪ್ಪುವುದಿಲ್ಲ ಎಂಬುದೂ ನನಗೆ ಗೊತ್ತು. ಆದರೆ ನೀವಾಗಲಿ, ನಾನಾಗಲಿ ನಮ್ಮ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಇರಬಾರದು ಎಂದು ಯಾವತ್ತೂ ಹೇಳಿದವರಲ್ಲ, ಅಷ್ಟೇ ಅಲ್ಲ, ನಿಮ್ಮ ನಿಲುವುಗಳ ವಿರೋಧಿ ನಾನಾಗಿದ್ದರೂ ಯಾರಾದರೂ ನಿಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಮುಂದಾದರೆ ನಿಮ್ಮ ಪರವಾಗಿ ಮೊದಲ ಸಾಲಿನಲ್ಲೇ ನಿಲ್ಲುವವಳು ನಾನು. ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮಾತ್ರವಲ್ಲ ಭಿನ್ನಮತಕ್ಕೂ ಅವಕಾಶವಿದೆ. ಹಾಗೊಮ್ಮೆ ಭಿನ್ನಮತ ಇರಬಾರದೆಂದರೆ ಭಾರತ ಪ್ರಜಾಪ್ರಭುತ್ವವಲ್ಲದೆ ಫ್ಯಾಸಿಸ್ಟ್ ದೇಶವಾಗುತ್ತದೆ. ಆದ್ದರಿಂದ, ಸೀತಾರಾಮ್ ಅವರ ಮೇಲೆ ನಡೆದಿರುವ ದೌರ್ಜನ್ಯವನ್ನು ಓರ್ವ ವ್ಯಕ್ತಿಯ ಮೇಲಾಗಿರುವ ಪ್ರಕ್ರಿಯೆ ಎಂದು ಭಾವಿಸದೇ, ಇದು ಪ್ರಜಾಪ್ರಭುತ್ವದ ನಾಲ್ಕನೆ ಸ್ತಂಭವಾಗಿರುವ ಸಮೂಹ ಮಾಧ್ಯಮದ ಮೇಲೆ ನಡೆದಿರುವ ಹಲ್ಲೆ ಎಂದೇ ಭಾವಿಸಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸೀತಾರಾಮ್ ಅವರ ಮೇಲೆ ನಡೆದಿರುವ ದಾಳಿ ಮತ್ತು ದೌರ್ಜನ್ಯದ ಹಿಂದೆ ಹಿಂದೂತ್ವವಾದಿಗಳ ಫ್ಯಾಸಿಸಂ ಕೆಲಸ ಮಾಡಿರುವುದು ಸ್ಪಷ್ಟವಾಗಿದೆ. ಇಂತಹ ಕರಾಳತನವನ್ನು ವಿರೋಧಿಸುವ ಪ್ರತಿಭಟನೆಗೆ ಬನ್ನಿ" ಎಂದೆ.

ನನ್ನ ಆಹ್ವಾನ ಕೇಳಿ ಕೆಲವರು ಬರುತ್ತೇವೆಂದು ಹೇಳಿ ಗೈರುಹಾಜರಾದರು; ಕೆಲವರು ತಮ್ಮ ಮ್ಯಾನೇಜ್‌ಮೆಂಟ್ ಅನ್ನು ಕೇಳಿ ನೋಡುತ್ತೇವೆ ಎಂದರು; ಕೆಲವರು "ನೀವು ಪ್ರತಿಭಟನೆ ಮಾಡಿ" ಎಂದು ಕೈ ತೊಳೆದುಕೊಂಡರು; ಆದರೆ ಬಹಳಷ್ಟು ಜನ ಬಂದರು. ಒಂದೇ ದಿನದಲ್ಲಿ ಪ್ರತಿಭಟನೆಯನ್ನು ಏರ್ಪಡಿಸಿದ್ದರಿಂದ ಬಹಳಷ್ಟು ಜನಕ್ಕೆ ತಿಳಿಸಲಾಗಲಿಲ್ಲವಾದರೂ ಸುಮಾರು ನೂರು ಜನ ಬಂದಿದ್ದರು. ಅಷ್ಟೇ ಅಲ್ಲ, ಪ್ರತಿಭಟನೆಯ ನಂತರ ವಿಷಯ ತಿಳಿದವರು "ಗೊತ್ತಿದ್ದರೆ ನಾವೂ ಬರುತ್ತಿದ್ದೆವು" ಎಂದು ಹೇಳಿದರು.

ಅಷ್ಟೇ ಅಲ್ಲ, ಶಿವಮೊಗ್ಗ, ಮೈಸೂರು, ಹಾಸನ, ಉಡುಪಿ ಮತ್ತು ರಾಜ್ಯದ ಇತರೆ ಹಲವಾರು ಕಡೆಗಳಲ್ಲೂ ಮಾಧ್ಯಮದ ಮಿತ್ರರು ಪ್ರತಿಭಟನೆಗಳನ್ನು ಹಮ್ಮಿಕೊಂಡರಲ್ಲದೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೆಂಬಲಿಸುವ ಬಹಳಷ್ಟು ಸಂಘಟನೆಗಳೂ ಪ್ರತಿಭಟನೆಗಳನ್ನು ಹಮ್ಮಿಕೊಂಡವು. ಇವತ್ತಿಗೂ ಅದು ಮುಂದುವರೆಯುತ್ತಿದೆ.

* * * * * *

ಸೀತಾರಾಮ್ ಅವರ ಬಂಧನ ಮತ್ತು ಮಾಧ್ಯಮದವರ ಪ್ರತಿಭಟನೆ ಕುರಿತಂತೆ ರಾಜ್ಯದ ನಂಬರ್ 1 ಪತ್ರಿಕೆ ಎಂದು ಕರೆದುಕೊಳ್ಳುವ ವಿಜಯ ಕರ್ನಾಟಕದ ವರ್ತನೆ ಹಾಸ್ಯಾಸ್ಪದ ಮಾತ್ರವಲ್ಲ ಹೇಸಿಗೆ ಹುಟ್ಟಿಸುವಂತೆಯೂ ಇತ್ತು.

ಪ್ರತಿಭಟನೆಯ ಬಗ್ಗೆ ಒಂದು ಸಾಲಿನ ವರದಿಯನ್ನೂ ಪ್ರಕಟಿಸದ ವಿಕ ತನ್ನ ಗುರುವಾರದ ಸಂಚಿಕೆಯ 'ವಾಚಕರ ವಿಜಯ'ದಲ್ಲಿ ಚಿದಾನಂದ ಶೆಟ್ಟಿ ಎಂಬ ಕಾಪು ನಿವಾಸಿಯ ಪತ್ರವನ್ನು ಪ್ರಕಟಿಸಿತ್ತು.

ವಿಕದ ಹಲವಾರು ಪತ್ರಗಳಂತೆ ಅದು ಕೂಡ ವಿಕ ಕಚೇರಿಯಲ್ಲಿ ಸೃಷ್ಟಿಯಾಗಿತ್ತು, ಅದರ ತಿರುಳು: ಸೀತಾರಾಮ್ ಎಂಬ 'ವರದಿಗಾರ'ನ ಬಂಧನದ ಹಿಂದೆ ನ್ಯಾಯಾಂಗದ ಉಲ್ಲಂಘನೆ ಇದೆ; ಅವರು ನ್ಯಾಯಾಲಯ ಜಾರಿ ಮಾಡಿದ್ದ ಸಮನ್ಸ್‌ಗೆ ಸ್ಪಂದಿಸದೇ ಗೈರುಹಾಜರಾಗಿದ್ದೇ ಕಾರಣ; ಇದರ ವಿರುದ್ಧ ಪ್ರತಿಭಟಿಸಿದವರಿಂದ ಪತ್ರಿಕೋದ್ಯಮದ ಮಾನಹರಣವಾಗುತ್ತದೆ.

ಈ ನಕಲಿ ಪತ್ರಕ್ಕೆ ಸೀತಾರಾಮ್ ಅವರ ಪತ್ನಿ ರೋಹಿಣಿಯವರು ವಿಕಗೆ ಒಂದು ಪತ್ರವನ್ನು ಬರೆದರು. ಆದರೆ ಈ ಅಸಲಿ ಪತ್ರವನ್ನು ಪ್ರಕಟಿಸುವ ಗೋಜಿಗೆ ವಿಕ ಹೋಗಿಲ್ಲ, ಆದ್ದರಿಂದ ರೋಹಿಣಿಯವರ ಪತ್ರದ ಹಲವು ಸಾಲುಗಳನ್ನು ಇಲ್ಲಿ ನೀಡುತ್ತಿದ್ದೇನೆ.

ವಾಚಕರ ವಿಭಾಗದಲ್ಲಿ ಸಂಪಾದಕೀಯ ಮಂಡಳಿಯ ನೀವೇ ಯಾರಾದರೊಬ್ಬರು ಸೀತಾರಾಮ್ ವಿರುದ್ಧ ಪೂರ್ವಗ್ರಹದಿಂದ ಬರೆದಿದ್ದೆಂದು ಭಾಸವಾಗುವ ಬರಹದಲ್ಲಿ ಸೀತಾರಾಮ್ ಮೇಲೆ ಯಾವುದೇ ತಲೆಬುಡವಿಲ್ಲದ ಆರೋಪಗಳನ್ನು ಹೊರಿಸಲಾಗಿದೆ. ಇದರ ಸತ್ಯಾಸತ್ಯತೆ ಬಗ್ಗೆ ಪರಿಶೀಲಿಸಿಕೊಳ್ಳದೇ ಪ್ರಕಟಿಸಿರುವುದು ಪತ್ರಿಕೋದ್ಯಮ ನೀತಿಸಂಹಿತೆ ಬಗ್ಗೆ ಕೊರೆಯುವ ನಿಮ್ಮ ಹುದ್ದೆಯ ಘನತೆಗೆ ತಕ್ಕುದಲ್ಲ, 'ಕರಾವಳಿ ಅಲೆ' ಏನು, ಬಿ.ವಿ. ಸೀತಾರಾಮ್ (ಬಿವಿಸೀ) ಯಾರು ಎಂಬುದು ನಿಮಗೆ ಗೊತ್ತಿಲ್ಲದಿರಲಿಕ್ಕೆ ಸಾಧ್ಯವಿಲ್ಲ, 'ಕರಾವಳಿ ಅಲೆ' ಬಳಗದ ಮುಖ್ಯಸ್ಥರಾಗಿರುವ ಸೀತಾರಾಮ್ ಅವರನ್ನು ಪತ್ರದ ಪ್ರಾರಂಭದಲ್ಲಿ ಪತ್ರಿಕೆಯ 'ಹಾಲಿ ವರದಿಗಾರ' ಎಂದು ಸಂಭೋದಿಸಿರುವ ಚಿದಾನಂದ ಶೆಟ್ಟಿಗೆ ವಿಷಯ ಗೊತ್ತಿಲ್ಲದಿದ್ದರೂ ನಿಮಗಾದರೂ ಗೊತ್ತಿರಬೇಕಿತ್ತಲ್ಲ? ಆದರೂ ವಾಸ್ತವಾಂಶವನ್ನು ಕಡೆಗಣಿಸಿರುವುದರಲ್ಲಿ ನಿಮ್ಮ ಪೂರ್ವಗ್ರಹ ವ್ಯಕ್ತವಾಗುತ್ತದೆ.

ಇರಲಿ. ಉಡುಪಿ ನ್ಯಾಯಾಲಯ ಬಿವಿಸೀ ವಿರುದ್ಧ ಮಾನಹಾನಿ ಮೊಕದ್ದಮೆಯ ಸಂಬಂಧ ಮೂರು ಸಮನ್ಸ್ ನೀಡಿದ್ದಲ್ಲದೆ ವಾರೆಂಟ್ ಹೊರಡಿಸಿದ್ದ ನಂತರ ಜಾಮೀನು ರಹಿತ ವಾರೆಂಟ್ ಹೊರಡಿಸಿದ ಪ್ರಯುಕ್ತ ಶಿರ್ವ ಪೊಲೀಸರು ಅವರನ್ನು ಬಂಧಿಸಿದ್ದು ಎಂಬ ಅಸತ್ಯವನ್ನು ಬಿತ್ತರಿಸಿದ್ದೀರಿ. ವಾಸ್ತವಾಂಶವೆಂದರೆ, ಬಿವಿಸೀಯವರು ಪತ್ರಿಕೆಯ ಸಂಪಾದಕ, ಪ್ರಕಾಶ ಮತ್ತು ಮುದ್ರಕರಲ್ಲ, ಮೊದಲು ಬಂದ ಸಮನ್ಸ್‌ನಲ್ಲಿ ಅವರ ಹೆಸರನ್ನು ಬಿ. ಸೀತಾರಾಮ್ ಎಂದೂ ಅವರ ಹುದ್ದೆಯನ್ನು ಸಂಪಾದಕ, ಪ್ರಕಾಶಕ, ಮುದ್ರಕ ಎಂದೂ ತೋರಿಸಲಾಗಿತ್ತು, ಈ ಸಮನ್ಸ್‌ನಲ್ಲಿ ಸಂಭೋದಿಸುವ ವ್ಯಕ್ತಿಯ ಹೆಸರು ಮತ್ತು ಹುದ್ದೆ ಬಿವಿಸೀಯವರದಕ್ಕೆ ತಾಳಿಕೆಯಾಗುತ್ತಿಲ್ಲವಾದ್ದರಿಂದ ನಾವು ಶಿರ್ವ ಪೊಲೀಸರಿಗೆ ಹಾಗೆ ತಿಳಿಸಿದಾಗ ಅವರು ನ್ಯಾಯಾಲಯಕ್ಕೆ ಸಮನ್ಸ್‌ನ್ನು ಮರಳಿಸುವುದಾಗಿ ಹೇಳಿ ಹೋದರು. ತಕ್ಷಣವೇ ಬಿವಿಸೀಯವರು ಉಡುಪಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಉಡುಪಿ ಜೆಎಂಎಫ್‌ಸಿ ನ್ಯಾಯಾಲಯದಿಂದ ಹೊರಟ ಸಮನ್ಸ್‌ನ್ನು ಬಳಸಿಕೊಂಡು ಪೊಲೀಸರು ತನಗೆ ಕಿರುಕುಳ ಕೊಡುವ ಸಾಧ್ಯತೆ ಇದೆಯೆಂದೂ; ಕಾನೂನಿನ ಪ್ರಕಾರ ಸಂಪಾದಕ, ಮುದ್ರಕ, ಪ್ರಕಾಶಕರಿಗೆ ಮಾತ್ರ ಖಟ್ಲೆಗಳು ಅನ್ವಯವಾಗುವುದರಿಂದ ಮತ್ತು ತಾನು ಇದ್ಯಾವುದೂ ಅಲ್ಲವಾದ್ದರಿಂದ ಕೇಸನ್ನು ವಜಾ ಮಾಡಬೇಕೆಂದೂ ಕೋರಿದ್ದರು. ಈ ಮನವಿಯನ್ನು ಉಡುಪಿ ಜಿಲ್ಲಾ ನ್ಯಾಯಾಧೀಶರು ಬಿವಿಸೀ ಪರ ವಿಲೇವಾರಿ ಮಾಡಿದ್ದರು.

ಇಷ್ಟಾಗಿರುವಾಗ ಉಡುಪಿ ನ್ಯಾಯಾಲಯದಿಂದ ಮತ್ತೆರಡು ಸಮನ್ಸ್ ಮತ್ತು ವಾರೆಂಟ್ ಹಾಗೂ ಜಾಮೀನುರಹಿತ ವಾರೆಂಟ್‌ಗಳು ಬಿವಿಸೀ ವಿರುದ್ಧ ಹೊರಡುವುದೆಂದರೇನು? ಮತ್ತೆರಡು ಸಮನ್ಸ್‌ಗಳು ಮತ್ತು ವಾರೆಂಟ್‌ಗಳು ಹೊರಡಿರುವ ವಿಚಾರ ಬಿವಿಸೀಯವರಿಗೆ ತಿಳಿದೇ ಇರಲಿಲ್ಲ, ಯಾಕೆಂದರೆ ಜಿಲ್ಲಾ ನ್ಯಾಯಾಲಯ ಕೇಸನ್ನು ವಿಲೇ ಮಾಡಿತ್ತು, ಹೀಗಿರುವಾಗ ಅವರು ಸಮನ್ಸ್ ಮನ್ನಿಸಿ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂಬುದು ದುರುದ್ದೇಶಪೂರಿತ ಆರೋಪ.

'ತಪ್ಪನ್ನು ಪತ್ರಕರ್ತ ಮಾಡಿದರೂ ತಪ್ಪೇ' ಎಂಬ ಜಡ್ಜ್‌ಮೆಂಟ್ ಅನ್ನು ಹೊರಡಿಸಿದ್ದೀರಿ. ಆದರೆ ಬಿವಿಸೀ ಮಾಡದ ತಪ್ಪಿಗೆ ಅವರನ್ನು ಹೊಣೆ ಮಾಡಿದ್ದೀರಿ. ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ನೀಡಿದ ಪ್ರಕಟಣೆಯನ್ನು ನೀವು ನೋಡಿರಬಹುದು. ಅದರಲ್ಲಿ ನಮೂದಿಸಿರುವ ಪ್ರಕಾರ ಬಿವಿಸೀ ಮಂಗಳೂರಿನ ಮನೆಯಲ್ಲೇ ಇದ್ದರು. ಪತ್ರಿಕೆಯ ಬಂಡಲುಗಳನ್ನು ಅಪಹರಿಸಿ ಸುಡುತ್ತಿದ್ದವರ ವಿರುದ್ಧ ಮತ್ತು ಪತ್ರಿಕೆಯ ಮಾರಾಟಗಾರರನ್ನು ಬೆದರಿಸುತ್ತಿದ್ದವರ ವಿರುದ್ಧ ಪೊಲೀಸರಿಗೆ ದೂರು ನೀಡಿ ಆ ಬಗ್ಗೆ ಅವರೊಂದಿಗೆ ಸತತವಾಗಿ ವ್ಯವಹರಿಸುತ್ತಿದ್ದರು. ಹಾಗಿರುವಾಗ ದರೋಡೆಕೋರರನ್ನು ಬೆನ್ನತ್ತಿ ಹಿಡಿಯುವ ಕಾರ್ಯಾಚರಣೆಯ ರೀತಿ ಬಿವಿಸೀ ಮತ್ತು ಅವರೊಂದಿಗೆ ಕಾರಿನಲ್ಲಿ ಜತೆಗಿದ್ದ ನನ್ನನ್ನು ಮುಸ್ಸಂಜೆ ಕಾಡಿನ ರಸ್ತೆಯಲ್ಲಿ ಪೊಲೀಸರು ನಾಲ್ಕಾರು ಪೊಲೀಸ್ ಜೀಪುಗಳಲ್ಲಿ ಬೆನ್ನಟ್ಟಿ ಅಡ್ಡಹಾಕಿ ದಿಗ್ಬಂಧನ ವಿಧಿಸಿದ ಉದ್ದೇಶ ಏನು? ಬಿವಿಸೀ ನ್ಯಾಯಾಲಯಕ್ಕೆ ಅಗೌರವ ತೋರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ನ್ಯಾಯಾಲಯ ನಿಂದನೆಯಂತೂ ದೂರವೇ ಉಳಿಯಿತು.

ಬಿವಿಸೀ ಬಂಧನದ ಹಿಂದೆ 'ಕರಾವಳಿ ಅಲೆ'ಯನ್ನು ಹೊಸಕಿ ಹಾಕುವ ಪ್ರಭುತ್ವದ ಷಡ್ಯಂತ್ರ ಅಡಗಿದೆ. ಪತ್ರಿಕೆ ಜಾತ್ಯತೀತ ಮತ್ತು ಪಾರದರ್ಶಕ ಮೌಲ್ಯಗಳನ್ನು ಪ್ರತಿಪಾದಿಸಿದ್ದು ಸಂಘ ಪರಿವಾರಕ್ಕೆ ಅಪಥ್ಯವಾಗಿರುವ ಹಿನ್ನೆಲೆಯಲ್ಲಿ ಪತ್ರಿಕೆಯನ್ನು ಮತ್ತು ಅದರ ಮುಖ್ಯ ಪ್ರಾಯೋಜಕರಾಗಿರುವ ಬಿವಿಸೀಯವರನ್ನು ಮುಗಿಸುವ ಸಂಚು ಇದೆ. ಇವೆಲ್ಲಕ್ಕೂ ಗೃಹಮಂತ್ರಿ ಆಚಾರ್ಯರೇ ಹಿಂದಿನ ಪ್ರೇರಕಶಕ್ತಿಯಾಗಿದ್ದಾರೆ.

ಸಂಘ ಪರಿವಾರ ಪರವಾಗಿರುವ ಪತ್ರಿಕೆಗಳಿಗೊಂದು ನೀತಿ, ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯದ ಪತ್ರಿಕೆಗೆ ಮತ್ತೊಂದು ನೀತಿ ಎಂಬುದು ಬಿವಿಸೀ ಬಂಧನದಿಂದ ಪುರಾವೆಯಾಗಿದೆ. ದುರದೃಷ್ಟವೆಂದರೆ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಒಂದಾದ ವಿಜಯ ಕರ್ನಾಟಕವೂ 'ಕರಾವಳಿ ಅಲೆ' ವಿರೋಧಿಗಳ ಅಭಿಯಾನದ ಭಾಗವಾಗಿ ಕಾರ್ಯಾಚರಿಸುತ್ತಿರುವುದು.

–ರೋಹಿಣಿ

ಈಗ ಹೇಳಿ, ಇದು ವಿಕದಿಂದ ಪತ್ರಿಕೋದ್ಯಮದ ಮಾನಹರಣ ವಲ್ಲದೆ ಇನ್ನೇನು?

* * * * * *



ಕಂಡಹಾಗೆ

■ ಗೌರಿ ಲಂಕೇಶ್

ಸರಣಿ ಬಾಂಬ್ ಸ್ಫೋಟಗಳಿಂದ, ಭಯೋತ್ಪಾದಕರ ದಾಳಿಗಳಿಂದ ಜನರಲ್ಲಿ ಎಂತಹ ಅನುಮಾನ ಮತ್ತು ಸಂಶಯದ ಭಾವನೆ ಮನೆ ಮಾಡಿದೆ ಎಂದರೆ ಅದಕ್ಕೆ ನಾನೂ ತುತ್ತಾದ ಬಗ್ಗೆ ನನಗೆ ಬೇಸರವಾಗಿದೆ.

ಕಳೆದ ಮಂಗಳವಾರ ಹುಬ್ಬಳ್ಳಿಗೆ ಹೋಗಿದ್ದೆ. ಬೆಂಗಳೂರಿಗೆ ವಾಪಸ್ಸು ಬರಲೆಂದು ಸಂಜೆ ಐದಕ್ಕೆ ಕಿತ್ತೂರು ರಾಣಿ ಚೆನ್ನಪ್ಪ ಎಕ್ಸ್‌ಪ್ರೆಸ್ ಹತ್ತಿದ್ದ ನಾನು ಟ್ರೈನಿನಲ್ಲಿ ಓದಲು ಹಲವಾರು ಮ್ಯಾಗಜಿನ್‌ಗಳನ್ನು ಖರೀದಿಸಿದೆ. ಸರಿರಾತ್ರಿ ಮ್ಯಾಗಜಿನ್ ಒಂದು ಬರ್ತಿನ ಸಂದಿಯಿಂದ ಜಾರಿ ಕೆಳಗೆ ಬಿತ್ತು. ಬೆಳಗ್ಗೆ ಟ್ರೈನಿನಿಂದ ಹೊರಟಾಗ ಅದನ್ನು ಎತ್ತಿಕೊಂಡರಾಯಿತು ಎಂದು ಸುಮ್ಮನಾದೆ.

ಬೆಳಗ್ಗೆ ತಲೆ ದಿಂಬು, ಶಾಲ್, ನೀರಿನ ಬಾಟಲ್ ಇತ್ಯಾದಿಗಳನ್ನು ಸೂಟ್‌ಕೇಸಿಗೆ ತುಂಬಿಕೊಳ್ಳುತ್ತಿರುವಾಗ ಬರ್ತ್ ಅಡಿ ಬಿದ್ದಿದ್ದ ಮ್ಯಾಗಜಿನ್ ನೆನಪಾಯಿತು. ಅದಕ್ಕೆ ಹುಡುಕಾಡಲು ಬರ್ತ್ ಅಡಿ ನೋಡಿದಾಗ ಮೂಲೆಯಲ್ಲಿ ಒಂದು ತುಂಬಿದ ಪ್ಲಾಸ್ಟಿಕ್ ಕವರ್ ಕಂಡಿತು. ಅದನ್ನು ಎಳೆಯಲು ಪ್ರಯತ್ನಿಸಿದಾಗ ಅದು ತುಂಬಾ ಭಾರವಾಗಿದ್ದರಿಂದ ಅದನ್ನು ಅಲ್ಲೇ ಬಿಟ್ಟು, ನನ್ನ ಮ್ಯಾಗಜಿನ್ ಅನ್ನು ಬ್ಯಾಗಿಗೆ ತುರುಕಿಕೊಂಡು ಹೊರಟೆ. ಹತ್ತು ದಿನಗಳಿಂದ ಅತಿಯಾದ ಬೆನ್ನು ನೋವಿನಿಂದ ನರಳುತ್ತಿರುವ ನನ್ನನ್ನು ಎರಡು ರಾತ್ರಿಗಳ ರೈಲು ಪ್ರಯಾಣ ಹಿಂಡಿ ಹಿಪ್ಪೆ ಮಾಡಿತ್ತು. ಮನೆ ಸೇರಿದರೆ ಸಾಕೆಂದು ಹಮಾಲಿ ಒಬ್ಬನನ್ನು ಕರೆದು, ಸೂಟ್‌ಕೇಸ್‌ಅನ್ನು ಆತನಿಗೆ ನೀಡಿ ರೈಲು ನಿಲ್ದಾಣದ ದ್ವಾರದತ್ತ ನಡೆಯಲಾರಂಭಿಸಿದೆ.

ಆದರೆ ಅದೆಂತಹದ್ದೋ ಸಂಶಯ ತನ್ನ ತಲೆಯಲ್ಲಿ ಮೊಳಕೆ ಹೊಡೆದಿತ್ತು, ಆ ಬ್ಯಾಗಿನಲ್ಲಿ ಏನಿರಬಹುದು? ಸಂಶಯಾಸ್ಪದ ವಸ್ತುಗಳನ್ನು ಕಂಡರೆ ಪೊಲೀಸರಿಗೆ ತಕ್ಷಣ ತಿಳಿಸಬೇಕಲ್ಲವೇ ಅನ್ನಿಸಿತು.

ಛೆ, ಇದೆಂತಹ ಚಿಂತನೆ. ಅದನ್ನು ಯಾರೋ ಪ್ರಯಾಣಿಕರು ಮರೆತಿರಬಹುದು ಅಷ್ಟೆ. ಅದರ ಬಗ್ಗೆ ಸಂಶಯ ಪಟ್ಟು, ಪೊಲೀಸರನ್ನು ಕರೆಸಿ ದೊಡ್ಡ ರಾದ್ಧಾಂತ ಮಾಡಿಕೊಂಡರೆ ಹಾಸ್ಯಾಸ್ಪದವಾಗಿರುತ್ತದೆ. ಅದೆಲ್ಲ ಯಾಕೆ, ಮನೆ ಸೇರಿ ಸ್ವಲ್ಪ ವಿಶ್ರಾಂತಿ ಪಡೆ ಎಂದೂ ಮನಸ್ಸು ಹೇಳಿತು.


ಎಷ್ಟೇ ಪ್ರಯತ್ನ ಪಟ್ಟರೂ ಆ ಸಂಶಯ ತಲೆಯಿಂದ ಹೊರಗೆ ಹೋಗಲೆ ಇಲ್ಲ. ಆಕಸ್ಮಾತ್ ಅದು ಬಾಂಬ್ ಆಗಿದ್ದರೆ, ನಾನು ಪೊಲೀಸರಿಗೆ ತಿಳಿಸದೆ ತಪ್ಪು ಮಾಡುತ್ತಿದ್ದರೆ, ನನ್ನ ಮೌನದಿಂದ ಯಾರ ಪ್ರಾಣಕ್ಕಾದರೂ ಹಾನಿಯಾದರೆ ಏನು ಗತಿ ಅನ್ನಿಸಿತು. ಯಾತಕ್ಕೂ ಪೊಲೀಸರಿಗೆ ವಿಷಯ ತಿಳಿಸಿದರೆ ಉತ್ತಮ ಅನ್ನಿಸಿತು.

ಮನೆಯ ದಾರಿ ಉದ್ದಕ್ಕೂ ಅದರ ಬಗ್ಗೆಯೇ ಚಿಂತಿಸಿದೆ. ಕೊನೆಗೆ ಹೊಳೆಯಿತು. ಬರ್ತ್ ಅಡಿ ಇದ್ದ ವಸ್ತು ಯಾವುದೋ ಪ್ರಯಾಣಿಕರ ಅಮಾಯಕ ವಸ್ತು ಆಗಿರಲೇಬೇಕು. ಹಾಗೊಮ್ಮೆ ಅದು ಬಾಂಬ್ ಆಗಿದ್ದರೆ ರಾತ್ರಿಯೇ ಅದು ಸ್ಫೋಟಗೊಂಡು ಇಷ್ಟೆಲ್ಲ ಚಿಂತಿಸುವ ಅಗತ್ಯವೇ ನನಗೆ ಎದುರಾಗುತ್ತಿರಲಿಲ್ಲ. ಆ ಕವರ್‌ನಲ್ಲಿ ಏನಿದೆಯೋ ಅದು ರೈಲು ಬೋಗಿಯನ್ನು ಸ್ವಚ್ಛಗೊಳಿಸುವವನ ಕೈಸೇರುತ್ತದೆ ಎಂದು ನಿರ್ಧರಿಸಿದೆ.

ಅನುಮಾನ ಮತ್ತು ಸಂಶಯ ಹೇಗೆ ನಮ್ಮ ನಿತ್ಯಜೀವನದ ಅಂಗವಾಗಿದೆ ಎಂದು ಹೇಳಲು ಮತ್ತು ಕೊಂಚ ನಾಚಿಕೆಯಿಂದಲೇ ಒಪ್ಪಿಕೊಳ್ಳಲು ಇದನ್ನು ಬರೆದಿದ್ದೇನೆ. ■


ಚನ್ನಪಟ್ಟಣದ ಮೇಷ್ಟ್ರು ವೆಂಕಟಯ್ಯನ ಆತ್ಮಹತ್ಯಾ ಯತ್ನ

ನಂಬಿದ ಭಕ್ತನ ಕತ್ತು ಕುಯ್ದ ಮೆಗಾಯೋಗಿ



ವೆಂಕಟಯ್ಯನವರೊಂದಿಗೆ ಯೋಗೇಶ್

ಯೋಗೇಶ್ವರ್ ಮೆಗಾಸಿಟಿ ಹೆಸರಲ್ಲಿ ನೂರಾರು ಜನಕ್ಕೆ ಟೋಪಿ ಹಾಕಿರಬಹುದು. ತನಗೆ ಓಟು ಕೊಟ್ಟವರನ್ನೇ ವಂಚಿಸಿರಬಹುದು. ಆದರೆ ತನ್ನನ್ನು ಈ ಮಟ್ಟಕ್ಕೆ ಬೆಳೆಸಿದ, ತನ್ನ ತಂದೆಯ ಸಮಾನರಾದ ಮುಗ್ಧ ಮೇಷ್ಟ್ರೊಬ್ಬರ ಇಡೀ ಜೀವಮಾನದ ಗಳಿಕೆಯನ್ನೇ ಮುಂಡಾಯಿಸಿದ್ದು ಮಾತ್ರ ಅಕ್ಷಮ್ಯ. ನಂಬಿ ಬಂದ ಪತ್ನಿಯನ್ನೇ ವಂಚಿಸಿದವನಿಗೆ ಸಾಕಿ ಬೆಳೆಸಿದ ಮೇಷ್ಟ್ರು ಯಾವ ಲೆಕ್ಕ?

ಚೆನ್ನಿಗಪ್ಪನನ್ನು ನಂಬಿ ಇದ್ದಬದ್ದ ಆಸ್ತಿಯನ್ನೆಲ್ಲ ಕಳಕೊಂಡು ಬೀದಿಗೆ ಬಿದ್ದ ಕೊರಟಗೆರೆಯ ಮಾಜಿ ಪುರಸಭಾಧ್ಯಕ್ಷ ಚಲಿ ಶೆಟ್ಟಿ ಉರ್ಫ್ ವೆಂಕಟಾಚಲಪತಿ ಕೊನೆಗೆ ಆತ್ಮಹತ್ಯೆ ಮಾಡಿಕೊಂಡ. ಇದು ಅಂಥದ್ದೇ ಮತ್ತೊಂದು ಕಥೆ. ನಿನ್ನೆಮೊನ್ನೆಯ ತನಕ ಚನ್ನಪಟ್ಟಣದ ಶಾಸಕ ಅರ್ಥಾತ್ ಮೆಗಾಸಿಟಿ ಧೀರ ಯೋಗೇಶ್ವರ್ ಪಾಲಿಗೆ ಜನ್ಮಕೊಟ್ಟ ತಂದೆಗಿಂತಲೂ ಮಿಗಿಲಾಗಿದ್ದ ಕೊಟ್ಟಗನ ಹೊಸಳ್ಳಿಯ ಮೇಷ್ಟ್ರು ಎಚ್.ಕೆ. ವೆಂಕಟಯ್ಯ ಕಳೆದ ನವೆಂಬರ್ 22ರ ಬೆಳಿಗ್ಗೆ ಕ್ರಿಮಿನಾಶಕ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಅದೃಷ್ಟವಶಾತ್ ಆಸ್ಪತ್ರೆ ಸೇರಿ ಬದುಕುಳಿದದ್ದು ಮತ್ತು ಆತ್ಮಹತ್ಯಾ ಯತ್ನಕ್ಕೂ ಮುನ್ನ ಎಂಎಲ್ಎ ಯೋಗೇಶ್ವರ್ ತನ್ನನ್ನು ವಂಚಿಸಿ ಬೀದಿಪಾಲು ಮಾಡಿದ ಇಡೀ ಕಥೆಯನ್ನು ಬರೆದಿಟ್ಟಿದ್ದು ಲ್ಯಾಂಡ್ ಬ್ರೋಕರ್‌ಗಳು, ಗಣಿಕಳ್ಳರೆಲ್ಲಾ ರಾಜಕೀಯಕ್ಕೆ ಬಂದರೆ ಏನಾಗುತ್ತದೆ ಎಂಬುದಕ್ಕೆ ನಿದರ್ಶನದಂತಿದೆ.


ಪುಟ್ಟಮಾರೇಗೌಡ

ಚೆನ್ನಿಗಪ್ಪನನ್ನು ರಾಜಕೀಯವಾಗಿ ಉದ್ಧಾರ ಮಾಡಲು ಹೋಗಿ ಹೆಣವಾದ ಚಲಿಶೆಟ್ಟಿಗೂ ಮೆಗಾಸಿಟಿ ಧೀರ ಯೋಗೇಶ್ವರನನ್ನು ಸಾಕಿ ಬೆಳೆಸಿದ ತಪ್ಪಿಗೆ ಬೀದಿಗೆ ಬಿದ್ದ ಮೇಷ್ಟ್ರು ವೆಂಕಟಯ್ಯನವರಿಗೂ ಹೆಚ್ಚು ವ್ಯತ್ಯಾಸವೇನಿಲ್ಲ. ಇಡೀ ಚನ್ನಪಟ್ಟಣಕ್ಕೆ ಚನ್ನಪಟ್ಟಣವೇ ಇವತ್ತು ವೆಂಕಟಯ್ಯನವರಿಗಾದ ದುರ್ಗತಿಗೆ ಮರುಗುತ್ತಿದೆ. ಸ್ವಂತ ಅಪ್ಪನೇ ಮನೆಯಿಂದ ಹೊರದಬ್ಬಿದಾಗಲೂ ಯೋಗೇಶ್ವರನನ್ನು ಕೈಹಿಡಿದು ಕಾಪಾಡಿದ್ದು ಕೊಟ್ಟಗನ ಹೊಸಳ್ಳಿಯ ಮೇಷ್ಟ್ರು ಎಚ್. ಕೆ. ವೆಂಕಟಯ್ಯ.



ಇಡೀ ಮೆಗಾಸಿಟಿ ಕರ್ಮಕಾಂಡ, ಯೋಗೇಶ್ವರ್‌ನ ರಾಜಕೀಯ ಅಸ್ತಿತ್ವ ಮತ್ತು ಆತನ ಸಿನಿಮಾ ಖಯಾಲಿಯನ್ನು ಹತ್ತಿರದಿಂದ ಬಲ್ಲ ಪ್ರತಿಯೊಬ್ಬರಿಗೂ ಚನ್ನಪಟ್ಟಣದ ಮೇಷ್ಟ್ರು ವೆಂಕಟಯ್ಯನವರ ಪರಿಚಯವಿದ್ದೇ ಇರುತ್ತದೆ. ಯೋಗೇಶ್ವರನ ರೈಟ್‌ಹ್ಯಾಂಡ್ ಚಿಕ್ಕಣ್ಣ, ತಮ್ಮ ಗಂಗಾಧರ, ಮತ್ತೊಬ್ಬ ತಮ್ಮ ರಾಜೇಶ, ತಂಗಿ ಗಂಡ ಮಾದೇವಯ್ಯ ಮುಂತಾದವರೆಲ್ಲ ಹೇಗೆ ಮೆಗಾಸಿಟಿ ವಂಚನೆಯ ಆಧಾರಸ್ತಂಭಗಳೋ ಹಾಗೇ ಯೋಗೇಶ್ವರನ ಬಹುಪಾಲು ಲ್ಯಾಂಡ್‌ದೀಲುಗಳಿಗೆ ಬೇನಾಮಿಯಾಗಿದ್ದುದು ಇದೇ ವೆಂಕಟಯ್ಯ.

ಬ್ಯಾಂಕ್ ಕಾಲೋನಿಯ ಕಾಯಿಮಂಡಿ

ಯೋಗೇಶ್ವರ್ ಹುಟ್ಟೂರು ಚನ್ನಪಟ್ಟಣದ ಚಕ್ಕೆರೆಯ ಪಕ್ಕದ್ದೇ ಕೊಟ್ಟಗನ ಹೊಸಳ್ಳಿ. ಯೋಗೇಶ್ವರ್ ತಂದೆ ಪುಟ್ಟಮಾದೇಗೌಡ ಮತ್ತು ಕೊಟ್ಟಗನ ಹೊಸಳ್ಳಿಯ ಮೇಷ್ಟ್ರು ಎಚ್.ಕೆ. ವೆಂಕಟಯ್ಯ ಇಬ್ಬರೂ ಚಕ್ಕೆರೆಯ ಸರ್ಕಾರಿ ಶಾಲೆಯಲ್ಲಿ ಪಾಠ ಮಾಡಿಕೊಂಡಿದ್ದ ಸಹೋದ್ಯೋಗಿಗಳು. 1985ರ ಸುಮಾರಿಗೆ ಬೆಂಗಳೂರಿನ ಹನುಮಂತನಗರದಲ್ಲಿ ತೆಂಗಿನಕಾಯಿ ಮಂಡಿ ಆರಂಭಿಸಿದ್ದ ಯೋಗೇಶ್ವರನ ಚಂಗಲುಬುದ್ಧಿಗೆ ಸ್ವತಃ ತಂದೆಯೇ ಕಾಯಿ ಕೊಡುತ್ತಿರಲಿಲ್ಲ, ಊರಿನ ಯಾರೂ ನಂಬುತ್ತಿರಲಿಲ್ಲ, ಇಂಥ ಸ್ಥಿತಿಯಲ್ಲಿದ್ದ ಯೋಗಿಯ ಕೈಹಿಡಿದ ಮೇಷ್ಟ್ರು ಎಚ್.ಕೆ.ವೆಂಕಟಯ್ಯ ಲೋಡುಗಟ್ಟಲೆ ಕಾಯಿಗಳನ್ನು ಸಾಲಕ್ಕೆ ಕೊಟ್ಟರು.

ಪಕ್ಕದ ತೋಟದ ರಾಮೇಗೌಡರ ಮಗ ಪಟೇಲ್ ವೆಂಕಟರಮಣಪ್ಪ ಪುಟ್ಟಸ್ವಾಮಿಯ ಮಗ ಮರಿ ಗಜ ಮುಂತಾದ ಆಜೂಬಾಜಿನ ರೈತರಿಂದಲೂ ತಾವೇ ಜಾಮೀನಾಗಿ ಕಾಯಿ ಕೊಡಿಸಿದ ವೆಂಕಟಯ್ಯ ಆ ಹೊತ್ತಿಗಾಗಲೇ ಚನ್ನಪಟ್ಟಣದ ಯಶಸ್ವಿ ಕೃಷಿಕರಂತಿದ್ದರು. ಹತ್ತಾರು ಎಕರೆ ತೆಂಗಿನತೋಟ, ಬಾಳೆತೋಟವಷ್ಟೇ ಅಲ್ಲದೆ ತಾಲ್ಲೂಕಿನ ಉದ್ದವೂ ಅವರಿಗೆ ಸಂಬಂಧಿಗಳಿದ್ದರು. ಇದನ್ನೇ ಎನ್‌ಕ್ಯಾಷ್ ಮಾಡಿಕೊಂಡು ಸೈಟು ದಂಧೆಗೆ ಕೈಯಿಟ್ಟರೆ ರೊಕ್ಕ ಬಾಚಬಹುದೆಂಬುದು ಯೋಗಿಯ ಹುನ್ನಾರ. ಆಗಷ್ಟೇ ಬೆಂಗಳೂರಿನಲ್ಲಿ ಲ್ಯಾಂಡ್ ರೇಟು ಕುದುರುತ್ತಿತ್ತು. 1989ರತನಕ ಬ್ಯಾಂಕ್ ಕಾಲೋನಿಯ ತೆಂಗಿನಕಾಯಿ ಮಂಡಿ, ಸಿನಮಾ ಖಯಾಲಿ ಮತ್ತು ಸೇಠೂ ಹುಡುಗಿಯ ಜೊತೆ ಪ್ರೇಮ ಪಜೀತಿಗೆ ಬಿದ್ದಿದ್ದ ಯೋಗಿಗೆ ಅದ್ಯಾರು ಐಡಿಯಾ ಕೊಟ್ಟರೋ!

1990 ರಲ್ಲಿ ಚನ್ನಪಟ್ಟಣದಲ್ಲೊಂದು ಆಫೀಸ್ ಮಾಡಿಕೊಂಡು ತಿಂಗಳಿಗೆ ಸಾವಿರ ರೂಪಾಯಿ ಕಟ್ಟಿದವರಿಗೆಲ್ಲ ಸೈಟು ಕೊಡ್ತೀನಿ ಎಂದು ಶುರುಹಚ್ಚಿಕೊಂಡೇ ಬಿಟ್ಟ. ಅದಕ್ಕೆಂದು ಬಿಡದಿ ಪೋಲೀಸ್ ಸ್ಟೇಷನ್ ಹಿಂಭಾಗದಲ್ಲಿ ಎರಡೆಕರೆ ಭೂಮಿಯನ್ನು ಖರೀದಿಸಿದ್ದು . ಅದೇ ಸರಿಸುಮಾರು ಐವತ್ತು ಸೈಟುಗಳಾದವು. ಆದರೆ ಇಷ್ಟೆಲ್ಲಕ್ಕೂ ಬಂಡವಾಳ ಹಾಕಿದ್ದು ಮಾತ್ರ ಮೇಷ್ಟ್ರು ವೆಂಕಟಯ್ಯನವರೇ.


ಆ ಕಾಲಕ್ಕೇ ಎಂಟು ಲಕ್ಷ ರೂಪಾಯಿಗಳಷ್ಟನ್ನು ಯೋಗೇಶ್ವರನ ಕೈಗಿತ್ತು ಆತನ ಇಡೀ ರಿಯಲ್ ಎಸ್ಟೇಟ್ ದಂಧೆಗೆ ಬುನಾದಿ ಹಾಕಿಕೊಟ್ಟ ವೆಂಕಟಯ್ಯನವರಿಗೆಂದು ಯೋಗೇಶ್ ಇಪ್ಪತ್ತೆರಡು ಸೈಟುಗಳನ್ನು ಕೊಟ್ಟ. ಮುಂದೆ 1992-93ರಲ್ಲಿ ಬಿಡದಿ ರೈಲ್ವೆ ಸ್ಟೇಷನ್ ಹಿಂಭಾಗದಲ್ಲಿ ಮತ್ತೆ ನಾಲ್ಕೆಕರೆ ಭೂಮಿ ಖರೀದಿಸಿ ಅದನ್ನು ಚಿಕ್ಕೂರು ದೊಡ್ಡಿ ಕರಿಯಪ್ಪ, ಇಟ್ಟಮಡು ಬಸವರಾಜ ಮತ್ತು ಮೇಷ್ಟ್ರು ವೆಂಕಟಯ್ಯನವರ ಹೆಸರಿಗೇ ನೋಂದಾಯಿಸಿದ್ದ. ಎಕರೆಗೆ 23 ಸೈಟುಗಳಂತೆ ವಿಭಜಿಸಿ ಬಂದ ದುಡ್ಡಲ್ಲಿ ವೆಂಕಟಯ್ಯನವರ ಅಸಲಾದ ನಾಲ್ಕು ಲಕ್ಷದ ಜೊತೆಗೆ ಲಾಭದ ಬಾಬತ್ತು ಆರು ಲಕ್ಷವನ್ನೂ ಕೊಟ್ಟ.

ಹತ್ತು ಲಕ್ಷದ ಟೋಪಿ


ಚನ್ನಪಟ್ಟಣದಲ್ಲಿ ಯೋಗೇಶ್ವರ್ ಖರೀದಿಸಿರುವ ಬಂಗಲೆ

ಈ ಪಾಟಿ ಲಾಭ ನೋಡಿದ ವೆಂಕಟಯ್ಯ ಹಿಗ್ಗಾಮುಗ್ಗಾ ಖುಷಿಪಟ್ಟಿದ್ದೇ ಯೋಗೇಶನ ಮೂರನೇ ಲ್ಯಾಂಡ್ ದೀಲಿಗೆ ಕಣ್ಣುಮುಚ್ಚಿ ಹತ್ತು ಲಕ್ಷ ಕೊಟ್ಟರು. ಅದು ಬಿಡದಿ ಸ.ನಂ. 1/1ರಲ್ಲಿದ್ದ ಎಂಟೆಕರೆ ಜಾಗ. ಎಕರೆಗೆ 23 ಸೈಟುಗಳಂತೆ ಒಟ್ಟು 160 ಸೈಟುಗಳಾದವು. ತಮ್ಮ ಅಳಿಯ ಟಿ. ರಾಮಚಂದ್ರರಿಂದ ಹತ್ತು ಲಕ್ಷ ರೂ. ಸಾಲ ಎತ್ತಿಕೊಟ್ಟಿದ್ದರು. ಹಕೀಕತ್ತೇನೆಂದರೆ ಹಿಂದಿನ ಎರಡು ದೀಲುಗಳಲ್ಲಿ ವೆಂಕಟಯ್ಯನವರ ಹೆಸರಲ್ಲೇ ಜಮೀನು ಖರೀದಿಸುತ್ತಿದ್ದ ಯೋಗೇಶ್ವರ್ ಈ ಬಾರಿ ಉಪಾಯವಾಗಿ ತನ್ನ ಹೆಸರಿಗೇ ಖರೀದಿಸಿಕೊಂಡಿದ್ದ!

ಅದೇ ಹೊತ್ತಿಗೆ ಶೇಷಗಿರಿಹಳ್ಳಿ ಬಳಿ ಯೋಗೇಶ್ವರನ ಮೆಗಾಸಿಟಿ ಯೋಜನೆ ಬೇರೆ ತಲೆ ಎತ್ತಿತ್ತು. ವಜ್ರಗಿರಿ ಟೌನ್‌ಷಿಪ್ ಹೆಸರಿನಲ್ಲಿ ಕಂಡಕಂಡ ರೈತರ ಜಮೀನೆಲ್ಲಾ ಅಗದೀ ದರಕ್ಕೆ ಖರೀದಿಸಲಾರಂಭಿಸಿದ ಯೋಗೇಶ್ವರ್ ಮೆಗಾಸಿಟಿಗೆ ನೀವೇ ಪಾರ್ಟ್‌ನರ್ ಎಂದು ವೆಂಕಟಯ್ಯನವರನ್ನು ನಂಬಿಸಿಬಿಟ್ಟ. ಬಾಲಗಂಗಾಧರನಾಥ ಸ್ವಾಮೀಜಿ, ವರನಟ ರಾಜ್‌ಕುಮಾರ್, ಆಗ ಮುಖ್ಯಮಂತ್ರಿಯಾಗಿದ್ದ ದೇವೇಗೌಡ ಇತ್ಯಾದಿ ಘಟಾನುಘಟಿಗಳನ್ನೆಲ್ಲಾ ಬಿಡದಿಗೆ ಕರೆಸಿ ಅದ್ದೂರಿಯಾಗೇ ಸನ್ಮಾನಿಸಿದ ಯೋಗೇಶ್ವರ್ ಸಾವಿರಾರು ಜನಕ್ಕೆ ಬಾಡೂಟ ಹಾಕಿಸಿ ಮೆಗಾಸಿಟಿಗೆ ಚಾಲನೆ ಕೊಟ್ಟದ್ದು ಮೇಷ್ಟ್ರು ವೆಂಕಟಯ್ಯನವರ ಕಣ್ಣು ಕುಕ್ಕಿತ್ತು.


ವಿಶ್ವನಾಥ್

ಹೇಗಾದರೂ ನಾನೇ ಮೆಗಾಸಿಟಿಗೆ ಪಾರ್ಟ್‌ನರ್ ತಾನೆ? ಈಗಾಗಲೇ ಬಿಡದಿಯ ಎಂಟೆಕರೆ ಲೇಔಟ್‌ಗೆಂದು ಕೊಟ್ಟಿದ್ದ ಹತ್ತು ಲಕ್ಷವಷ್ಟೇ ಅಲ್ಲದೆ ಸೊಸೈಟಿ ರಾಮಕೃಷ್ಣ ಮತ್ತು ಚಿಕ್ಕಮಗಳೂರಿನ ವಿಶ್ವನಾಥನಿಂದ ತಲಾ ಎರಡು ಲಕ್ಷದಂತೆ ಸಾಲ ಎತ್ತಿ ಮತ್ತೆ ನಾಲ್ಕು ಲಕ್ಷ ಒಟ್ಟುಮಾಡಿ ಯೋಗಿಯ ಕೈಗಿತ್ತರು. ಚನ್ನಪಟ್ಟಣ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಪುಟ್ಟಲಿಂಗಯ್ಯ ತಮ್ಮ ಟ್ರಾಕ್ಟರ್‌ನ ಆರ್‌ಸಿ ಬುಕ್ ಅಡವಿಟ್ಟುಕೊಟ್ಟ ಒಂದೂವರೆ ಲಕ್ಷ, ತಮ್ಮ ನಾನೂರು ಗ್ರಾಂ ಚಿನ್ನವನ್ನು ಗಿರವಿಗಿಟ್ಟು ತಂದ ನಾಲ್ಕು ಲಕ್ಷ ಇತ್ಯಾದಿಗಳನ್ನೆಲ್ಲಾ ಸೇರಿಸಿ ವಜ್ರಗಿರಿ ಟೌನ್‌ಷಿಪ್‌ಗೆ ಅಂತಲೇ ಮತ್ತೆ ಹದಿನಾರೂವರೆ ಲಕ್ಷ ರೂಪಾಯಿಗಳನ್ನು ಒಟ್ಟು ಮಾಡಿ ಯೋಗಿಯ ಕೈಗಿತ್ತರು ವೆಂಕಟಯ್ಯ.

ಒಟ್ಟು 56 ಲಕ್ಷ

ಅಲ್ಲಿಗೆ ಹಿಂದೆ ಬಿಡದಿ ಲೇಔಟಿಗೆಂದು ಕೊಟ್ಟ ಹತ್ತು ಲಕ್ಷ ಮತ್ತು ಈಗ ವಜ್ರಗಿರಿಗೆಂದು ಸಾಲ ಎತ್ತಿಕೊಟ್ಟ ಹದಿನಾರೂವರೆ ಲಕ್ಷ ಸೇರಿ ಯೋಗೇಶ್ವರನ ಮೆಗಾಸಿಟಿಗೆ ಅಂತಲೇ ವೆಂಕಟಯ್ಯ ಒಟ್ಟು ಇಪ್ಪತ್ತಾರೂವರೆ ಲಕ್ಷ ಕೊಟ್ಟಂತಾಗಿತ್ತು. ಹಾಗಂತ ಯೋಗೇಶ್ವರ್ ಅಷ್ಟಕ್ಕೇ ಬಿಡಬೇಕಲ್ಲ. 'ಮೇಷ್ಟ್ರೇ.... ಇದೇನು ಕಾಂಜಿಪಿಂಜಿ ವ್ಯವಹಾರ ಅಂದ್ಕೊಂಡ್ರಾ? ಕೋಟಿ ಕೋಟಿ ಲಾಭ ಕೊಡೋ ಮಾಸ್ಟರ್ ಪ್ಲಾನು. ನೀವೇ ಮೇಜರ್ ಪಾರ್ಟ್‌ನರು, ಒಂದು ಕೆಲ್ಸ ಮಾಡಿ; ನಿಮ್ಮ ನೆಲ್ಲಿಗುಡ್ಡದ ಕೆರೆ ಬಳಿ ಇರೋ ಎರಡೆಕರೆನಾ 16 ಲಕ್ಷಕ್ಕೆ ಮಾರಿಬಿಡಿ. ಈಗಾಗಲೇ ಬಿಡದಿ ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿ ಇಪ್ಪತ್ತು ಸೈಟಿದೆಯಲ್ಲ ಅದನ್ನೂ ನನ್ನ ಹೆಸರಿಗೇ ಮಾಡಿ. ಅದಕ್ಕೆ ಅಂತಲೇ 14 ಲಕ್ಷ ಕೊಡ್ತೀನಿ. ಅಲ್ಲಿಗೆ ಈಗಾಗಲೇ ನೀವು ಕೊಟ್ಟ ಇಪ್ಪತ್ತಾರೂವರೆ ಲಕ್ಷ, ನೆಲ್ಲಿಗುಡ್ಡ ಜಮೀನು ಮಾರಿದ 16 ಲಕ್ಷ ಮತ್ತು ಬಿಡದಿಯ 20 ಸೈಟಿನ ದುಡ್ಡು 14 ಲಕ್ಷ ಸೇರಿದರೆ ಮೆಗಾಸಿಟಿ ಪ್ರಾಜೆಕ್ಟಿಗೆ ಅಂತಲೇ ನೀವು ಒಟ್ಟೂ ಐವತ್ತಾರೂವರೆ ಲಕ್ಷ ರೂಪಾಯಿ ಬಂಡವಾಳ ಹಾಕಿದಂತಾಗುತ್ತದೆ....!'

ಇದು ಅವತ್ತು ಯೋಗೇಶ್ ಹೊಡೆದ ಡೈಲಾಗು. ನಂಬಿದ ಮೇಷ್ಟ್ರು ತಮ್ಮ ನೆಲ್ಲಿಗುಡ್ಡದ ಎರಡೆಕರೆಯನ್ನು 16 ಲಕ್ಷಕ್ಕೆ ಮಾರಿ ಅಷ್ಟೂ ದುಡ್ಡನ್ನು ಯೋಗಿಯ ಕೈಗಿತ್ತರು. ಹಾಗೇ ಬಿಡದಿ ಪೊಲೀಸ್ ಸ್ಟೇಷನ್ ಹಿಂಭಾಗದ 20 ಸೈಟುಗಳನ್ನೂ ಯೋಗೇಶ್ ಹೆಸರಿಗೇ ಬರೆದು ಕೊಟ್ಟರೆ ಇದಕ್ಕೆ ಪ್ರತಿಯಾಗಿ ವಜ್ರಗಿರಿ ಟೌನ್‌ಶಿಪ್‌ನಲ್ಲಿ ಐದೆಕರೆಯನ್ನು ಬರೆದುಕೊಡುತ್ತೇನೆಂದು ಯೋಗೇಶ್ವರ್ ಮಾತು ಕೊಟ್ಟಿದ್ದನಲ್ಲ; ಮೂರು ವರ್ಷಗಳಾದರೂ ಬರೆದು ಕೊಡಲೇ ಇಲ್ಲ.

ಅದೇ ಹೊತ್ತಿಗೆ ರಾಜರಾಜೇಶ್ವರಿನಗರದ ಕೆಂಚೇನಹಳ್ಳಿಯ ಬಳಿ ಕೋರ್ಟಿನಲ್ಲಿ ವ್ಯಾಜ್ಯವಿದ್ದ ಎರಡೆಕರೆ ಭೂಮಿ ತೋರಿಸಿ ನಿಮಗಿದರಲ್ಲಿ ಅರ್ಧ ಎಕರೆ ಕೊಡ್ತೀನಿ ಎಂದು ಮತ್ತೆ ಎರಡು ಲಕ್ಷ ಕಿತ್ತಿದ್ದ ಯೋಗೇಶ್ವರ್. ವಿಚಿತ್ರವೆಂದರೆ ಕಾಸುಕೊಟ್ಟು ಸಿಕ್ಕಿಬಿದ್ದಿದ್ದ ಮೇಷ್ಟ್ರು ವೆಂಕಟಯ್ಯ ಹೆಚ್ಚು ದಬಾಯಿಸುವಂತಿರಲಿಲ್ಲ. ಯಾವುದಕ್ಕೂ ಲಿಖಿತ ದಾಖಲೆಯಿರಲಿಲ್ಲ. ಎಲ್ಲವೂ ನಂಬಿಕೆಯ ಆಧಾರದ ಮೇಲೆ ನಡೆದ ವ್ಯವಹಾರವಾಗಿತ್ತು. ಸೈಟು ಕೊಡುತ್ತೇನೆಂದು ನೂರಾರು ಜನಕ್ಕೆ ಕೈ ಎತ್ತಿದಂತೆ ತನಗೆ ಯೋಗೇಶ್ವರ್

▶▶▶

ಆರ್‌ಟಿಓ ನೌಕರಿಗೆ ಮತ್ತೆ ಐದು ಲಕ್ಷ!

ಯೋಗೇಶ್ವರ್ ಎಂಥಾ ವಂಚಕನೆಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೆ. ವಜ್ರಗಿರಿಗೆಂದು ಐವತ್ತಾರೂವರೆ ಲಕ್ಷ ಕೊಟ್ಟಿದ್ದೂ ಅಲ್ಲದೇ ಮೇಷ್ಟ್ರು ವೆಂಕಟಯ್ಯ ಯೋಗೇಶ್ವರ್‌ಗೆ ಮತ್ತೊಂದು ದೀಲು ಕೊಡುತ್ತಾರೆ. ಅದು ತಮ್ಮ ಮೊಮ್ಮಗ ಶ್ರೀನಿವಾಸ್‌ಗೆ ಆರ್‌ಟಿಓ ಆಗಿ ಕೆಲಸ ಕೊಡಿಸುವ 5 ಲಕ್ಷದ ದೀಲು.

ಎಸ್ಸೆಂ ಕೃಷ್ಣನ ಕಾಲದಲ್ಲಿ ಸಾರಿಗೆ ಸಂಸ್ಥೆಯ ಮುಖ್ಯಸ್ಥರಾಗಿ ನೇಮಕಗೊಂಡ ಆರ್.ವಿ. ದೇವರಾಜ್‌ಗೆ ಹೇಳಿಸಿ ಖಂಡಿತ ಕೆಲಸ ಕೊಡಿಸ್ತೀನಿ ಎಂದೇ ಪೂರ್ತಿ ಐದು ಲಕ್ಷವನ್ನು ಜೇಬಿಗಿಳಿಸಿದ ಯೋಗೇಶ್ವರ್ ಪೂರ್ತಿ ವರ್ಷಕ್ಕಾದರೂ ಕೆಲಸ ಕೊಡಿಸಲೇ ಇಲ್ಲ. ಕೊನೆಗೆ ಕೃಷ್ಣರ ಸರ್ಕಾರವೇ ನಿಕಾಲಿಯಾಗಿ ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಹೋಗಲಿ ಕೊಟ್ಟ ದುಡ್ಡಾದರೂ ಕೊಡಪ್ಪಾ ಎಂದರೆ ಯೋಗೇಶ್ ಆಗೊಮ್ಮೆ ಈಗೊಮ್ಮೆ ಇಪ್ಪತ್ತೋ ಮುವತ್ತೋ ಸಾವಿರದಂತೆ ಒಟ್ಟೂ ಮೂರು ಲಕ್ಷ ಕೊಟ್ಟನೇ ಹೊರತು ಉಳಿಕೆ ಎರಡು ಲಕ್ಷವನ್ನು ಈತನಕ ಕೊಟ್ಟಿಲ್ಲ.

ಕೇಳಿದರೆ ವಜ್ರಗಿರಿಗೆಂದೇ ಐವತ್ತಾರೂ ಲಕ್ಷ ಕೊಟ್ಟಿದ್ದೀಯಲ್ಲಾ; ಪುಡಿ ಎರಡು ಲಕ್ಷ ಯಾವ ಲೆಕ್ಕ? ಎನ್ನುತ್ತಾನೆ.

ವಂಚಿಸಲಾರ ಎಂದೇ ನಂಬಿದ ವೆಂಕಟಯ್ಯ 1999 ರ ಚುನಾವಣೆಯಲ್ಲಿ ಯೋಗೇಶ್ವರ್‌ನನ್ನು ಪಕ್ಷೇತರನಾಗಿಯೇ ಟಿವಿ ಗುರುತಿನಲ್ಲಿ ಗೆಲ್ಲಿಸಿಕೊಟ್ಟರು. ಮುಂದೆ 2004 ರಲ್ಲಿ ಕಾಂಗ್ರೆಸ್ ಟಿಕೆಟ್ ಮೇಲೆ ನಿಂತಾಗಲೂ ಇಡೀ ಚನ್ನಪಟ್ಟಣವನ್ನು ಸುತ್ತಿ ಓಟು ದೊರಕಿಸಿಕೊಟ್ಟರು. ಸತತ ಮೂರನೇ ಬಾರಿ ಅಂದರೆ 2008 ರಲ್ಲಿ ಯೋಗೇಶ್ ಚನ್ನಪಟ್ಟಣದಲ್ಲಿ ಗೆದ್ದಾಗಲೂ ಜೆಡಿಎಸ್‌ನ ಲಿಕ್ಕರ್ ಕುಳ ಅಶ್ವತ್ಥನ ವಿರುದ್ಧ ಇನ್ನಿಲ್ಲದಂತೆ ಪ್ರಚಾರಗೈದರು. ಯೋಗೇಶ್ ಗೆಲುವಿಗಾಗಿ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತು 25 ಕಿ.ಮೀ.ಗಳಷ್ಟು ತಿರುಮಲದ ಬೆಟ್ಟವನ್ನು ಬರಿಗಾಲಲ್ಲೇ ನಡೆದು ಹರಕೆ ತೀರಿಸಿಬಂದರು.

ದಿವಾಳಿಯಾದ ಮೆಗಾಸಿಟಿ

ವಿಚಿತ್ರವೆಂದರೆ ಮೂರನೇ ಬಾರಿ ಗೆದ್ದಿದ್ದೇ ಯೋಗೇಶ್‌ನ ವರಸೆಯೇ ಬದಲಾಗಿತ್ತು. ಮೇಷ್ಟ್ರು ಕೊಟ್ಟ ಐವತ್ತಾರೂವರೆ ಲಕ್ಷದ ಮಾತಿರಲಿ, ಇಡೀ ಮೆಗಾಸಿಟಿ ಯೋಜನೆಯನ್ನೇ ಮುಂಡಾಯಿಸಿಬಿಟ್ಟಿದ್ದ. ಮಾತು ಕೊಟ್ಟಂತೆ ಐದೆಕರೆಯನ್ನು ಬರೆದು ಕೊಡಲೇ ಇಲ್ಲ. ಬರುಬರುತ್ತ ವೆಂಕಟಯ್ಯನವರ ಕೈಗೇ ಸಿಗುತ್ತಿರಲಿಲ್ಲ. ಐದೆಕರೆ ಹಾಳಾಗಲಿ ಕೊಟ್ಟ ದುಡ್ಡಾದರೂ ಬಡ್ಡಿ ಸಹಿತ ವಾಪಸ್ಸು ಮಾಡಪ್ಪ ಅಂದರೆ ಈಗ ಕೊಟ್ಟೆ, ಆಗ ಕೊಟ್ಟೆ ಎಂದೇ ಯೋಗೇಶ್ವರ್ ಕಾಲ ತಳ್ಳುತ್ತಾ ಬಂದ. ಅಕಸ್ಮಾತ್ ಸಿಕ್ಕರೆ ಐದೋ, ಮೂರೋ ಲಕ್ಷಕ್ಕೆ ಚೆಕ್ ಬರೆದು ಕೊಡುತ್ತಿದ್ದ. ಈ ರೀತಿ ಸರಿಸುಮಾರು ಇಪ್ಪತ್ತು ಲಕ್ಷವನ್ನಷ್ಟೇ ಯೋಗೇಶ್ವರ್ ವಾಪಸ್ಸು ಮಾಡಿದ್ದನಾದರೂ ಕೊಟ್ಟ ಐವತ್ತಾರೂವರೆ ಲಕ್ಷದ ಲೆಕ್ಕಕ್ಕೆ ಅದು ಬಡ್ಡಿಗೆ ಸರಿಹೋಗುತ್ತಿತ್ತು.

ಹತ್ತು ವರ್ಷಗಳಾದರೂ ಮೆಗಾಸಿಟಿಯಾಗಲಿ, ವಜ್ರಗಿರಿಯಾಗಲಿ ತಲೆ ಎತ್ತಲಿಲ್ಲ. ಬರಕತ್ತಾಗಲೂ ಇಲ್ಲ. ಬಹುಶಃ ಬ್ಯಾಂಕಿನಲ್ಲಿಟ್ಟಿದ್ದರೆ ಐವತ್ತಾರು ಲಕ್ಷ ಈ ಹೊತ್ತಿಗೆ ಒಂದೂವರೆ ಕೋಟಿಯಾಗುತ್ತಿತ್ತು. ವಜ್ರಗಿರಿಯು ಐದೆಕರೆಯೂ ಇಲ್ಲ, ಕೊಟ್ಟ ದುಡ್ಡಿಗೆ ದಾಖಲೆಯನ್ನೂ ಮಾಡಿಕೊಡುತ್ತಿಲ್ಲ. ಇದ್ದಬದ್ದ ಭೂಮಿಯನ್ನೂ ಮಾರಿ, ದುಡಿದ ಸೈಟುಗಳನ್ನೆಲ್ಲ ಬರೆದುಕೊಟ್ಟು ಬರಿಗೈ ದಾಸನಂತಾದ ಮೇಷ್ಟ್ರು ವೆಂಕಟಯ್ಯನವರಿಗೆ ಜ್ಞಾನೋದಯವಾಗುವ ಹೊತ್ತಿಗೆ ಯೋಗೇಶ್ವರ್ ಮೂರನೇ ಬಾರಿಗೆ ಎಮ್ಮೆಲ್ಲೆಯಾಗಿದ್ದ. ವೆಂಕಟಯ್ಯ ಹೇಳಿಕೇಳಿ ಮೂರು ಮಕ್ಕಳ ತಂದೆ. ಎಂಥೆಂಥವರನ್ನೋ ವಿರೋಧ ಕಟ್ಟಿಕೊಂಡು ಯೋಗೇಶ್ವರ್ ಗೆಲುವಿಗೆ ಹೆಣಗಾಡಿದ್ದರು. ತಮ್ಮ ಪಿಂಚಣಿ ದುಡ್ಡನ್ನೂ ಬಿಡದೇ ಯೋಗೇಶ್ ಹೊಟ್ಟೆಗೆ ಹಾಕಿದ್ದರು. ಯಾವತ್ತು ಇಡೀ ಮೆಗಾಸಿಟಿ ಪ್ರಾಜೆಕ್ಟೇ ಎಕ್ಕುಟ್ಟಿ ಹೋಯಿತೋ ಇನ್ನು ತಮ್ಮ ದುಡ್ಡು ಬರುವುದು ಗ್ಯಾರಂಟಿಯಿಲ್ಲ ಎಂಬುದು ನಿಕ್ಕಿಯಾಗಿದೆ. ಯೋಗೇಶ್ವರ್‌ನನ್ನು ಹಿಡಿದು ಲೆಕ್ಕ ಚುಕ್ತಾ ಮಾಡಿಕೊಳ್ಳೋಣವೆಂದರೆ ಆತ ಕೈಗೇ ಸಿಗುತ್ತಿಲ್ಲ.

ಅಂತಿಮವಾಗಿ ವೆಂಕಟಯ್ಯನವರ ಕೈಗೆ ಯೋಗೇಶ್ ಸಿಕ್ಕಿದ್ದು 2008 ರ ನವೆಂಬರ್ 18 ರಂದು. ಅದೂ ಮೈಸೂರು ರಸ್ತೆಯ ನಟೋರಿಯಸ್ 'ದಿ ಕ್ಲಬ್'ನಲ್ಲಿ. 'ನೋಡಯ್ಯಾ, ನನಗೆ ಕತೆ ಬೇಕಿಲ್ಲ, ಮೊದಲು ನನ್ನ ಲೆಕ್ಕ ಚುಕ್ತಾ ಮಾಡು' ಎಂದು ಪಟ್ಟುಹಿಡಿದಿದ್ದಾರೆ ವೆಂಕಟಯ್ಯ.


ಬಹುಶಃ ಯೋಗೇಶ್ ಯಾವತ್ತೋ ನಿರ್ಧರಿಸಿದ್ದನೇನೊ. 'ನಿನಗೂ ನನಗೂ ಏನೇನೂ ಸಂಬಂಧವಿಲ್ಲ. ನಿನಗೆ ಯಾವ ದುಡ್ಡನ್ನೂ ಕೊಡಬೇಕಿಲ್ಲ, ಗೆಟ್‌ಔಟ್...' ಎಂದಿದ್ದೇ ತನ್ನ ತಂದೆ ಸಮಾನರಂತಿದ್ದ ಮೇಷ್ಟ್ರನ್ನು ದಿ ಕ್ಲಬ್‌ನ ಮೋರಿಗೆ ತಳ್ಳಿದ್ದೇ ಯೋಗೇಶ್ವರ್ ಕಾರತ್ತಿಕೊಂಡು ನಾಪತ್ತೆಯಾಗಿದ್ದಾನೆ. ಕ್ಲಬ್‌ನ ಗೇಟಿನಲ್ಲೇ ನಿಂತು ಕಣ್ಣೀರಿಟ್ಟ ಮೇಷ್ಟ್ರು ಅದಾಗಿ ನಾಲ್ಕನೇ ದಿನಕ್ಕೆ ಅಂದರೆ ನವೆಂಬರ್ 22 ರ ಬೆಳಿಗ್ಗೆ ಕೊಟ್ಟಗನ ಹೊಸಳ್ಳಿಯ ತಮ್ಮ ಮನೆಯಲ್ಲಿ ಕ್ರಿಮಿನಾಶಕ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅದಕ್ಕೂ ಮುನ್ನ ಸುದೀರ್ಘ ಪತ್ರವೊಂದನ್ನು ಬರೆದಿಟ್ಟೇ ಕ್ರಿಮಿನಾಶಕ ಕುಡಿದಿದ್ದಾರೆ. ಬದ್ದು ಒದ್ದಾಡುತ್ತಿದ್ದ ವೆಂಕಟಯ್ಯನವರನ್ನು ಅವರ ಮಕ್ಕಳೇನಾದರೂ ಆಸ್ಪತ್ರೆಗೆ ಸಾಗಿಸದಿದ್ದರೆ ಈ ಹೊತ್ತಿಗೆ ವೆಂಕಟಯ್ಯ ಮೆಗಾಸಿಟಿಗೆ ಬಲಿಬಿದ್ದ ಮೊದಲ ಹೆಣವಾಗಬೇಕಿತ್ತು.

ಯೋಗೇಶ್ವರ್ ಮೆಗಾಸಿಟಿ ಹೆಸರಲ್ಲಿ ನೂರಾರು ಜನಕ್ಕೆ ಟೋಪಿ ಹಾಕಿರಬಹುದು. ತನಗೆ ಓಟು ಕೊಟ್ಟವರನ್ನೇ ವಂಚಿಸಿರಬಹುದು. ಆದರೆ ತನ್ನನ್ನು ಈ ಮಟ್ಟಕ್ಕೆ ಬೆಳೆಸಿದ, ತನ್ನ ತಂದೆಯ ಸಮಾನರಾದ ಮುಗ್ಧ ಮೇಷ್ಟ್ರೊಬ್ಬರ ಇಡೀ ಜೀವಮಾನದ ಗಳಿಕೆಯನ್ನೇ ಮುಂಡಾಯಿಸಿದ್ದು ಮಾತ್ರ ಅಕ್ಷಮ್ಯ. ನಂಬಿ ಬಂದ ಪತ್ನಿಯನ್ನೇ ವಂಚಿಸಿದವನಿಗೆ ಸಾಕಿ ಬೆಳೆಸಿದ ಮೇಷ್ಟ್ರು ಯಾವ ಲೆಕ್ಕ?

ಸೈಟಿಗೆಂದು ದುಡ್ಡು ಕೊಟ್ಟವರಿಗೆ ಕನಿಷ್ಠ ಕೋರ್ಟಾದರೂ ಇದೆ. ನಂಬಿದ ತಪ್ಪಿಗೆ ಮೇಷ್ಟ್ರು ವೆಂಕಟಯ್ಯರಿಗೆ ತೆಂಗಿನ ಚಿಪ್ಪಲ್ಲದೇ ಬೇರೇನಿದೆ? ಎಮ್ಮೆಲ್ಲೇಯಾದರೂ ತನ್ನ ಹುಟ್ಟು ಬುದ್ಧಿ ಬಿಡದ ಯೋಗೇಶ್ವರ್‌ಗೆ ಪಾಠ ಕಲಿಸುವವರ್‍ಯಾರು?

■ರಾ. ಸೋಮನಾಥ್


ಕೂಗುಮಾರಿಯ ಕೇಸರಿ ಮೇಕಪ್




ಅದು ವ್ಯಕ್ತಿಯಿರಲಿ ವ್ಯವಸ್ಥೆಯೇ ಆಗಿರಲಿ. ತನ್ನ ಗುಣದೋಷಗಳನ್ನು ತೋರಿಸಿಯೇ ನಾಶವಾಗುತ್ತದೆಯಂತೆ!

ಇನ್ನು ಹಿಟ್ಲರ್, ನೆಪೋಲಿಯನ್ನರ ಕತೆಯನ್ನು ಒತ್ತಟ್ಟಿಗಿಟ್ಟು ಸದ್ಯ ಕನಕಪುರದ ಕೂಗುಮಾರಿ ತೇಜಸ್ವಿನಿಯನ್ನೇ ನೋಡಿ. ಒಂದಾನೊಂದು ಕಾಲದ ಕಟ್ಟರ್ ಕಮ್ಯುನಿಸ್ಟ್, ಕೋಮುವಾದಿಗಳ ವಿರುದ್ಧ ಸ್ಟ್ರೀಟ್ ಫೈಟಿಂಗಿಗೆ ನಿಂತಾಕೆ, ಸದ್ಯ ಕನಕಪುರದ ಕಾಂಗ್ರೆಸ್ ಸಂಸದೆ, ದೆಹಲಿ ಮಟ್ಟದಲ್ಲಿ ರಾಹುಲ್ ಗಾಂಧಿಗೆ 'ಪರಮಾಪ್ತೆ' ಇತ್ಯಾದಿ ಏನೆಲ್ಲಾ ಠಾಕುಠೀಕಿನ ಮುಖಾಮುಖಿ ತೇಜಮ್ಮ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಇದೇ ಕನಕಪುರಕ್ಕೆ ಬಿಜೆಪಿ ಅಭ್ಯರ್ಥಿಯೆಂದರೆ ಹೇಗಿರುತ್ತೆ?







ಹೌದು; ಸದ್ಯದ ಆಕೆಯ ವೈಚಾರಿಕ ದಿವಾಳಿತನ ಮತ್ತು ದುರಾಚಾರದ ಫಲ ಇದು. ಒಂದೆಡೆ ಬಿಜೆಪಿ ರಾಷ್ಟ್ರ ನಾಯಕ ಅನಂತ್‌ಕುಮಾರ್ ಮತ್ತೊಂದೆಡೆ ರಾಜ್ಯ ಬಿಜೆಪಿ ಅಧ್ಯಕ್ಷ ಚಿದಾನಂದಗೌಡರ ಜೊತೆ ಆಕೆ ಕದ್ದುಮುಚ್ಚಿ ಶುರು ಹಚ್ಚಿಕೊಂಡ ಚೌಕಾಶಿಯೇನಾದರೂ ನೆರವೇರಿತೆಂದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಆಕೆಯೇ ಕನಕಪುರದ ಬಿಜೆಪಿ ಅಭ್ಯರ್ಥಿಯಾಗುತ್ತಾಳೆ. ಕನಿಷ್ಠ ಪಕ್ಷ ಚಿಕ್ಕಬಳ್ಳಾಪುರದಿಂದಲಾದರೂ ಬಿಜೆಪಿ ಟಿಕೆಟ್ ಗಿಟ್ಟಿಸಿ ಕಮಲದ ಗುರುತಿಗೆ ನಿಲ್ಲುವುದು ಆಕೆಯ ಸದ್ಯದ ಸೀಕ್ರೇಟ್ ಅಜೆಂಡಾ!

ಎಂಥವರಿಗೂ ಆಘಾತವಾಗಲೇಬೇಕು ತಾನೆ? ಆದರೆ ಇದು ಸತ್ಯ. ಕಳೆದೊಂದು ತಿಂಗಳಿನಿಂದ ಬಿಜೆಪಿಯ ಜೊತೆ ಆಕೆ ಕುದುರಿಸುತ್ತಿರುವ ಸಂಬಂಧ ಮತ್ತು ನಡೆಸುತ್ತಿರುವ ಚಕ್ಕಂದದ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡರೊಳಗೂ ಚಿತ್ರವಿಚಿತ್ರ ಪ್ರತಿಕ್ರಿಯೆಗಳೆದ್ದಿವೆ. ಎಲ್ಲಿಯ ತೇಜಸ್ವಿನಿ? ಯಾವ ಕಮ್ಯೂನಿಸ್ಟ್ ವೇದಾಂತ? ಮತ್ತು ಎಲ್ಲಿಯ ವೈದಿಕ ಬಿಜೆಪಿ?

ಆದರೆ ಕೆದಲು ನಿಂತರೆ ಕಮ್ಯುನಿಸ್ಟ್ ಆದರೂ ಆರೆಸ್ಸೆಸ್ ಆದರೂ ದೊಡ್ಡ ವ್ಯತ್ಯಾಸವಿರುವುದಿಲ್ಲ. ಅಷ್ಟಕ್ಕೂ ತೇಜಸ್ವಿನಿಯ ಪಾಲಿಗೆ ದಕ್ಕಿದ ಪುಕ್ಕಟೆ ಲೋಕಸಭಾ ಸದಸ್ಯಗಿರಿಗೆ ಯಾವ ಯೋಗ್ಯತೆ ತಾನೇ ಆಕೆಗಿತ್ತು! ಉದಯ ಟೀವಿಯಲ್ಲಿ 'ಮುಖಾಮುಖಿ' ಕಾರ್ಯಕ್ರಮವನ್ನೇ ನೆಪ ಮಾಡಿಕೊಂಡು ಡೀಕೇಶಿಗೆ ಮಸ್ಕಾ ಹೊಡೆದು ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಎಂಪಿಯಾದವಳು ತೇಜಸ್ವಿನಿ. ಪುಕ್ಕಟೆ ಸಿಕ್ಕಿದ ಅವಕಾಶವನ್ನು ಸರಿಯಾಗಿ ಬಳಸಿಕೊಂಡರೆ ಇವತ್ತಲ್ಲ ನಾಳೆ ಒಕ್ಕಲಿಗರ ಹೆಣ್ಣುಮಗಳೊಬ್ಬಳು ಕರ್ನಾಟಕದ ಮುಖ್ಯಮಂತ್ರಿಯಾದಾಳು ಎಂದೇ ಲೆಕ್ಕಾಚಾರ ಹಾಕಿದವರುಂಟು.

ವಿಚಿತ್ರವೆಂದರೆ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರವಿದ್ದೂ ಕಾಂಗ್ರೆಸ್ ಯುವರಾಜ ರಾಹುಲ್ ಗಾಂಧಿಯ ಸಖ್ಯವಿದ್ದೂ ತೇಜಮ್ಮ ಬಿಜೆಪಿಗೆ ಹಾರಲು ಯತ್ನಿಸುತ್ತಿರುವುದು ಏಕೆ? ಜೀವನಪರ್ಯಂತ ವಿರೋಧಿಸಿಕೊಂಡೇ ಬಂದ ಸಂಘಪರಿವಾರದ ಸಖ್ಯಕ್ಕೆ ಯಾವುದೇ ಹೇಸಿಗೆಯಿಲ್ಲದೇ ತೇಜಸ್ವಿನಿ ಹಾತೊರೆಯುತ್ತಿರುವುದಾದರೂ ಏತಕ್ಕೆ?

ಆಕೆಯ ಆಪ್ತ ವಲಯವೇ ಹೇಳುವಂತೆ ಅದು ಆಕೆಯ ದುರಾಶೆಯ ಫಲ. ಕಾಂಗ್ರೆಸ್ಸಿಗೆ ಕರೆತಂದು, ಟಿಕೆಟ್ ಕೊಡಿಸಿ, ದುಡ್ಡು ಸುರಿದು ಅಂಥಾ ದೇವೇಗೌಡರ ವಿರುದ್ಧ ಗೆಲ್ಲಿಸಿದ್ದು ಕಾಂಗ್ರೆಸ್ ನಾಯಕ ಡೀಕೆ. ಗೆದ್ದ ಒಂದು ವರ್ಷದ ತನಕ ಡೀಕೆಗೆ ನಿಷ್ಠೆಯಿಂದಿದ್ದ ತೇಜಮ್ಮನಿಗೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದೇ ಜಾತಿಯು ನಂಜೇರಿತು. ಗೌಡರ ಪಾಳಯಕ್ಕೂ, ಡೀಕೆ ವಿರುದ್ಧ ತೇಜಮ್ಮನಂಥ ದಾಳವೊಂದು ಬೇಕಿತ್ತು, ಮಾಗಡಿ ಬಾಲಕೃಷ್ಣಾರಾದಿಯಾಗಿ, ಅನಿತಾ ಕುಮಾರಸ್ವಾಮಿಯ ತನಕ ಜೆಡಿಎಸ್ ಸಹವಾಸದಲ್ಲೇ ಓಡಾಡಲಾರಂಭಿಸಿದ ತೇಜಸ್ವಿನಿಯನ್ನು ಡೀಕೆ ವಿರುದ್ಧ ಎತ್ತಿ ಕಟ್ಟಿದ್ದೇ ಕುಮಾರಸ್ವಾಮಿ!

ಕುಮಾರಸ್ವಾಮಿ-ದೇವೇಗೌಡರ ಹುನ್ನಾರವನ್ನು ಅರಿಯದೇ ಡೀಕೆ ವಿರುದ್ಧ ಹೂಂಕರಿಸಿದ ತೇಜಸ್ವಿನಿಗೆ ಕನಕಪುರ ಲೋಕಸಭಾ ಕ್ಷೇತ್ರದ ಬಹುತೇಕ ಕಾಂಗ್ರೆಸ್ ನಾಯಕರನ್ನಾದರೂ ತನ್ನ ಪರವಿಟ್ಟುಕೊಳ್ಳಬೇಕೆಂಬ ವಿವೇಕ ತಲೆಗೆ ಹತ್ತಲೇ ಇಲ್ಲ. ವಿನಾಕಾರಣ ಪ್ರತಿಷ್ಠೆಗೆ ಬಿದ್ದು ರಾಮನಗರದ ಕಾಂಗ್ರೆಸ್ ನಾಯಕ ಸಿ.ಎಂ. ಲಿಂಗಪ್ಪನವರ ವಿರುದ್ಧ ಜಗಳಕ್ಕೆ ಬಿದ್ದಳು. ಪಕ್ಕದ ಮಾಗಡಿಯಲ್ಲೂ ಇದೇ ಬುದ್ಧಿಯ ಪುನರಾವರ್ತನೆಯಾಯಿತು. ಅನಗತ್ಯವಾಗಿ ಮಾಗಡಿಯ ಮಾಜಿ ಶಾಸಕ ರೇವಣ್ಣನವರ ವಿರುದ್ಧ ಕ್ಯಾತೆ ತೆಗೆದಳು. ಮೊದಮೊದಲು ಚನ್ನಪಟ್ಟಣದ ಶಾಸಕ ಯೋಗೇಶ್ವರ್ ಕೂಡ ತೇಜಮ್ಮನ ಪರವಾಗೇ ಇದ್ದ. ಅದೇನಾಯಿತೋ ಸದ್ಯ ಯೋಗೇಶ್ವರ್ ಮತ್ತು ತೇಜಸ್ವಿನಿ ಮಧ್ಯೆ ಹಾವು-ಮುಂಗುಸಿಯಂಥ ದುಶ್ಮನಿ ಹೆಡೆಯೆತ್ತಿದೆ.

ಮೊದಮೊದಲು ಡೀಕೆ ಮೇಲಿನ ಜಿದ್ದಿಗೆ ಖರ್ಗೆ-ಧರಂಸಿಂಗ್ ಕೂಡ ತೇಜಮ್ಮನನ್ನು ಎತ್ತಿಕಟ್ಟುತ್ತಿದ್ದವರಿಗೆ ಜ್ಞಾನೋದಯವಾಗುವ ಹೊತ್ತಿಗೆ ಕಾಂಗ್ರೆಸ್ ಮಣ್ಣುಮುಕ್ಕಿ ಬಿಜೆಪಿ ಅಧಿಕಾರಕ್ಕೆ ಬಂದಾಗಿತ್ತು. ತೇಜಮ್ಮನ ಮಾತು ಕೇಳಿ ಮಳವಳ್ಳಿಯಲ್ಲಿ ನರೇಂದ್ರಸ್ವಾಮಿಗೆ ಟಿಕೆಟ್ ತಪ್ಪಿಸಿದ್ದ ಖರ್ಗೆಗೆ ತನ್ನ ತಪ್ಪಿನ ಅರಿವಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಬಹುಶಃ ರಾಮನಗರದಲ್ಲಿ ಸಿ.ಎಂ. ಲಿಂಗಪ್ಪನವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದರೆ ಏನಾಗುತ್ತಿತ್ತೋ. ಮಾಗಡಿಯಲ್ಲಿ ಜೆಡಿಎಸ್‌ನ ಬಾಲಕೃಷ್ಣರನ್ನು ಗೆಲ್ಲಿಸಲೆಂದೇ ಕಲ್ಪನಾ ಶಿವಣ್ಣ ಎಂಬ ದುರ್ಬಲ ಅಭ್ಯರ್ಥಿಯೊಬ್ಬಳನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡಿದ ತೇಜಸ್ವಿನಿಯಿಂದಾಗಿ ಚೇದರಹಳ್ಳಿ ಕೃಷ್ಣಪ್ಪನಂಥ ಪ್ರಬಲ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿತ್ತು!

ಕಾಂಗ್ರೆಸ್ಸಿನ ಓರ್ವ ಲೋಕಸಭಾ ಸದಸ್ಯೆಯಾಗಿ ತೇಜಸ್ವಿನಿ ಹಾಕಿಸಿದ್ದ ಯಾವೊಬ್ಬ ಕಾಂಗ್ರೆಸ್ ಅಭ್ಯರ್ಥಿಯೂ ಗೆಲ್ಲಲಿಲ್ಲ. ಕನಕಪುರದಿಂದ ಗೆದ್ದ ಡೀಕೆ ಕೂಡ ತನ್ನ ಸ್ವಂತ ಸಾಮರ್ಥ್ಯದ ಮೇಲೆ ಗೆದ್ದಿದ್ದು ಬಿಟ್ಟರೆ ಇಡೀ ಕನಕಪುರ ಕ್ಷೇತ್ರದ ಅಷ್ಟೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನೆಲಕಚ್ಚಿತ್ತು. ಇನ್ನೂ ಎಂಟ್ಹತ್ತು ಸೀಟುಗಳಲ್ಲಿ ಗೆದ್ದಿದ್ದರೆ ಖರ್ಗೆ ಮುಖ್ಯಮಂತ್ರಿಯಾಗುತ್ತಿದ್ದರೇನೋ. ತೇಜಸಮ್ಮನ ಮಾತು ಕೇಳಿ ನರೇಂದ್ರಸ್ವಾಮಿಗೆ ಟಿಕೆಟ್ ತಪ್ಪಿಸಿದ ತಪ್ಪಿಗೆ ಖರ್ಗೆ ಮುಖಭಂಗ ಅನುಭವಿಸಬೇಕಾಯಿತು.

ಯಾವ ಡೀಕೆಯ ಬೆನ್ನಿಗೆ ಇರಿದು ಎಸ್.ಟಿ. ಸೋಮಶೇಖರ್ ಎಂಬ ಕಾಂಗ್ರೆಸ್ ನಾಯಕನನ್ನು ತೇಜಸ್ವಿನಿ ಬೆಳೆಸಲಾರಂಭಿಸಿದಳೋ ಅದೂ ಕೈಸುಟ್ಟಿತ್ತು. ಶೋಭಾ ಕರಂದ್ಲಾಜೆಯ ವಿರುದ್ಧ ಏನೆಲ್ಲಾ ಸರ್ಕಸ್ ಮಾಡಿಯೂ ಸೋಮಶೇಖರ್ ಗೆಲ್ಲಲಿಲ್ಲ. ಹೆಚ್ಚೂಕಮ್ಮಿ ತೇಜಮ್ಮನ ಪಾಲಿಗೆ ಗಾಡ್‌ಫಾದರ್‌ನಂತಿದ್ದ ಸೋಮಶೇಖರ್ ಸೋತಿದ್ದು ತೇಜಮ್ಮನಿಗಾದ ದೊಡ್ಡ ಪೆಟ್ಟು.

ಮತ್ತೊಂದೆಡೆ ಕಾಂಗ್ರೆಸ್ಸಿನ ಮತ್ತೊಬ್ಬ ನಾಯಕ ಆರ್.ಎಲ್. ಜಾಲಪ್ಪನವರ ಕೆಂಗಣ್ಣಿಗೆ ಗುರಿಯಾದ ತೇಜಸ್ವಿನಿಯ ವಿರುದ್ಧ ಹೈಕಮಾಂಡಿಗೆ ಹತ್ತು ಪುಟಗಳ ಸುವಿಸ್ತಾರ ದೂರು ಕೊಟ್ಟರು ಜಾಲಪ್ಪ. ಈ ಪೈಕಿ ಅತೀ ದೊಡ್ಡ ಆರೋಪವೆಂದರೆ ತೇಜಸ್ವಿನಿ ಮತ್ತು ಆಂಧ್ರ ಕಾಂಗ್ರೆಸ್ ಎಂಪಿ ಲಗಡಪತಿರಾಜು ಒಡನಾಟ. ಸತ್ಯಂ ಕಂಪ್ಯೂಟರ್ ವಂಚಕ ರಾಮಲಿಂಗರಾಜು ಸಮೀಪದ ಸಂಬಂಧಿಯಾದ ಲಗಡಪತಿ ರಾಜು LANCO ಎಂಬ ಕಾರ್ಪೋರೇಟ್ ಕಂಪೆನಿಯೊಂದರ ಒಡೆಯ. ಎಲ್ಲೆಲ್ಲಿ ಕಾಂಗ್ರೆಸ್ ಸರ್ಕಾರವಿದೆಯೋ ಅಲ್ಲಿನ ಕಾಂಗ್ರೆಸ್ ನಾಯಕರ ತಲೆತಿಕ್ಕಿ ಕಾಂಟ್ರಾಕ್ಟ್ ಹಿಡಿಯುವುದು ಈತನ ದಂಧೆ.

ಅದೆಲ್ಲಿ ತೇಜಮ್ಮ ಗಂಟುಬಿದ್ದಳೋ, ಧರ್ಮಸಿಂಗ್ ಮುಖ್ಯಮಂತ್ರಿಯಾದಾಗಿನಿಂದ ಹಿಡಿದು ಕುಮಾರಸ್ವಾಮಿ ಮುಖ್ಯಮಂತ್ರಿಗಿರಿಯುದ್ದಕ್ಕೂ ಕೋಟಿ ಮೊತ್ತದ ಹತ್ತಾರು ಕಾಂಟ್ರಾಕ್ಟುಗಳನ್ನು LANCO ಕಂಪೆನಿಗೆ ಕೊಡಿಸಿದ್ದು ಬಿಟ್ಟರೆ ತೇಜಮ್ಮನ ಎಂಪಿಗಿರಿಗೆ ಮತ್ತೇನೂ ಗಿಟ್ಟಲಿಲ್ಲ. ರಾಹುಲ್ ಗಾಂಧಿಗೆ ಎಷ್ಟೇ ಮಸ್ಕಾ ಹೊಡೆದರೂ ಹೈಕಮಾಂಡಿನಲ್ಲಿ ತೇಜಸ್ವಿನಿ ಬಗ್ಗೆ ಮಮಕಾರವಿಲ್ಲ. ಏಕೆಂದರೆ ಗಾಡ್‌ಫಾದರ್‌ಗಳಂತಿದ್ದ ಗುಲಾಂ ನಬಿ ಆಜಾದ್ ಮತ್ತು ವಲಯಾರ್ ರವಿ ಥರದವರಿಗೀಗ ಹಿಂದಿನಂತೆ ಬೆಲೆಯಿಲ್ಲ.

ಬಹುಶಃ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತನಗೆ ಕನಕಪುರದ ಕಾಂಗ್ರೆಸ್ ಟಿಕೆಟ್ ಸಿಗಲಿಕ್ಕಿಲ್ಲ ಎಂಬುದು ತೇಜಸ್ವಿನಿಗೆ ಖಾತರಿಯಾಗಿರಬೇಕು. ಮತ್ತೊಂದೆಡೆ ಜೆಡಿಎಸ್ ಕುಮಾರಸ್ವಾಮಿ ಕೂಡ ಮಣೆ ಹಾಕಿಲ್ಲ. ಇಷ್ಟು ದಿನ ಲೋಕಸಭಾ ಸದಸ್ಯಳಾಗಿ ಅಧಿಕಾರದ ರುಚಿ ಹತ್ತಿದ್ದು ಬಿಡಬೇಕಲ್ಲ. ಎಲ್ಲೂ ಸಲ್ಲದವಳಿಗೆ ಎಲ್ಲಾದರೇನು? ಉಪಾಯವಾಗಿ ಅನಂತ್‌ಕುಮಾರ್ ಜೊತೆ ರಾಜಿಯಾಗಿ ಸದಾನಂದ ಗೌಡರಿಗೆ ಮಸ್ಕಾ ಹೊಡೆದಿದ್ದಾಳೆ. ಶೋಭಾ ಕರಂದ್ಲಾಜೆಗೆ ವಿಶೇಷವಾಗಿ ಹೊಸ ವರ್ಷದ ಶುಭಾಶಯ ಕೋರಿದ್ದಾಳೆ. ರಾಮಚಂದ್ರೇಗೌಡರನ್ನೇ ಕಂಡು ಪೂಸಿ ಹೊಡೆದಿದ್ದಾಳೆ. ಬಿಜೆಪಿ ಮೂಲಗಳೇ ತಿಳಿಸುವಂತೆ ಈಗಾಗಲೇ ಅನಂತ್‌ಕುಮಾರ್ ಗ್ರೀನ್ ಸಿಗ್ನಲ್ ಕೊಟ್ಟಾಗಿದೆ.


ಯಡ್ಡಿಯ ಸಮ್ಮತಿಯೊಂದೇ ಬಾಕಿಯಂತೆ. ಒಂದಾನೊಂದು ಕಾಲದ ಕಮ್ಯುನಿಸ್ಟ್, ಸಂಘ ಪರಿವಾರದ ಬದ್ಧ ವೈರಿಯಾಗಿದ್ದಾಕೆ ಪುಡಿ ಅಧಿಕಾರಕ್ಕಾಗಿ ಬಯ್ಯುತ್ತಿದ್ದವರ ಕಾಲಿಗೇ ಬೀಳುತ್ತಿದ್ದಾಳೆಂದರೆ ಎಂಥಾ ನಾಚಿಕೆಗೇಡು?

■ರಾ. ಸೋ.

ಚನ್ನಪಟ್ಟಣದ ಕಾಂಗ್ರೆಸ್ ಸಭೆಯಲ್ಲಿ ಧಿಕ್ಕಾರ

ಏಕಾಏಕಿ ಬಿಜೆಪಿ ಸೇರಲು ತೇಜಸ್ವಿನಿ ಹಾತೊರೆಯುತ್ತಿರುವುದಕ್ಕೆ ಮತ್ತೂ ಒಂದು ಕಾರಣವಿದೆ. ಅದು ಇದೇ ಜನವರಿ ಒಂಬತ್ತರಂದು ಚನ್ನಪಟ್ಟಣದಲ್ಲಿ ಶಾಸಕ ಸಿ.ಪಿ. ಯೋಗೇಶ್ವರ್ ಮನೆಯಲ್ಲಿ ನಡೆದ ಕಾಂಗ್ರೆಸ್ ನಾಯಕರ ಸಭೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಆಯ್ಕೆಗೆಂದೇ ನಡೆದ ಸಭೆಯಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ ಮೋಟಮ್ಮ, ಶಾಸಕ ಯೋಗೇಶ್ವರ್ ಮುಂತಾದವರಿದ್ದ ಸಭೆಯಲ್ಲಿ ಸೇರಿದ್ದ ಕಾಂಗ್ರೆಸ್ ನಾಯಕರೆಲ್ಲರೂ ತೇಜಸ್ವಿನಿ ವಿರುದ್ಧ ಕಿಡಿಕಾರಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ಸಿ.ಎಂ. ಲಿಂಗಪ್ಪನವರನ್ನೇ ಒಮ್ಮತದ ಅಭ್ಯರ್ಥಿಯನ್ನಾಗಿ ಮಾಡಬೇಕೆಂದು ಒತ್ತಾಯಿಸಿದ ಬಹುತೇಕ ಕಾರ್ಯಕರ್ತರು ತೇಜಸ್ವಿನಿಗೆ ಧಿಕ್ಕಾರ ಹಾಕಿದ್ದಾರೆ. ಇದು ಕೇವಲ ಚನ್ನಪಟ್ಟಣದ ಪರಿಸ್ಥಿತಿಯಷ್ಟೇ ಅಲ್ಲ, ರಾಮನಗರ, ಮಳವಳ್ಳಿ, ಮಾಗಡಿ, ಆನೇಕಲ್, ಕನಕಪುರದುದ್ದಕ್ಕೂ ಕಾಂಗ್ರೆಸ್ ಕಾರ್ಯಕರ್ತರು ತೇಜಮ್ಮನ ವಿರುದ್ಧ ತಿರುಗಿಬಿದ್ದಿದ್ದಾರೆ. ಉತ್ತರಹಳ್ಳಿಯ ಒಂದಷ್ಟು ಮಂದಿ ಎಸ್.ಟಿ. ಸೋಮಶೇಖರ್ ಬೆಂಬಲಿಗರ ಹೊರತಾಗಿ ತೇಜಮ್ಮನ ಬೆನ್ನಿಗೆ ಯಾರೂ ಇಲ್ಲ.

ಕುಲಗೆಟ್ಟ ನಂತರ ಬಿಜೆಪಿಯಾದರೇನು ಬಿಎಸ್‌ಪಿಯಾದರೇನು? ಇದು ತೇಜಸ್ವಿನಿಯ ದುರಾಶೆಯ ಫಲ. ■




ಬಂಗೆ ಮುಖಭಂಗ

ಅದು 1983ರ ಡಿಸೆಂಬರ್ 26.

ದೆಹಲಿಯಲ್ಲಿ ಪ್ರಧಾನಿ ಇಂದಿರಾ ಗಾಂಧಿಯನ್ನು ಭೇಟಿ ಮಾಡಿದ ಬಂಗಾರಪ್ಪ ತಮ್ಮ ಕ್ರಾಂತಿರಂಗವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲಾಗುವುದು ಎಂದು ಪ್ರಕಟಿಸಿದ್ದರು. ಇದಾಗಿ 25 ವರ್ಷಗಳ ನಂತರ ಅಂದರೆ, ಡಿಸೆಂಬರ್ 26, 2008ರಂದು ಇದೇ ಬಂಗಾರಪ್ಪ ಸಮಾಜವಾದಿ ಪಕ್ಷದ ರಾಜ್ಯ ಘಟಕವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸುವ ಕುರಿತು ಬೆಂಗಳೂರಿನಲ್ಲಿ ಪ್ರಕಟಣೆ ನೀಡಿದ್ದರು.


ಈ 25 ವರ್ಷಗಳಲ್ಲಿ 'ಬಂ' ಎಷ್ಟು ಬಾರಿ ಕಾಂಗ್ರೆಸ್ ಬಿಟ್ಟಿದ್ದಾರೆ, ಮಂಗನಂತೆ ಪಕ್ಷದಿಂದ ಪಕ್ಷಕ್ಕೆ ಹಾರಿದ್ದಾರೆ ಎಂಬುದು ಸ್ವತಃ ಬಂಗಾರಪ್ಪಗೂ ನೆನಪಿದ್ದಂತಿಲ್ಲ. ಹಿಂದೆಲ್ಲಾ ಹೊಸ ಪಕ್ಷ ಕಟ್ಟಿ ವಿಫಲರಾಗಿಯೋ, ಬೇರೆ ಪಕ್ಷ ಬಿಟ್ಟೋ, ಮರಳಿ ಕಾಂಗ್ರೆಸ್ ಸೇರಲು 'ಬಂ' ಮುಂದಾದಾಗಲೆಲ್ಲಾ ಹೈಕಮಾಂಡ್ ಅವರನ್ನು ಗೌರವದಿಂದಲೇ ಪಕ್ಷದೊಳಗೆ ಬರಮಾಡಿಕೊಂಡಿತ್ತು. ಆದರೆ ಈ ಬಾರಿ 'ಬಂ' ಮುಖಭಂಗವಾಗಿದೆ. ಕಾಂಗ್ರೆಸ್ ಸೇರು ತ್ತೇನೆ ಎಂದರೂ ಯಾರೂ ಕ್ಯಾರೆ ಎನ್ನುತ್ತಿಲ್ಲ.

ಇದಕ್ಕೆ 'ಬಂ'ರೇ ಕಾರಣ ಹೊರತು ಬೇರೆ ಯಾರೂ ಅಲ್ಲ. ಕಳೆದ ಲೋಕಸಭಾ ಚುನಾವಣೆ ಯವರೆಗೂ ಬಂಗಾರಪ್ಪನ ಜೊತೆಗೆ ಒಂದಿಷ್ಟು ಬೆಂಬಲಿಗರಿದ್ದರು. ಬಂ ಮಾತು ಕೇಳಿ ಓಟು ಹಾಕುವ ಮತದಾರರಿದ್ದರು. ಹೀಗಾಗಿ ಬಂಗಾ ರಪ್ಪ ಕಾಂಗ್ರೆಸ್ ಬಿಟ್ಟಾಗಲೆಲ್ಲಾ, ಕಾಂಗ್ರೆಸ್‌ಗೆ ಹಿನ್ನಡೆಯಾಗಿತ್ತು. ಇದು ಗೊತ್ತಿದ್ದ ಹೈ ಕಮಾಂಡ್ ಬಂಗಾರಪ್ಪ ಪಕ್ಷ ಸೇರುತ್ತೇನೆ ಎಂದರೆ ಅವರು ಹಾಕುತ್ತಿದ್ದ ಸಣ್ಣಪುಟ್ಟ ಪರತ್ತು ಗಳನ್ನು ಒಪ್ಪಿಕೊಂಡು ಪಕ್ಷಕ್ಕೆ ಸೇರಿಸಿಕೊಳ್ಳುತ್ತಿತ್ತು. ಆದರೆ ಬಂ ಈಗ ಎಲ್ಲವನ್ನೂ ಕಳೆದುಕೊಂಡು ಕುಳಿತಿದ್ದಾರೆ. ಹೀಗಾಗಿ ಕಾಂಗ್ರೆಸ್ ಸೇರುತ್ತೇನೆ ಎಂದರೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಬಂಗಾರಪ್ಪ ಅಲ್ಲ, ಕಾಂಗ್ರೆಸ್ಸೇ ಪರತ್ತು ವಿಧಿಸಲು ಮುಂದಾಗಿದೆ!



ಮೊಯ್ಲಿ

ರಾಜ್ಯದ ಬಹುತೇಕ ಕ್ಷೇತ್ರಗಳ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಬಲ್ಲ ಶಕ್ತಿ ಹೊಂದಿದ್ದ ರಾಜ್ಯದ ಕೆಲವೇ ನಾಯಕರಲ್ಲಿ ಬಂಗಾರಪ್ಪ ಒಬ್ಬರಾಗಿದ್ದರು. ಮುಖ್ಯಮಂತ್ರಿಯಾಗಿ ದ್ದಾಗ ಸಿಕ್ಕ ಅವಕಾಶವನ್ನು ತಮ್ಮ ವರ್ಚಸ್ಸು ಬೆಳೆಸಿಕೊಳ್ಳಲು ಬಳಸಿಕೊಂಡಿದ್ದರು. ಸುತ್ತಾಮುತ್ತಾ ಹೊಗಳುಭಟರನ್ನು ಕಟ್ಟಿಕೊಂಡಿದ್ದ ಬಂ ಅಹಂಕಾರದ ಮುದ್ದೆಯಾಗಿದ್ದರು. ತಾನು ಹೇಳಿದ್ದು ನಡೆಯದಿದ್ದರೆ ಪಕ್ಷ ಬಿಡುತ್ತೇನೆ ಎಂದು ಘರ್ಜಿಸುತ್ತಿದ್ದರು. ತಮ್ಮ ಮಾತಿಗೆ ಬೆಲೆಕೊಡದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರನ್ನು ಬಾಯಿಗೆ ಬಂದಂತೆ ಬೈದು ಪಕ್ಷ ಬಿಟ್ಟಿದ್ದರು. ಈಗ ಇದೇ ಸೋನಿಯಾ ಗಾಂಧಿಯ ಮರ್ಜಿಗೆ ಕಾಯಬೇಕಾದ ಸ್ಥಿತಿ 'ಬಂ'ಗೆ ಬಂದಿದೆ.



ದೇಶಪಾಂಡೆ

ಬಿಜೆಪಿಗೆ ಸೇರಿ ಸೋತರು!

ಬಂಗಾರಪ್ಪ 41 ವರ್ಷಗಳ ತಮ್ಮ ರಾಜಕೀಯ ಜೀವನದಲ್ಲಿ ಮಾಡಿದ ಬಹುದೊಡ್ಡ ತಪ್ಪೆಂದರೆ ಬಿಜೆಪಿಗೆ ಸೇರಿದ್ದು. ಸಮಾಜವಾದಿ ಹಿನ್ನೆಲೆ ಯಿಂದ ಬಂದಿದ್ದರೂ, ಮಸೀದಿ ಕೆಡವಿ, ಕೇಸರಿ ಅಜೆಂಡಾ ಜಾರಿಗೆ ತರುತ್ತಿದ್ದ ಬಿಜೆಪಿಯನ್ನು ಸೇರಿ, ಆ ಪಕ್ಷಕ್ಕೆ ತಮ್ಮ ಶಕ್ತಿಧಾರೆ ಎರೆದರು. ಆದರೆ ಗರ್ಭಗುಡಿ ಸಂಸ್ಕೃತಿಯ ಬಿಜೆಪಿ ಬಂರನ್ನು ತಮ್ಮವನನ್ನಾಗಿಸಿ ಕೊಳ್ಳಲಿಲ್ಲ. ಇದು ಬಂಗೆ ಅರ್ಥವಾ ಗುವ ಹೊತ್ತಿಗೆ ಕಾಲ ಮಿಂಚಿತ್ತು. ಅವರ ರಾಜಕೀಯ ಕೋಟೆಗೆ ನುಗ್ಗಿದ ಚಿಡ್ಡಿಗಳು ಅವರ ಬೆಂಬಲದ ವಲಯವನ್ನೇ ಕೊಳ್ಳೆಹೊಡೆದಿದ್ದರು. ಬಂ ಬಿಜೆಪಿ ಬಿಟ್ಟರೂ ಅವರ ಬೆಂಬಲಿಗರು ಆ ಪಕ್ಷವನ್ನು ಬಿಡಲಿಲ್ಲ. ಬಂರೇ ರಾಜಕೀಯಕ್ಕೆ ಎಳೆತಂದಿದ್ದ ಗೋಪಾಲಕೃಷ್ಣ ಬೇಲೂರು, ಹರತಾಳು ಹಾಲಪ್ಪ ಕೂಡ ಅವರನ್ನು ತೊರೆದು ಬಿಜೆಪಿ ಅಪ್ಪಿಕೊಂಡಿ ದ್ದರು.


ಆಗ ಬಿಜೆಪಿ ಬಿಟ್ಟ ಬಂ ಕೂಡಲೇ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದರೆ, ಒಂದಿಷ್ಟು ಹಾನಿಯನ್ನಾದರೂ ಸರಿಪಡಿಸಿಕೊಳ್ಳಬಹುದಿತ್ತು. ಅದನ್ನು ಬಿಟ್ಟು, ಸಮಾಜವಾದಿ ಪಕ್ಷ ಸೇರಿದರು. ಇನ್ಯಾವ ಕಾರಣಕ್ಕೂ ಈ ಪಕ್ಷ ಬಿಡುವುದಿಲ್ಲ ಎಂದು ಬೆಂಬಲಿಗರಿಗೆ ಹೇಳಿದರು. ತಮ್ಮ ಶಕ್ತಿ ಕುಂದಿದೆ ಎಂಬುದನ್ನು ಅರ್ಥಮಾಡಿಕೊಳ್ಳದೇ ಅಹಂ ನಿಂದಲೇ ವರ್ತಿಸಿದರು. ತಮ್ಮ ಜೊತೆ ಗಿದ್ದ ಬೆರಳೆಣಿಕೆಯಷ್ಟು ಮಂದಿ ಬೆಂಬಲಿಗರ ಸಾಮರ್ಥ್ಯವನ್ನೂ ಅರ್ಥಮಾಡಿಕೊಳ್ಳದೆ ಸರ್ವಾಧಿಕಾರಿ ಯಂತೆ ವರ್ತಿಸಿದರು. ಕೊನೆಗೆ ಶಿಕಾರಿಪುರ ಚುನಾವಣೆಯಲ್ಲಿ ನಿಂತು, ಮಣ್ಣು ಮುಕ್ಕಿದರು.

ಈಗ ಬಂಗೆ ತಮ್ಮ ತಪ್ಪಿನ ಅರಿವಾಗಿರಬ ಹುದು. ಹೀಗಾಗಿಯೇ ತವರು ಜಿಲ್ಲೆ ಶಿವಮೊಗ್ಗದ ಕಾಂಗ್ರೆಸ್ ನಾಯಕರ ಒಪ್ಪಿಗೆಯನ್ನು ಪಡೆದು ಕೊಂಡೇ ಪಕ್ಷಕ್ಕೆ ಮರಳಲು ಮುಂದಾಗಿದ್ದರು. ಯಾವುದೇ ಪರತ್ತು ವಿಧಿಸದೆ, ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷೆ ಮಾತ್ರ ತಮಗಿದೆ ಎಂದು ಹೇಳಿಕೊಂಡಿದ್ದರು. ಆದರೆ ಕಾಂಗ್ರೆಸ್ ಹೈಕಮಾಂಡ್ ಈಗ ಅಶಕ್ತ ನಾಯಕ ನನ್ನು ಅವಮಾನಿಸಿ, ಮುಯ್ಯಿ ತೀರಿಸಿಕೊಳ್ಳಲು ಹೊರಟಂತಿದೆ.

▶▶▶

ಅಡ್ವಾನಿಗೆ ಶೇಖಾವತ್ ಅಡ್ಡಗಾಲು!

ಯಾವುದೇ ಚುನಾವಣೆ ಬರಲಿ, ತಮ್ಮ ಪಕ್ಷ ಗೆದ್ದರೆ ಸರ್ಕಾರದ ನೇತೃತ್ವವನ್ನು ಯಾರು ವಹಿಸಿಕೊಳ್ಳುತ್ತಾರೆ ಎಂಬುದನ್ನು ಮೊದಲೇ ಘೋಷಿಸುವುದು ಬಿಜೆಪಿಯ ನೀತಿ. ಈ ಹಿಂದೆ ಲೋಕಸಭಾ ಚುನಾವಣೆಗಳಲ್ಲಿ ವಾಜಪೇಯಿಯವರನ್ನು ಮುಂದಿನ ಪ್ರಧಾನಿ ಎಂದೂ, ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಯಡಿಯೂರಪ್ಪ ಮುಂದಿನ ಮುಖ್ಯಮಂತ್ರಿ ಎಂದೂ ಚುನಾವಣೆಗೆ ಮುಂಚಿತ ವಾಗಿಯೇ ಘೋಷಿಸಿತ್ತು. ಹೀಗೆ ಘೋಷಿತಗೊಂಡ ವ್ಯಕ್ತಿಯ ಬಗ್ಗೆ ಬಿಜೆಪಿಯೊಳಗೇ ಅಸಮಾಧಾನವಿದ್ದರೂ ಸಾಮಾನ್ಯವಾಗಿ ಎಲ್ಲರೂ ತುಟಿಪಿಟಕ್ಕೆನ್ನದೆ ಬಾಯ್ಮುಚ್ಚಿ ಕೊಂಡಿರಬೇಕು ಎಂಬುದೂ ಆ ಪಕ್ಷದ ಅಲಿಖಿತ ನಿಯಮ.



ಆದರೆ, ಈ ಪರಂಪರೆಯನ್ನು ಬುಡಮೇಲು ಮಾಡುವ ಪ್ರಯತ್ನವೊಂದು ಈಗ ಪ್ರಾರಂಭವಾಗಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆದ್ದರೆ ಎಲ್.ಕೆ.ಅಡ್ವಾಣಿಯೇ ಪ್ರಧಾನ ಮಂತ್ರಿಯಾಗುತ್ತಾರೆ ಎಂದು ಘೋಷಿಸಲಾಗಿದೆಯಾದರೂ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಉಪರಾಷ್ಟ್ರಪತಿ ಭೈರೋನ್ ಸಿಂಗ್ ಶೇಖಾವತ್ ಈಗ ಅಡ್ವಾನಿಯ ಮಹತ್ವಾಕಾಂಕ್ಷಿ ಪ್ರಧಾನಿ ಕುರ್ಚಿಗೆ ಬಹಿರಂಗವಾಗಿ ಅಡ್ಡಗಾಲು ಹಾಕುತ್ತಿದ್ದಾರೆ. ಜೊತೆಗೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಸಕ್ರಿಯ ರಾಜಕಾರಣಕ್ಕೆ ಹಿಂತಿರುಗುವ ಸೂಚನೆಯನ್ನೂ ಕೊಟ್ಟಿದ್ದಾರೆ. ಈಗಾಗಲೇ ಅಡ್ವಾಣಿಯವರನ್ನು ಮುಂದಿನ ಎನ್‌ಡಿಎದ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಾಗಿದೆಯಲ್ಲ ಎಂದು ಪತ್ರಕರ್ತರು ಕೇಳಿದರೆ "ಪಕ್ಷದ ಸಂಘಟನಾತ್ಮಕ ಶ್ರೇಣಿಯಲ್ಲಿ ವಯಸ್ಸಿನಲ್ಲಿ ನಾನೇ ಎಲ್ಲರಿಗಿಂತ ಸೀನಿಯರ್. ಮಾಜಿ ಪ್ರಧಾನಿ ವಾಜಪೇಯಿ ಮತ್ತು ಅಡ್ವಾನಿ ನನಗಿಂತ ಕಿರಿಯರು. ನಾನು ಸಕ್ರಿಯ ರಾಜಕಾರಣಕ್ಕೆ ಬಂದಾಗ ರಾಜನಾಥ್‌ಸಿಂಗ್ ಇನ್ನೂ ಹುಟ್ಟೇ ಇರಲಿಲ್ಲ. ಅವರ ಆದೇಶಗಳನ್ನು ಯಾರು ಪಾಲಿಸುತ್ತಾರೆ? ಅಡ್ವಾಣಿ ಎನ್‌ಡಿಎದ ಪ್ರಧಾನ ಮಂತ್ರಿ ಅಭ್ಯರ್ಥಿ ಎಂಬುದು ನನಗೆ ಗೊತ್ತೇ ಇಲ್ಲ. ಒಂದು ವೇಳೆ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಯಾರೋ ಹೇಳಿದ್ದರೇನಂತೆ. ಲೋಕಸಭಾ ಚುನಾವಣೆಗೆ ಅವರೊಬ್ಬರೇ ಸ್ಪರ್ಧಿಸುತ್ತಿಲ್ಲ. ನಾನೂ ಸ್ಪರ್ಧಿಸುತ್ತಿದ್ದೇನೆ" ಎಂದು ಖಾರವಾಗಿಯೇ ಹೇಳುವ ಮೂಲಕ ಬಿಜೆಪಿಯೊಳಗೆ ಹೊಗೆಯಾಡುತ್ತಿರುವ ತಿಕ್ಕಾಟವನ್ನು ಹೊರಗೆಡವಿದ್ದಾರೆ.

ಮೂರು ಬಾರಿ ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದ ದೇಶದ ಉಪರಾಷ್ಟ್ರಪತಿ ಕುರ್ಚಿ ಹತ್ತಿ ಇಳಿದಿರುವ, ಎನ್‌ಡಿಎ ಅಭ್ಯರ್ಥಿಯಾಗಿ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿ ಯುಪಿಎ ಅಭ್ಯರ್ಥಿ ಪ್ರತಿಭಾ ಪಾಟೀಲ್ ಎದುರು ಹೀನಾಯವಾಗಿ ಸೋಲುಂಡ ಶೇಖಾವತ್ ಒಂದೆಡೆ ಅಡ್ವಾನಿಯ ಮೇಲೂ ಮತ್ತೊಂದೆಡೆ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಬಿಜೆಪಿಯ ವಸುಂಧರಾ ರಾಜೇ ಮೇಲೂ ಏಕಕಾಲಕ್ಕೆ ಯುದ್ಧ ಸಾರಿದ್ದಾರೆ. ವಸುಂಧರಾ ರಾಜೇ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬರೊಬ್ಬರಿ ಇಪ್ಪತ್ತೆರಡು ಸಾವಿರ ಕೋಟಿ ರೂಪಾಯಿಗಳ ಮೆಗಾ ಭ್ರಷ್ಟಾಚಾರ ಎಸಗಿದ್ದಾರೆ. ಅದರ ವಿರುದ್ಧ ತನಿಖೆ ನಡೆಸಬೇಕೆಂದು ರಾಜಸ್ಥಾನದ ಹಾಲಿ ಮುಖ್ಯಮಂತ್ರಿ ಕಾಂಗ್ರೆಸ್‌ನ ಅಶೋಕ್ ಗೆಲ್ಹೋಟ್ ಅವರಿಗೆ ಪತ್ರ ಬರೆದಿದ್ದಾರೆ. ಇದರಿಂದ ಯಾರಿಗೆ ಎಷ್ಟು ಒಳ್ಳೆದಾಗುತ್ತೋ, ಯಾರಿಗೆ ಎಷ್ಟು ಕೆಟ್ಟದಾಗುತ್ತೋ ಗೊತ್ತಿಲ್ಲ. ಆದರೆ ಬಿಜೆಪಿಯೊಳಗಿನ ಈ ಆಂತರಿಕ ತಿಕ್ಕಾಟದಿಂದ ಆ ಪಕ್ಷದ ಹುಳುಕುಗಳು ಒಂದೊಂದಾಗಿ ಹೊರಬೀಳಲಾರಂಭಿಸಿವೆ.

ತಮ್ಮದೇ ಪಕ್ಷದಲ್ಲಿ ಹೀಗೆ ಶೇಖಾವತ್ ಎಂಬ ಮಗ್ಗಲಮುಳ್ಳು ಚುಚ್ಚಲಾರಂಭಿಸಿದಂತೆ ಇಡೀ ಬಿಜೆಪಿ ಮತ್ತು ಸಂಘಪರಿವಾರದ ನಾಯಕತ್ವ ಬೆಚ್ಚಿ ಬಿದ್ದಿದೆ. ಕೈಗೆ ಬಂದ ಪ್ರಧಾನಿ ಪಟ್ಟದ ತುತ್ತು ಬಾಯಿಗೆ ಬರುತ್ತೋ ಇಲ್ಲವೋ ಎಂಬ ಆತಂಕದಿಂದ ಅಡ್ವಾಣಿಯ ಮುಖವಂತೂ ಬಾಡಿದ ಕಮಲವಾಗಿಬಿಟ್ಟಿದೆ. ಶೇಖಾವತ್ ಅವರ ಕೋಪವನ್ನು ಶಮನ ಮಾಡುವುದಕ್ಕೆ ಅಥವಾ ದಮನ ಮಾಡುವುದಕ್ಕೆ ಸಂಘಪರಿವಾರ ಮತ್ತು ಬಿಜೆಪಿ ನಾಯಕತ್ವ ಸರ್ಕಸ್ ಪ್ರಾರಂಭಿಸಿದೆ. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ರಾಜನಾಥ್ ಸಿಂಗ್, ಹಿರಿಯ ನಾಯಕ ಜಸ್ವಂತ್ ಸಿಂಗ್ ಮುಂತಾದ ನಾಯಕರು, ಸಂಘದ ಶಿಖಾಮಣಿಗಳು ಒಬ್ಬರಾದ ಮೇಲೊಬ್ಬರಂತೆ ಶೇಖಾವತ್ ಅವರನ್ನು ಭೇಟಿ ಮಾಡಿ ಸಂತೈಸುತ್ತಿದ್ದಾರಾದರೂ ಶೇಖಾವತ್ ಬೆಂಕಿ ಉಗುಳುವುದನ್ನು ನಿಲ್ಲಿಸಿಲ್ಲ; ಬದಲಿಗೆ ಇನ್ನಷ್ಟು ಪ್ರಖರವಾಗಿ ಉಗುಳುತ್ತಿದ್ದಾರೆ.

ಮೂಲ ವಿಚಾರಕ್ಕೇ ಬರುವುದಾದರೆ, ಎನ್‌ಡಿಎ ಗೆದ್ದರೆ ಶೇಖಾವತ್ ಪ್ರಧಾನಿಯಾಗಬೇಕೋ ಅಥವಾ ಅಡ್ವಾನಿ ಪ್ರಧಾನಿಯಾಗಬೇಕೋ ಎಂಬ ಚರ್ಚೆಯೇ ಅಪ್ರಸ್ತುತ. ಏಕೆಂದರೆ ಅವರಿಬ್ಬರಲ್ಲೂ ಯಾವುದೇ ವ್ಯತ್ಯಾಸಗಳಿಲ್ಲ. ಏಕೆಂದರೆ ಇಬ್ಬರೂ ಒಂದರ್ಥದಲ್ಲಿ ದೇಶದ್ರೋಹಿಗಳೆ.

1992ರಲ್ಲಿ ಅಡ್ವಾನಿ ದೇಶದಾದ್ಯಂತ ರಥಯಾತ್ರೆ, ಇಟ್ಟಿಗೆ ಯಾತ್ರೆ ಮಾಡಿ ದೇಶದ ಜನರಲ್ಲಿ ಶತಮಾನಗಳಿಂದ ಮನೆ ಮಾಡಿದ್ದ ಕೋಮು ಸೌಹಾರ್ದತೆಯ ಸೌಧವನ್ನು ಒಡೆದರು; ಒಂದು ಸಮುದಾಯ ಮತ್ತೊಂದು ಸಮುದಾಯವನ್ನು ಶತ್ರುಗಳಂತೆ ನೋಡುವಂತೆ ದ್ವೇಷ ಅಸೂಯೆಗಳನ್ನು ಬಿತ್ತಿದರು; 1992ರ ಡಿಸೆಂಬರ್ ೬ರಂದು ಚಾರಿತ್ರಿಕ ಬಾಬ್ರಿ ಮಸೀದಿಯನ್ನು ಒಡೆಯುವ ಹೀನ ಕೃತ್ಯದಲ್ಲಿ ಖುದ್ದು ಭಾಗವಹಿಸಿ ದೇಶದ ಅಲ್ಪಸಂಖ್ಯಾತ ಸಮುದಾಯದ ಮೇಲೆ ಎಂದೂ ಮಾಸದ ಗಾಯವನ್ನು ಮಾಡಿದರು; ಬಾಬ್ರಿ ಮಸೀದಿ ಧ್ವಂಸದ ಬೆನ್ನಿನಲ್ಲೇ ಮುಂಬಯಿ, ಸೂರತ್‌ಗಳನ್ನೂ ಒಳಗೊಂಡಂತೆ ದೇಶದಾದ್ಯಂತ ಕೋಮು ಗಲಭೆಗಳನ್ನು ಎಬ್ಬಿಸಿ ಮುಸ್ಲಿಮರ ಮಾರಣ ಹೋಮ ಮಾಡಿದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಬಹುಧರ್ಮೀಯ, ಬಹು ಸಂಸ್ಕೃತಿಯ, ಬಹುಜಾತಿಯ ಭಾರತದಲ್ಲಿ ವೈವಿಧ್ಯತೆಗಳಿದ್ದರೂ ಶಾಂತಿ-ಸಹಬಾಳ್ವೆಗೆ, ಸಮುದಾಯಗಳ 'ಜೊತೆಗೂಡಿ ಬದುಕುವ' ಸೌಹಾರ್ದ ಪರಂಪರೆಗೆ ಕೊಡಲಿ ಪೆಟ್ಟು ಕೊಟ್ಟರು. ದೇಶದ ಸೌಹಾರ್ದ ಪರಂಪರೆಗೆ ಅಡ್ವಾನಿ ಮಾಡಿದ ಡ್ಯಾಮೇಜನ್ನು ಸರಿಪಡಿಸು ವುದಕ್ಕೆ ಕನಿಷ್ಠ ಒಂದು ಶತಮಾನವಾದರೂ ಬೇಕಾಗುತ್ತದೆ. ಇಂಥ ಒಬ್ಬ ನರಹಂತಕ ಪ್ರಧಾನಿಯಾದರೆ ದೇಶಕ್ಕೆ ಆಗಬಹುದಾದ ಅನಾಹುತವನ್ನು ಊಹಿಸುವುದೂ ಸಾಧ್ಯವೆ?

ಇನ್ನು ಶೇಖಾವತ್ ಏನೂ ಕಡಿಮೆಯಿಲ್ಲ. ಅಡ್ವಾನಿಯಂತೆ ಇವರು ರಕ್ತಪಿಪಾಸಿನಂತೆ ಕಾಣುವುದಿಲ್ಲ ವಾದರೂ ಇವರು ಬಿಜೆಪಿಯಂಥ ಕೋಮುವಾದಿ, ನರಹಂತಕ ಪಕ್ಷದ ಸಂಸ್ಥಾಪಕರಲ್ಲೊಬ್ಬರು. ಹತ್ತಾರು ದಶಕಗಳಿಂದ ಬಿಜೆಪಿ-ಸಂಘಪರಿವಾರ ದೇಶದಾದ್ಯಂತ ನಡೆಸುತ್ತಿರುವ ದೌರ್ಜನ್ಯಗಳಿಗೆ, ಮಾರಣಹೋಮಗಳಿಗೆ ಬೆಂಗಾವಲಾಗಿ ನಿಂತವರು. ೨೦೦೨ರಲ್ಲಿ ನರೇಂದ್ರ ಮೋದಿ ಎಂಬ ರಕ್ತಪಿಪಾಸು ಗುಜರಾತ್‌ನಲ್ಲಿ ಮೂರು ಸಾವಿರ ಮುಸ್ಲಿಮರ ಮಾರಣಹೋಮ ಮಾಡಿದಾಗ ಇದೇ ಶೇಖಾವತ್ 'ನಾನು ರಾಜಸ್ಥಾನವನ್ನು ಗುಜರಾತ್ ಮಾಡುತ್ತೇನೆ' ಎಂದು ಘೋಷಿಸಿದ್ದರು. ಇವರಿಗೆ ಭರತಖಂಡದ ಬಗ್ಗೆ ಎಂಥ ಗೌರವವಿದೆ, ಎಷ್ಟೊಂದು ಪ್ರೀತಿ ಇದೆ, ದೇಶಕ್ಕಾಗಿ ಎಂತೆಂಥಾ ತ್ಯಾಗಗಳನ್ನು

▶▶▶

ಸಣ್ಣ ಮನಸ್ಸಿನ ವೀರಪ್ಪ

ಸೋತು ಸುಣ್ಣವಾಗಿರುವ ಬಂ ಕಾಂಗ್ರೆಸ್ ಪಕ್ಷಕ್ಕೆ ಮರಳುವುದರಿಂದ ಪಕ್ಷಕ್ಕೆ ಹೆಚ್ಚಿನ ಲಾಭವೇನೂ ಆಗದು. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಒಂದಿಷ್ಟು ಬದಲಾವಣೆಗಳಾಗಬಹುದು. ಏನಿಲ್ಲವೆಂದರೂ, ಬಂರೆಂದರೆ ಈಗಲೂ ಬೆಚ್ಚಿ ಬೀಳುವ ಜಿಲ್ಲೆಯ ಬಿಜೆಪಿ ನಾಯಕರನ್ನು ಹೆದರಿಸಬಹುದು. ದಿನದಿಂದ ದಿನಕ್ಕೆ ಬಲಗೊಳ್ಳುತ್ತಿರುವ ಬಿಜೆಪಿಯ ಪ್ರಾಬಲ್ಯವನ್ನು ಯಾವೆಲ್ಲಾ ಮಾರ್ಗಗಳ ಮೂಲಕ ಕಡಿಮೆ ಮಾಡಬಹುದೋ ಅದನ್ನೆಲ್ಲಾ ಮಾಡಲು ಕಾಂಗ್ರೆಸ್ ಮುಂದಾಗಬೇಕಿದೆ. ಹೀಗಾಗಿ 'ಮುದಿ ಹುಲಿ'ಯಂತಿರುವ ಬಂರನ್ನು ಒಂದಿಷ್ಟು ಗೌರವದಿಂದಲೇ ಪಕ್ಷಕ್ಕೆ ಬರಮಾಡಿಕೊಳ್ಳಬೇಕಿತ್ತು. ಆದರೆ ಬಂರ ಹಳೆಯ ವೈರಿ ವೀರಪ್ಪ ಮೊಯ್ಲಿ ಇನ್ನೂ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಂತಿಲ್ಲ. ಹೀಗಾಗಿ ವಿಶಾಲ ಹೃದಯದಿಂದ ಬಂರನ್ನು ಅಪ್ಪಿಕೊಳ್ಳದೆ ಸಣ್ಣ ಮನಸ್ಸಿನವರಂತೆ ತಗಾದೆ ತೆಗೆದಿದ್ದಾರೆ. ಹೀಗಾಗಿ ಬಂಗೆ ಪಕ್ಷದ ಹೈಕಮಾಂಡ್ ದರ್ಶನ ಸಾಧ್ಯವಾಗಿಲ್ಲ.

ಮತ್ತೆ ಪಕ್ಷ ಬಿಡುವುದಿಲ್ಲ ಎನ್ನುವುದಾದರೆ ಬಂ ಪಕ್ಷಕ್ಕೆ ಬರಲಿ, ಹಾಗೆ-ಹೀಗೆ ಎಂದೆಲ್ಲಾ ವೀರಪ್ಪ ಮೊಯ್ಲಿ ಮಾತನಾಡಿದ್ದಾರೆ. ಇದಕ್ಕೆ ರಾಜ್ಯದಲ್ಲಿ ಜನಾರ್ದನ ಪೂಜಾರಿ ಕೂಡ ದನಿಗೂಡಿಸಿದ್ದಾರೆ. ಇವರಿಬ್ಬರೂ ಹೇಳುತ್ತಿರುವ ಮಾತಿನಲ್ಲಿ ತಪ್ಪಿಲ್ಲದಿದ್ದರೂ, ಅದು ಈಗಿನ ಪರಿಸ್ಥಿತಿಯಲ್ಲಿ ಅವಶ್ಯವಾಗಿರಲಿಲ್ಲ ಎಂಬುದನ್ನು ಇವರಿಬ್ಬರೇ ಅರ್ಥಮಾಡಿಕೊಳ್ಳಬೇಕು.

ಪಕ್ಷದ ಹೈಕಮಾಂಡ್ ಭೇಟಿಗೆಂದು ದೆಹಲಿಗೆ ತೆರಳಿದ್ದ ಬಂಗಾರಪ್ಪ ಹಿಂದಿರುಗಿದ್ದಾರೆ. "ನಾನು ಸೋನಿಯಾ ಗಾಂಧಿ ಭೇಟಿಗೆ ಹೋಗಿರಲಿಲ್ಲ, ರಕ್ಷಣಾ ಸ್ಥಾಯಿ ಸಮಿತಿ ಸಭೆಯಲ್ಲಿ ಭಾಗವಹಿಸಲು ಹೋಗಿದ್ದೆ" ಎಂದು ಬಂಗಾರಪ್ಪ ಈಗ ಹೇಳುತ್ತಿದ್ದಾರಾದರೂ, ಶಿವಮೊಗ್ಗದಲ್ಲಿ ತಾವು ಸೋನಿಯಾ ಗಾಂಧಿಯನ್ನು ಭೇಟಿಯಾಗಲು ಹೋಗುತ್ತಿರುವುದಾಗಿ ಅಧಿಕೃತ ಹೇಳಿಕೆ ನೀಡೇ ಹೋಗಿದ್ದರು. ಪಕ್ಷ ಸೇರಲು ದೊಡ್ಡ ಸಮಾವೇಶ ನಡೆಸುವ ಕುರಿತು ಜಿಲ್ಲಾ ಕಾಂಗ್ರೆಸ್ ನಾಯಕರೊಂದಿಗೆ ಸಮಾಲೋಚಿಸಿದ್ದರು. ಆದರೆ ಹೈಕಮಾಂಡ್ ಅವರನ್ನು ಕೂಡಲೇ ಅಪ್ಪಿಕೊಳ್ಳದೆ, ಎಚ್ಚರಿಕೆಯಿಂದ ವರ್ತಿಸಿದೆ. ಹೀಗಾಗಿ ಯಾವ ನಿರ್ಧಾರಕ್ಕೆ ಬಾರದೆ ಹಿಂದಿರುಗಿರುವ ಬಂ ಪಕ್ಷ ಅಧಿಕೃತ ಆಹ್ವಾನ ನೀಡಿದ ಕೂಡಲೇ ಸೇರುತ್ತೇನೆ ಎಂದು ಹೇಳುತ್ತಿದ್ದಾರೆ. ಈ ಎಲ್ಲ ಬೆಳವಣಿಗೆ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ನಾಯಕರಲ್ಲಿ ಒಂದಿಷ್ಟು ನಿರಾಸೆ ಮೂಡಿಸಿದೆ.

ರಾಜ್ಯದಲ್ಲಿ ಬಿಜೆಪಿ ಬೆಳೆಯಲು ದೇವೇಗೌಡರಂತೆ ಬಂ ಕೂಡ ಕಾರಣ ರಾಗಿದ್ದಾರೆ. ಇವರಿಬ್ಬರ ತಪ್ಪಿಗೆ ಈಗ ಶಿಕ್ಷೆ ನೀಡುವ ಸಮಯವಲ್ಲ. ತಪ್ಪನ್ನು ಅರಿವು ಮಾಡಿಕೊಟ್ಟು, ಜಾತ್ಯತೀತ ಶಕ್ತಿಗಳನ್ನು ಮತ್ತೆ ಒಗ್ಗೂಡಿಸುವ ಕೆಲಸವನ್ನು ಕಾಂಗ್ರೆಸ್ ಮಾಡಬೇಕಿದೆ. ಇದು ಆ ಪಕ್ಷದ ಸದ್ಯದ ಜವಾಬ್ದಾರಿ. ■

ಮಾಡಿದ್ದಾರೆಂಬುದು ಅವರ ಚರಿತ್ರೆಯನ್ನು ನೋಡಿದರೆ ಅರ್ಥವಾಗುತ್ತದೆ.

ತಮ್ಮ ತಾಯ್ನಾಡನ್ನು ಬ್ರಿಟಿಷರ ಕಪಿಮುಷ್ಠಿಯಿಂದ ವಿಮೋಚನೆಗೊಳಿಸಬೇಕೆಂಬ ಉದಾತ್ತ ಉದ್ದೇಶದಿಂದ 1942ರಲ್ಲಿ ಮಹಾತ್ಮಾ ಗಾಂಧಿಜಿಯವರ ಕರೆಗೆ ಓಗೊಟ್ಟು ಇದೀ ದೇಶ ಒಗ್ಗಟ್ಟಿನಿಂದ 'ಭಾರತ ಬಿಟ್ಟು ತೊಲಗಿ' (Quit India) ಚಳವಳಿಯಲ್ಲಿ ಭಾಗವಹಿಸಿತ್ತು. ತಾಯ್ನಾಡಿನ ವಿಮೋಚನೆಗಾಗಿ ಹಿಂದೂ-ಮುಸ್ಲಿಮರೆನ್ನದೆ, ಬಡವ-ಬಲ್ಲಿದರೆನ್ನದೆ, ಮೇಲ್ಜಾತಿ-ಕೆಳಜಾತಿಗಳೆನ್ನದೆ, ಮಹಿಳೆ-ಮಕ್ಕಳೆನ್ನದೆ ಇದೀ ದೇಶ ಮನೆಮಠಗಳನ್ನು ಬಿಟ್ಟು ಒಗ್ಗಟ್ಟಿನಿಂದ ಬ್ರಿಟಿಷರ ವಿರುದ್ಧ ಬೀದಿ ಕಾಳಗದಲ್ಲಿ ತೊಡಗಿತ್ತು. ಎಷ್ಟೋ ಜನ ಬ್ರಿಟಿಷ್ ಸೈನಿಕರು ಹಾರಿಸುತ್ತಿದ್ದ ಗುಂಡುಗಳಿಗೆ ಎದೆಯೊಡ್ಡಿ ವೀರಮರಣವನ್ನಪ್ಪಿದರು. ಆ ಸಮಯದಲ್ಲಿ ಶ್ರೀಮಾನ್ ಭೈರೋನ್ ಸಿಂಗ್ ಶೇಖಾವತ್ ಸಾಹೇಬ್ರು ಬ್ರಿಟಿಷರೊಂದಿಗೆ ಶಾಮೀಲಾಗಿದ್ದರು; ಬ್ರಿಟಿಷರು ಕೊಡುವ ಬಿಡಿಗಾಸಿಗಾಗಿ ಬ್ರಿಟಿಷರ ಪೊಲೀಸ್ ಪಡೆಯಲ್ಲಿ ಸೇರಿಕೊಂಡು ಭರತಖಂಡದ ವಿಮೋಚನೆಗಾಗಿ ಹೋರಾಡುತ್ತಿದ್ದ ದೇಶಪ್ರೇಮಿ ಭಾರತೀಯರನ್ನು ನಿರ್ದಾಕ್ಷಿಣ್ಯವಾಗಿ ಬಗ್ಗು ಬಡಿಯುವ ಮಹಾನ್ ದೇಶದ್ರೋಹಿ ಕೆಲಸದಲ್ಲಿ ತೊಡಗಿದ್ದರು. ಇದು ಶೇಖಾವತ್‌ರ ದೇಶಪ್ರೇಮದ ಚರಿತ್ರೆ.

ಈ ಹೊತ್ತು ಶೇಖಾವತ್ ಅವರು ತಮ್ಮದೇ ಪಕ್ಷದ ವಸುಂಧರಾ ರಾಜೇ ಮುಖ್ಯಮಂತ್ರಿಯಾಗಿದ್ದಾಗ ಆಗಿರುವ ಇಪ್ಪತ್ತೆರಡು ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರ ಬಗ್ಗೆ ತನಿಖೆಯಾಗಲಿ ಎಂದು ಆಗ್ರಹಿಸುತ್ತಿದ್ದಾರೆ. ಭ್ರಷ್ಟಾಚಾರ ನಡೆದಿದೆಯೆಂದರೆ ಅದರ ಬಗ್ಗೆ ತನಿಖೆಯಾಗಲಿ ಬಿಡಿ: ಮಾಡಿದ ತಪ್ಪಿಗೆ ವಸುಂಧರಾ ರಾಜೆ ಜೈಲು ಕಂಬಿ ಎಣಿಸಲಿ. ಆದರೆ, ಅಂತಹ ಒಂದು ಬೇಡಿಕೆಯನ್ನಿಡುವುದಕ್ಕೆ ಶೇಖಾವತ್‌ಗೇನು ನೈತಿಕ ಹಕ್ಕಿದೆ? ಇವೆಷ್ಟು ಸಾಚಾ ಎಂಬುದನ್ನು ಅವರ ಚರಿತ್ರೆಯೇ ಬಿಚ್ಚಿ ಹೇಳುತ್ತದೆ. 1947ರಲ್ಲಿ ಅವರು 25 ವರ್ಷದವರಿದ್ದಾಗಲೇ ಲಂಚ ಪಡೆದ ಆರೋಪದ ಮೇಲೆ ಬ್ರಿಟಿಷರ ಪೊಲೀಸ್ ಪಡೆಯಿಂದ ಅವರನ್ನು ಸಸ್ಪೆಂಡ್ ಮಾಡಲಾಗಿತ್ತು. ಅಲ್ಲಿಂದ ಪ್ರಾರಂಭವಾದ ಅವರ ಭ್ರಷ್ಟಾಚಾರ ಮುಂದುವರೆಯಿತು. ಅವರು ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದಾಗ ಅವರ ಅಳಿಯ ಕೋಟ್ಯಾಂತರ ರೂಪಾಯಿ ಹಗರಣ ಮಾಡಿಕೊಂಡಿದ್ದು, ಆಗ ಆತನನ್ನು ರಕ್ಷಿಸಲು ಶೇಖಾವತ್ ಇನ್ನಿಲ್ಲದ ಸರ್ಕಸ್ ಮಾಡಿದ್ದರು.

ಭ್ರಷ್ಟಾಚಾರ ಮತ್ತು ದೇಶದ್ರೋಹಗಳೇ ಶೇಖಾವತ್ ಅವರ ನರನಾಡಿಗಳಲ್ಲಿ ಹರಿಯುತ್ತಿರುವಾಗ ಅಂಥವರು ಈ ದೇಶದ ಪ್ರಧಾನಿಯಾದರೆ ಈ ದೇಶ ಉಳಿಯುತ್ತದೆಯೇ?

ವಾಸ್ತವದಲ್ಲಿ ಬಿಜೆಪಿಯಲ್ಲಿರೋ ಲೀಡರುಗಳೆಲ್ಲಾ ಇಂಥವರೆ. ಈಗಾಗಲೇ ದೇಶದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯ ದೇಶಪ್ರೇಮ(!)ದ ಕತೆಯನ್ನೇ ನೋಡಿ. ಪ್ರಧಾನಿ ಪಟ್ಟ ಏರುವ ತನಕ ಬಿಟ್ಟು ಬಿಡದೇ ಅವರೊಬ್ಬ ಅಪ್ರತಿಮ ದೇಶಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ ಎಂದೆಲ್ಲಾ ಬಿಂಬಿಸಲಾಗಿತ್ತು. ಆದರೆ ಹಕೀಕತ್ತೇನಾಗಿತ್ತೆಂದರೆ, ವಾಜಪೇಯಿ ಎಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ! ಬದಲಿಗೆ ಬ್ರಿಟಿಷರಿಗೆ ಸಹಕರಿಸುವುದಾಗಿ ಪತ್ರ ಬರೆದುಕೊಟ್ಟು ಅಸಲಿ ಸ್ವಾತಂತ್ರ್ಯ ಹೋರಾಟಗಾರನನ್ನು ಜೈಲಿಗೆ ದೂಡುವಲ್ಲಿ ನೆರವಾಗಿದ್ದ ದೇಶಪ್ರೇಮಿ ಅವರು.

ಹೀಗೆ ಬಿಜೆಪಿ ನಾಯಕ ಶಿಖಾಮಣಿಗಳ ದೇಶದ್ರೋಹದ ಕತೆಗಳನ್ನು ಕೆದಕುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾದೀತು. ಅಂಥವರು ದೇಶಪ್ರೇಮದ ಮುಖವಾಡ ಹಾಕಿಕೊಂಡು ದೇಶದ ಆಡಳಿತದ ಚುಕ್ಕಾಣಿ ಹಿಡಿಯುತ್ತಿರುವುದು ದುರಂತವಾದರೂ ಸತ್ಯ. ವಾಜಪೇಯಿ ಪ್ರಧಾನಿಯಾಗಿದ್ದಾಯಿತು. ಈಗ ಭೈರೋನ್ ಸಿಂಗ್ ಶೇಖಾವತ್ ಮತ್ತು ಅಡ್ವಾಣಿ ರೇಸಿಗಿಳಿದಿದ್ದಾರೆ. ಬಿಜೆಪಿಯಲ್ಲಿ ಇದಕ್ಕಿಂತ ಉತ್ತಮ ನಾಯಕರು ಸಿಗುವುದಾದರೂ ಹೇಗೆ? ■

ಲಾಟಿ ಬೀಸೋ ಟ್ರೈನಿಂಗ್ ಮಾಷ್ಟ್ರು ಭೈರಪ್ಪ ಸಾರ್!

ಕಾಂಗ್ರೆಸ್ ಕ್ಷಯಕ್ಕೆ ತುತ್ತಾದಂತೆ ಕರಗುತ್ತ ಬಿಜೆಪಿ ಮತಾಂಧತೆಯಿಂದ ಕೊಬ್ಬುತ್ತಿರುವಾಗ, ದೇವೇಗೌಡರು ಸಾಹಿತಿಗಳನ್ನು ಕರೆದು ಸಲಹೆ ಕೇಳಿದ್ದು ಕುತೂಹಲ ಮೂಡಿಸಿತಲ್ಲಾ. ಈ ಬಗ್ಗೆ ಅವರನ್ನೇ ಕೇಳಿ ಅಭಿಪ್ರಾಯ ತಿಳಿದುಕೊಳ್ಳಬೇಕೆಂದು ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

ರಿಂಗ್ ಟೋನ್: "ಮುಂಜಾನೆದ್ದು ಕುಂಬಾರಣ್ಣ ಹಾಲುಬಾನುಂಡನಾ ಹಾರ‍್ಯಾಡಿ ಮಣ್ಣಾ ತುಳಿದಾನ, ಹಾರ‍್ಯಾಡಿ ಮಣ್ಣಾ ತುಳಿದಾನ.."

"ಹಲೋ?"

"ಹಲೋ? ಯಾರು ಸಾರ್ ಮಾತಾಡಿ."

"ನಾನು ಸಾರ್, ಯಾಹೂ ಅಂತ ಪತ್ರಕರ್ತ."

"ನಮಸ್ಕಾರ ಯಾಹೂ ಅವರೆ. ನಾನು ದತ್ತ ಮಾತಾಡ್ತಿರೋದು."

"ತಿಂದಿ ತಿಂತಾ ಇದೀರ ಸಾರ್?"

"ಇಲ್ಲ ಗೌಡರತ್ರ ಮಾತಾಡ್ತಿದ್ದೆ. ಕೊಟ್ಟೆ ಇರಿ."

"ನಾನು ಸಾರ್ ಯಾಹೂ."

"ಹೇಳಿ ಯಾಹೂ ಅವರೆ."

"ಸಾರಿ ಸಾರ್, ಆ ದಿನ ನಾನು ಬರಕ್ಕಾಗಲಿಲ್ಲ, ನಮ್ಮ ಸಾಹಿತಿಗಳು ಏನೇಳಿದ್ರು ಸಾರ್?"

"ಅವರ ಅನ್ನಿಸಿಕೆಗಳನ್ನ ಹೇಳಿದ್ರು. ಅವರ ಅಭಿಪ್ರಾಯನ ನಾನು ತುಂಬ ಗೌರವುಸ್ತಿನಿ. ಏಕೆಂದ್ರೆ ನಾನೇ ಅವರನ್ನ ಕರೆಸಿ ಅವರ ಅಭಿಪ್ರಾಯ ಕೇಳಲಿಲ್ಲ ಅಂದ್ರೆ ಹೇಗೆ."

ಥೂತ್ತೇರಿ

ಯಾಹೂ

"ಹೌದು ಸಾರ್, ಸಾಮಾನ್ಯವಾಗಿ ಸಾಯಿತಿಗಳು ತಾವು ಹೇಳೋದನ್ನ ಎದುರಿಗಿದ್ದವರು ಕೇಳಿಸಿಕೊಬೇಕು ಅಂತ ಇಷ್ಟಪಡ್ತರೆ. ಆನಂತರ ಬೇರೆಯವರು ಹೇಳೋದನ್ನ ಅಷ್ಟಾಗಿ ಕೇಳಿಸಿಕೊಳ್ಳಲ್ಲ."

"ಅದೇನೊ, ಪತ್ರಕರ್ತರಾದ ನೀವೆ ಹೇಳಬೇಕು. ನಾನಂತೂ ಅವರ ಅಭಿಪ್ರಾಯಗಳನ್ನ ಕೇಳಿಸಿಕೊಂಡೆ."

"ಈ ಸಮಯದಲ್ಲಿ ಸಾಯಿತಿಗಳನ್ನು ಕರೆಸೊ ಅಗತ್ಯವೇನಿತ್ತು ಸಾರ್?"

"ನಮ್ಮ ಕುಮಾರಸ್ವಾಮಿ ಸಾರ್ವಜನಿಕವಾಗಿ ಸಾಹಿತಿ ಕಲಾವಿದರನ್ನು ಅವ್ರುರ್‍ನಾರು, ಇವರ್‍ನಾರು ಅಂತ ಕೇಳಿಬಿಡ್ತಾನೆ. ಅದಕ್ಕೆ ಅಂತವರ ಪರಿಚಯ ಇರ್ಲಿ ಅಂತ ಹೇಳಿ ನಮ್ಮ ದತ್ತ ಒಂದು ಸಲಹೆ ಕೊಟ್ಟ. ಅದರಂತೆ ಕೆಲವು ಜನ ಸಾಹಿತಿಗಳು ಬಂದುಹೋದ್ರು."

"ಅನಂತಮೂರ್ತಿ ಏನ್ಹೇಳಿದ್ರು ಸಾರ್?"

"ಅವರು ನಮ್ಮ ಹಿರಿಯ ಸಾಹಿತಿಗಳು. ಮೊದಲು ಹೆಗಡೆ ಜೊತೆ ಇದ್ದರು. ಪಟೇಲರ ಆತ್ಮೀಯ ಗೆಳೆಯರಾಗಿದ್ರು. ಅವರಿಂದಲೂ ಏನಾದ್ರು ನಮ್ಮ ಪಾರ್ಟಿಗೆ ಸಹಾಯವಾಗಬಹುದು ಅಂತ ಕರೆಸಿದ್ವೊ. ಬಹಳ ಚೆನ್ನಾಗಿ ಮಾತನಾಡಿದ್ರು. ಬಿಜೆಪಿಗಳ ಕುಟೀಲ ನೀತಿ ಏನಿದೇ ಅದನ್ನ ಅವರಷ್ಟು ಚೆನ್ನಾಗಿ ಯಾರೂ ತಿಳಕೊಂಡಿಲ್ಲ."

"ಎಂ.ಪಿ. ಟಿಕೆಟ್ ಕೊಟ್ಟು ಶಿವಮೊಗ್ಗಕ್ಕೆ ನಿಲ್ಲಿಸಿದರೆ ಹೇಗೆ ಸಾರ್?"

"ಅಲ್ಲಿ ನಮ್ಮ ಪಾರ್ಟಿ ಓಟು ಸುಮಾರು 50 ಸಾವಿರ ಇವೆ ಅಷ್ಟೆ. ಅಷ್ಟರಿಂದ ಗೆಲ್ಲಕ್ಕಾಗಲ್ಲ ಅಲ್ಲವೆ? ಅದರಲ್ಲೂ ಅನಂತಮೂರ್ತಿಯವರಿಗೆ ಸೋನಿಯಾ ಕಂಡರೆ ಗೌರವ ಭಾವನೆ ಇರಬಹುದು."

"ಅದ್ಯಂಗೇಳ್ತಿರಿ ಸಾರ್?"

"ಅನಂತಮೂರ್ತಿಯವರು ಕ್ರಿಶ್ಚಿಯನ್ ಹೆಣ್ಣುಮಗಳನ್ನ ಮದುವೆಯಾಗಿ ದ್ದಾರಲ್ಲವೆ?"

"ಕ್ರಿಶ್ಚಿಯನ್ ಮದುವೆಯಾದ ಕಾರಣಕ್ಕೆ ಅವರು ಕ್ರಿಶ್ಚಿಯನ್ ಪರ ಅಂತ ಹೇಳೋರು ನಿಮ್ಮ ಭೈರಪ್ಪನ ಕಡೆಯವರು ಸಾರ್."

"ನಮ್ಮ ಭೈರಪ್ಪ ಯಾರೂ?"

"ಸಂತೆಶಿವರದ ಶ್ಯಾನುಭೋಗರ ಮಗ ಭೈರಪ್ಪ ಸಾರ್. ಬ್ರಾಂಬ್ರು ಪೈಕಿ."

"ಆರೆಸ್ಸೆಸಿನವರ ಜೊತೆ ಇರ್ತರಲ್ಲವ?"

"ಇರದೇನು. ಲಾಟಿ ಬೀಸೋ ಟ್ರೈನಿಂಗ್ ಮಾಷ್ಟರು ಅವ್ರರೆ ಸಾರ್."

"ಆತನಿಗೂ ಅನಂತಮೂರ್ತಿಗೂ ಆಗಲ್ವ?"

"ಆಗಲ್ಲ ಸಾರ್. ಆ ಕಾಲದಿಂದ್ಲೂ ನಿಮಗೂ, ರಾಮಕೃಷ್ಣ ಹೆಗಡೆಯವರಿಗೂ ನಡದಂಗೆ ನಡಕೊಂಡು ಬರ್ತಾ ಅದೆ. ಇತ್ತೀಚಿಗಂತೂ ಇನ್ನ ಜಾಸ್ತಿಯಾಗ್ಯದೆ ಸಾರ್. ನಿಮ್ಮ ರಾಜಕಾರಣಕ್ಕಿಂತ್ಲೂ ಸಾಹಿತ್ಯದಲ್ಲಿ ತುಂಬಾ ಜಗಳ ನಡಿತಾಯಿದೆ ಸಾರ್."

"ನನಗಿದು ಗೊತ್ತೇಯಿರಲಿಲ್ಲ. ಯಾಕೆ ಆ ತರ ಜಗಳ ನಡಿತಾಯಿದೆ?"

"ಸಾಹಿತಿಗಳಲ್ಲೂ ನಿಮ್ಮ ಪಾರ್ಟಿಗಳ ತರನೇ ನವೋದಯದವರು, ಪ್ರಗತಿಶೀಲರು, ನವ್ಯದವರು, ಬಂಡಾಯದವರು ಅಂತ ಗುಂಪುಗಳಿದ್ವೊ ಸಾರ್. ಅವೆಲ್ಲಾ ಕರಗಿ ಈಗ ಸಮನ್ವಯದವರ ಸಂಖ್ಯೆ ಜಾಸ್ತಿಯಾಗಿದೆ. ಮತ್ತೆ ಜಾತ್ಯತೀತರು, ಪುರೋಹಿತಶಾಹಿಗಳು ಅನ್ನೊ ಬಳಗನು ಹುಟ್ಟಿಕೊಂಡವೆ. ಜಾತ್ಯತೀತರ ಮುಖಂಡರು ಈ ಅನಂತ ಮೂರ್ತಿಯವರು. ಮತಾಂಧರ ಲೀಡ್ರು ಭೈರಪ್ಪ. ಈ ತರ ಜಗಳ ನಡಿತಾ ಅದೆ."

"ಜಾತ್ಯತೀತರನ್ನ ನಾವು ಸೆಳೆಯೋಕಾಗಲ್ವೆ?"

"ಆಗಲ್ಲ ಸಾರ್."

"ಯಾಕಾಗಲ್ಲ?"

"ನಿಮ್ಮದು ಹೆಸರಿಗಷ್ಟೇ ಜಾತ್ಯತೀತ ಪಾರ್ಟಿ. ಪಾರ್ಟಿ ಆಫೀಸಲ್ಲಿ ಪುರೋಹಿತರನ್ನ ಕರೆಸಿ ಯಜ್ಞ ಯಾಗ ಮಾಡುಸ್ತಿರಿ. ಶನಿಕತೆ ಓದುಸ್ತಿರಿ. ಸತ್ಯ ನಾರಾಯಣ ಪೂಜೆ ಮಾಡ್ತಿರಿ. ಆಗ ನಿಮ್ಮ ಹಣೆಗಳಿಗೆಲ್ಲಾ ಎಂತೆಂತದೊ ಹೇಸಿಗೆ ಹಚ್ಚಿಗಂಡಿ ರತಿರಿ ಅಂತ ಜಾತ್ಯತೀತ ಸಾಯಿತಿಗಳು ಆಡಿಕತ್ತರೆ ಸಾರ್."

"ಅವೆಲ್ಲ ನಮ್ಮ ನಂಬಿಕೆ, ಆಚರಣೆಗಳು."

"ನಿಮ್ಮ ನಂಬಿಕೆ ಮತ್ತು ಆಚರಣೆಗಳಿಗೂ ಪುರೋಹಿತರ ಆಚರಣೆಗಳಿಗೂ ವ್ಯತ್ಯಾಸಯಿಲ್ಲ ಸಾರ್. ಬಿಜೆಪಿಗಳು ಹಣೆಗೆ ಕುಂಕುಮ ಹಚ್ಚಿಂತರೆ. ನೀವು ಅವ್ರುರಿಗಿಂತ ಅಗಲಾಗಿ ಹಚ್ಚತಿರಿ."

"ಇದೇ ಪ್ರಶ್ನೆಯನ್ನ ನಾಗತಿಹಳ್ಳಿ ಚಂದ್ರಶೇಖರ್ ಕೂಡ ಕೇಳಿದ್ರು. ಅವರು ಅವರ ತಂದೆತಾಯಿ ಆಚರಣೆನ ಎಷ್ಟು ಗೌರವಿಸ್ತರೋ ನಮ್ಮ ಆಚರಣೆಗಳನ್ನ ಗೌರವಿಸಬೇಕು. ಬ್ರಾಹ್ಮಣರು ಯಾವ ಆಚರಣೆಗಳನ್ನು ಮಾಡಿ ಮುಂದೆ ಬಂದಿದ್ದಾರೊ ನಾವೂ ಕೂಡ ಅವೇ ಆಚರಣೆಗಳನ್ನು ಮಾಡಿ ಮುಂದೆ ಬರೋದು ಬೇಡವೆ?"

"ಅಲ್ಲ ಸಾರ್, ನಿಮ್ಮನ್ನ ನಿಮ್ಮ ಮಕ್ಕಳನ್ನ ಈ ಸ್ಥಾನಕ್ಕೆ ತಂದೋರು ಜನಗಳಲ್ವ? ಅವರನ್ನ ಬಿಟ್ಟು ನೀವು ಯಜ್ಞಫಲ, ದೈವಕೃಪೆ ಅಂದ್ರೆ ಯಾವ ಸಾಯಿತಿ ನಿಮ್ಮನ್ನ ಮೆಚ್ತನೆ ಹೇಳಿ?"

"ಆ ದಿನವೂ ಹೆಚ್ಚು ಇದೇ ಪ್ರಸ್ತಾಪ ಆಯ್ತು. ಒಬ್ಬನಂತೂ ಇವತ್ತಿನ ಬಿಜೆಪಿ ಸರ್ಕಾರವನ್ನು ತಂದು ಕೂರಿಸಿದೋರೆ ನೀವು ಅಂತ ಹೇಳಿದ. ಇನ್ನೊಬ್ಬ ಮಹಾನುಭಾವ ಇದು ಕುಟುಂಬ ರಾಜಕಾರಣ ಅಂತ ಹೇಳಿದ. ಮತ್ತೊಬ್ಬ ನಿಮ್ಮ ರಾಜಕಾರಣದ ಶೈಲಿನೆ ಸರಿಯಿಲ್ಲ ಅಂತ ಹೇಳಿದ. ನಾನು ಎಲ್ಲವನ್ನು ಕೇಳಿಸಿಕೊಂಡೆ."


"ಇದೊಂತರ ಮನೆತಕ್ಕೆ ಕರದು ಮಕ್ಕುಗಿಸಿಗಂಡಂಗಾಯ್ತಲ್ಲ ಸಾರ್?"

"ನಾನೇನು ಬೇಸರ ಮಾಡಿಕೊಳ್ಳಲಿಲ್ಲ. ಈ ಸಾಯಿತಿಗಳ ಸಹವಾಸದಿಂದ ನಮಗೆ ಎಷ್ಟು ಓಟು ಬರಬಹುದು ಅನ್ನೋದು ನನಗೆ ಚೆನ್ನಾಗಿ ಗೊತ್ತು. ನಮ್ಮ ಪಾರ್ಟಿ ಏನಾದ್ರು ಇವರಿಗೆ ಟಿಕೆಟ್ ಕೊಟ್ಟರೆ ಈ ಮೇಧಾವಿಗಳು ಠೇವಣಿ ಉಳಿಸಿಕೊಳ್ಳೋದಿಲ್ಲ ಅನ್ನೋದೂ ನನಗೆ ಗೊತ್ತು. ಆದ್ದರಿಂದ ಮಾತನಾಡಿಕೊಂಡು ಹ್ಹೋಗ್ಲಿ ಅಂತ ಸುಮ್ಮ ನಿದ್ದೆ."


"ನಿಮ್ಮನ್ನ ಅವ್ರುರೇನಾದ್ರು ಸರಿಯಾಗಿ ಅರ್ಥ ಮಾಡಿಕೊಂಡಿದ್ರೆ ಅವ್ರುರಲ್ಲಿಗೆ ಬರತಿರಲಿಲ್ಲ ಅಥವಾ ಬರಬಾರದಿತ್ತು ಸಾರ್."


"ಬರಲಿ, ಬಂದದ್ದು ಒಳ್ಳೆದಾಯ್ತು. ಪ್ರಸ್ತುತ ಸಂದರ್ಭದ ರಾಜಕಾರಣ ಶೈಲಿ ಬೇರೆ ಇದೆ. ಸಾಹಿತಿಗಳ ಅಭಿಪ್ರಾಯ ಬೇರೆ ಇದೆ. ಆದ್ರೆ ಈ ಸಾಹಿತಿಗಳು ನಮ್ಮ ರಾಜಕಾರಣವನ್ನ ಇನ್ನೂ ಮೆಚ್ಚಲಾಗಿಲ್ಲ. ಮೆಚ್ಚಿ ಬರಿಯೋದಿಕ್ಕಾಗಿಲ್ಲವಲ್ಲ ಅನ್ನೋದು ನಮ್ಮ ಬೇಸರ, ಅಷ್ಟೆ."

"ಥೂತ್ತೇರಿ!!" ■




ಕೊಳ್ಳೆಗಾಲ ಬಾಲರಾಜ್–ಧ್ರುವನಾರಾಯಣ್ ಹಗ್ಗ ಜಗ್ಗಾಟ!



ಬಾಲರಾಜ್


ಧ್ರುವನಾರಾಯಣ್

ಕೊಳ್ಳೆಗಾಲ ನಗರಸಭೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದಕ್ಕಾಗಿ ಮಾಜಿ-ಹಾಲಿ ಎಮ್ಮೆಲ್ಲೆಗಳಾದ ಎಸ್. ಬಾಲರಾಜ್ ಮತ್ತು ಧ್ರುವನಾರಾಯಣ್ ನಡುವೆ ಹಗ್ಗ ಜಗ್ಗಾಟ ಪ್ರಾರಂಭವಾಗಿದೆ. ಇಬ್ಬರಿಗೂ ಸ್ವಪ್ರತಿಷ್ಠೆಯ ಪ್ರಶ್ನೆಯಾಗಿರುವ ಈ ಆಟದಲ್ಲಿ ಯಾರು ಗೆಲ್ಲುತ್ತಾರೋ, ಯಾರು ಸೋಲುತ್ತಾರೋ ಎಂಬುದು ಗೊತ್ತಿಲ್ಲವಾದರೂ ಕೊಳ್ಳೆಗಾಲದ ಜನ ಇಂಥ ಹೀನ ರಾಜಕಾರಣವನ್ನು ನೋಡಬೇಕಾದ ದುಸ್ಥಿತಿಗೆ ಬಂದಿರುವುದಕ್ಕೆ ಮರುಕಪಡುತ್ತಿರುವುದಂತೂ ಸತ್ಯ.


ನಾಗರಾಜ್


ಕೊಳ್ಳೆಗಾಲ ನಗರಸಭಾ ಅಧ್ಯಕ್ಷನಾಗಿದ್ದ ಎಂ.ವಿ.ಪರಮೇಶ್ವರಯ್ಯನನ್ನು ಅವರದ್ದೇ ಜೆಡಿಎಸ್ ಪಕ್ಷದ ನಗರಸಭಾ ಸದಸ್ಯರೇ ಅವಿಶ್ವಾಸ ನಿರ್ಣಯ ಮಂಡಿಸಿ ಕುರ್ಚಿಯಿಂದ ಕೆಳಗಿಳಿಸಿ ಹಾಲಿ ಶಾಸಕ ಧ್ರುವನಾರಾಯಣ್ ಕೊಟ್ಟು ದುಡ್ಡು ಎಣಿಸುತ್ತಾ ಕುಳಿತಿದ್ದಾರೆ. ಇನ್ನೊಂದೆಡೆ ಮಾಜಿ ಶಾಸಕ ಎಸ್.ಬಾಲರಾಜ್ ತನಗೆ "ಕೈ" ಕೊಟ್ಟು ಧ್ರುವನಾರಾಯಣ್‌ಗೆ ಕೈ ಎತ್ತಿದ ಹತ್ತು ಮಂದಿ ನಗರಸಭಾ ಸದಸ್ಯರ ಸದಸ್ಯತ್ವವನ್ನು (ವಿಪ್ ಉಲ್ಲಂಘಿಸಿದ್ದಕ್ಕಾಗಿ) ರದ್ದುಗೊಳಿಸಬೇಕೆಂದು ಹಠ ಹಿಡಿದು ಕಾನೂನಿನ ಮೊರೆ ಹೋಗಿದ್ದಾರೆ.



ಇಬ್ಬರ ಜಗಳ ಮೂರನೆಯವನಿಗೆ ಲಾಭ ಎಂಬಂತೆ ಮಾಜಿ-ಹಾಲಿ ಎಮ್ಮೆಲ್ಲೆಗಳ ಈ ಕಿತ್ತಾಟದಲ್ಲಿ ನಗರಸಭಾ ಸದಸ್ಯರು ದುಂಡಗಾಗುತ್ತಿರುವುದು ಸುಳ್ಳಲ್ಲ.


ಮಹಾದೇವ


ಮಾಜಿ ಎಮ್ಮೆಲ್ಲೆ ಬಾಲರಾಜ್ ರಾಜಕೀಯದ ಉತ್ತುಂಗದಲ್ಲಿದ್ದಾಗ ಆತ ಹಾಕಿದ ಬಿಸ್ಕೆಟ್ ತಿಂದುಕೊಂಡು ಹಿಂದೆ-ಮುಂದೆ ಅಂಡಲೆಯುತ್ತಿದ್ದ ಸೆಲ್ವರಾಜ್, ಕಂದಸ್ವಾಮಿ, ಮಹದೇವ್ ಪ್ರಸಾದ್, ಜೆ.ಎಂ.ಸುರೇಶ್, ಎಂ.ಎಸ್.ಆರ್.ಬಾಬು, ನಾಗರಾಜು, ವೀಣಾ, ಸಿ.ರಾಜೇಶ್ವರಿ, ಚೌಡಮ್ಮ ಮತ್ತು ಎನ್.ಸುರೇಶ್ ಈ ಹೊತ್ತು ಬಾಲರಾಜ್ ಬಳಿ ಅಧಿಕಾರವಿಲ್ಲ ಎಂಬ ಕಾರಣಕ್ಕಾಗಿ ಹಾಲಿ ಎಮ್ಮೆಲ್ಲೆ ಧ್ರುವನಾರಾಯಣ್ ಪಾಳೆಯ ಸೇರಿದ್ದಾರೆ. ಕೊಳ್ಳೆಗಾಲದ ಜನರಿಗೆ ಇವರ ಹೆಸರೇ ಗೊತ್ತಿರದಂಥ ಪರಿಸ್ಥಿತಿಯಿದ್ದರೂ ಬಾಲರಾಜ್ ಹಗಲುರಾತ್ರಿ ಓಡಾಡಿ ಈ ದಂಡಪಿಂಡಗಳನ್ನು ಗೆಲ್ಲಿಸಿ ತಂದಿದ್ದರು. ಯಾವಾಗ ವಿಧಾನಸಭಾ ಚುನಾವಣೆಯಲ್ಲಿ ಖುದ್ದು ಬಾಲರಾಜರೇ ಠೇವಣಿ ಕಳೆದುಕೊಂಡು ಹೀನಾಯವಾಗಿ ಸೋತರೋ ಅವರ ಹಿಂದೆ ಅಂಡಲೆಯುತ್ತಿದ್ದ ಈ ಹಿಂಡೂ ಎಚ್ಚೆತ್ತುಕೊಂಡುಬಿಟ್ಟಿತು. ರಾಜಕೀಯ ಎಂದರೆ ಗೆದ್ದೆತ್ತಿನ ಬಾಲ ಹಿಡಿಯುವುದೇ ಅಲ್ಲವೇ ಎಂದುಕೊಂಡು ಸಾರಾಸಗಟಾಗಿ ಧ್ರುವನಾರಾಯಣ್ ಪಾಳೆಯ ಸೇರಿಬಿಟ್ಟರು.


ಸುರೇಶ್


ಜೆ.ಎಂ.ಸುರೇಶ್

ಅಸಲಿಗೆ ಧ್ರುವನಾರಾಯಣ್ ಕೂಡ ಇದನ್ನೇ ಕಾಯುತ್ತಿದ್ದರು. ಯಾವಾಗ ಜೆಡಿಎಸ್‌ನ ಹತ್ತು ಜನ ತಮ್ಮ ಕಾಲಡಿಯಲ್ಲಿ ಬಿದ್ದರೋ ಜೆಡಿಎಸ್ ವಶದಲ್ಲಿದ್ದ ನಗರಸಭೆಯನ್ನು ಕ್ಯಾಪ್ಚರ್ ಮಾಡಲು ತಂತ್ರ ಹೆಣೆದರು. ಅಧ್ಯಕ್ಷಗಾದಿಯಲ್ಲಿ ಕೂತಿದ್ದ ಬಾಲರಾಜ್‌ನ ಭಂಟ ಎಂ.ವಿ.ಪರಮೇಶ್ವರಯ್ಯನವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ ಅವರನ್ನು ಕುರ್ಚಿಯಿಂದ ಕೆಳಗಿಳಿಸುವಲ್ಲಿ ಸಫಲರೂ ಆದರು. ಈ ಸಂದರ್ಭದಲ್ಲಿ ಪರಮೇಶ್ವರಯ್ಯನವರ ಪರವಾಗಿ ಮತಚಲಾಯಿಸುವಂತೆ ಪಕ್ಷದ ವತಿಯಿಂದ ವಿಪ್ ಹೊರಡಿಸಲಾಗಿತ್ತಾದರೂ ಅಷ್ಟುಹೊತ್ತಿಗಾಗಲೇ ಧ್ರುವನಾರಾಯಣ್‌ರ ಇಡಿಗಂಟು ಎಲ್ಲಾ ಹತ್ತು ಸದಸ್ಯರ ಗರ್ಭಸೇರಿಯಾಗಿತ್ತು. ಹಾಗಾಗಿ, ನಗರಸಭೆಯನ್ನು ಉಳಿಸಿಕೊಳ್ಳುವ ಬಾಲರಾಜ್ ಪ್ರಯತ್ನ ಕೊನೆಗೂ ವಿಫಲವಾಯಿತು.


ರಾಜೇಶ್ವರಿ


ಪರಮೇಶ್ವರಯ್ಯ

ತನ್ನ ಶಿಷ್ಯರೇ ತನ್ನ ಮರ್ಮಾಂಗಕ್ಕೆ ಗುದ್ದಿದ್ದರಿಂದ ಬಾಲರಾಜ್‌ಗೆ ಅದೆಷ್ಟು ಪೆಟ್ಟಾಗಿದೆಯೆಂದರೆ ಅವರೆಲ್ಲರ ಮೇಲೆ ಪ್ರತೀಕಾರಕ್ಕೆ ಸಜ್ಜಾಗಿದ್ದಾರೆ. ಪಕ್ಷದ ವಿಪ್ ಉಲ್ಲಂಘಿಸಿದ್ದಕ್ಕಾಗಿ ಲೋಕಲ್ ಅಥಾರಿಟೀಸ್ ಪ್ರೊಹಿಬಿಷನ್ ಆಫ್ ಡಿಫೆಕ್ಷನ್ – 1987ರ ಪ್ರಕಾರ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಎಂ.ಶಿವಕುಮಾರ್, ಕೃಷ್ಣ ಮತ್ತು ಸಿ.ಎಂ.ಪರಮೇಶ್ವರಯ್ಯನವರನ್ನು ಮುಂದಿಟ್ಟುಕೊಂಡು ಪ್ರಯತ್ನಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ನಗರಸಭಾ ಆಯುಕ್ತರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕಂಪ್ಲೇಂಟ್ ಗುಜರಾಯಿಸಿದ್ದೂ ಆಗಿದೆ.

ಆದರೆ, ಇಡಿಗಂಟು ನುಂಗಿದ ನಗರಸಭಾ ಸದಸ್ಯರು ಇದರಿಂದೇನು ವಿಚಲಿತರಾದಂತೆ ಕಾಣುತ್ತಿಲ್ಲ. ಇವರಿಗೆಲ್ಲ ನಾಯಕತ್ವ ವಹಿಸುತ್ತಿರುವ ವ್ಯಕ್ತಿಯೆಂದರೆ ಬೀದಿಯಲ್ಲಿ ಬಿದ್ದಿರುವ ಒಂದು ರೂಪಾಯಿ ನಾಣ್ಯವನ್ನೂ ಎತ್ತಿಕೊಳ್ಳುವ ಜಾಯಮಾನದ ಮುಡಿಗುಂಡ ವಾರ್ಡಿನ ಮಹಾದೇವ ಪ್ರಸಾದ್ ಅಲಿಯಾಸ್ ಪ್ರದೀಪ. ಈತ ಎಂತಹ ಮನುಷ್ಯನೆಂದರೆ ನಗರಸಭಾ ಸದಸ್ಯನಾಗುವ ಮೊದಲು ಮುಡಿಗುಂಡದ ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕ್ ಅಧ್ಯಕ್ಷನಾಗಿದ್ದಾಗ ಇಡೀ ಬ್ಯಾಂಕೇ ದಿವಾಳಿಯಾಗುವಂತೆ ಮುಂಡಾಮೋಚಿದ್ದ. ಕೊನೆಗೆ ಅಲ್ಲಿನ ನಿರ್ದೇಶಕರೇ ಇವನನ್ನು ಅಧ್ಯಕ್ಷ ಗಾದಿಯಿಂದ ಕೆಳಕ್ಕುರುಳಿಸಿ ಓಡಿಸಿದ್ದರು. ಈ ವಿಚಾರದಲ್ಲಿ ಇಂದಲ್ಲ ನಾಳೆ ತನಿಖೆ ಪ್ರಾರಂಭವಾದರೆ ತಾನು ಪರ್ಮನೆಂಟಾಗಿ ಜೈಲು ಸೇರುವುದು ಖಾತ್ರಿಯಾಗಿರುವುದರಿಂದ ಈಗ ಧ್ರುವನಾರಾಯಣ್ ಪಾದಕ್ಕೆರಗಿದ್ದಾನೆ.

ಇವನಿಗೆ ಸಾಥ್ ನೀಡುತ್ತಿರುವ ಸೆಲ್ವರಾಜ್ ಕೂಡ ಭ್ರಷ್ಟಾಚಾರದಲ್ಲಿ ಕುತ್ತಿಗೆ ತನಕ ಮುಳುಗಿರುವ ಆಸಾಮಿ. ಈತ ಪಕ್ಷಾತೀತ. ಕೊಳ್ಳೆಗಾಲದಲ್ಲಿ ಯಾವ ಪಕ್ಷದ ಎಮ್ಮೆಲ್ಲೆ ಇರುತ್ತಾರೋ ಈತ ಕೂಡ ಆ ಪಕ್ಷದಲ್ಲಿರುತ್ತಾನೆ. ಹಾಗಾಗಿ ಇವನನ್ನು ಜನ ಸರ್ವಪಕ್ಷಗಳ ಮುಖಂಡ ಎಂದು ಲೇವಡಿ ಮಾಡುತ್ತಾರೆ. ಈಗ ಧ್ರುವನಾರಾಯಣ್ ಎಮ್ಮೆಲ್ಲೆಯಾಗಿರುವುದರಿಂದ ಅವನೊಂದಿಗಿದ್ದಾನೆ. ಇನ್ನು ಶಂಕನಪೊರ ವಾರ್ಡಿನಿಂದ ಗೆದ್ದಿರುವ ಚೌಡಮ್ಮ ಅಪ್ಪಟ್ಟ ಹೆಬ್ಬೆಟ್ಟು ಗಿರಾಕಿ. ಈಕೆ ಕ್ಷೇತ್ರಕ್ಕೆ, ಪಕ್ಷಕ್ಕೆ ಒಂದಿಷ್ಟು ಒಳ್ಳೆಯದು ಮಾಡಬಹುದೆಂಬ ನಿರೀಕ್ಷೆಯಿಂದ ಬಾಲರಾಜ್ ಇವಳನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದ. ಈಗ ದುಡ್ಡಿನಾಸೆಗೆ ಬಿದ್ದಿರುವ ಈ ಹೆಬ್ಬೆಟ್ಟು ಧ್ರುವನಾರಾಯಣ್ ಸೇವೆಯಲ್ಲಿ ನಿರತಳಾಗಿದ್ದಾಳೆ.


ಈಗ ಹಾಲಿ-ಮಾಜಿ ಎಮ್ಮೆಲ್ಲೆಗಳ ಜಗಳದ ಚೆಂಡು ಜಿಲ್ಲಾಧಿಕಾರಿ ಕಚೇರಿಯಲ್ಲಿದೆ. ಆ ಹತ್ತು ಜನರ ಸದಸ್ಯತ್ವ ರದ್ದಾಗುತ್ತೋ ಬಿಡುತ್ತೋ ಗೊತ್ತಿಲ್ಲ. ಆದರೆ, ಐದು ವರ್ಷ ಅಧಿಕಾರದಲ್ಲಿದ್ದು ಕಮಾಯಿಸುವ ದುಡ್ಡಿನ ಹತ್ತು ಪಟ್ಟನ್ನು ಈಗಾಗಲೇ ಧ್ರುವನಾರಾಯಣ್ ಅವರಿಗೆ ಸುರಿದಿರುವುದರಿಂದ ಅವರ್‍ಯಾರಿಗೂ ತಮ್ಮ ಸದಸ್ಯತ್ವ ರದ್ದಾಗುವ ಭಯ ಕಾಡುತ್ತಿಲ್ಲ.

ಜನಪ್ರತಿನಿಧಿಗಳು ತರಕಾರಿಗಳಂತೆ ಮಾರಾಟವಾಗುತ್ತಿರುವುದನ್ನು ನೋಡುವ ದೌರ್ಭಾಗ್ಯ ಕೊಳ್ಳೆಗಾಲ ಜನತೆಗೆ ಬಂದಿರುವುದು ದುರಂತ.


■ ಕೊಳ್ಳೇಗಾಲ ಚಿಕ್ಕಮಾಳಿಗೆ

ಮೂಡಿಗೆರೆ: ಸತೀಶ್ಚಂದ್ರನ ಅಡ್ಡ ಕಸಬುಗಳು!

ರಾಜ್ಯ ಸರ್ಕಾರವು ತಾಲೂಕು ಪಂಚಾಯತಿಯ ಅಧಿಕಾರ ಮೊಟಕುಗೊಳಿಸಿ ನೇರ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡಿದ್ದನ್ನೇ ಬಂಡವಾಳ ಮಾಡಿಕೊಂಡಿರುವ ತಾಲ್ಲೂಕು ಪಂಚಾಯತಿಯ ಅಷ್ಟೂ ಅಧಿಕಾರಿಗಳು, ನೌಕರರು ಈಗ ಹಗಲು ದರೋಡೆಗೆ ಇಳಿದಿದ್ದಾರೆ. ಇದಕ್ಕೊಂದು ತಾಜಾ ಉದಾಹರಣೆ ಮೂಡಿಗೆರೆ ತಾಲೂಕು ಪಂಚಾಯತಿ. ಮಾಡಬಾರದ ಅಡ್ಡಕಸಬುಗಳು ಏನೆಲ್ಲಾ ಇವೆಯೋ ಅವೆಲ್ಲಾ ಇಲ್ಲಿ ರಾಜಾರೋಷವಾಗಿ ನಡೆಯುತ್ತಿವೆ. ಸರ್ಕಾರದಿಂದ ಹರಿಯುವ ದುಡ್ಡು ಸಾರ್ವಜನಿಕ ಅಭಿವೃದ್ಧಿಗೆ ಖರ್ಚಾಗುವ ಬದಲು ನೇರವಾಗಿ ತಾಲ್ಲೂಕು ಪಂಚಾಯತಿ ಅಧಿಕಾರಿಗಳ ಜೇಬು ಸೇರುತ್ತದೆ. ಅಲ್ಲೋ ಇಲ್ಲೋ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಬೆರಳೆಣಿಕೆಯಷ್ಟು ಕಾಮಗಾರಿಗಳೂ ಸಂಪೂರ್ಣವಾಗಿ ಕಳಪೆಯಾಗಿರುತ್ತವೆ. ಭ್ರಷ್ಟಾಚಾರದ ಇಂತಹ ಒಂದು ಕೆಟ್ಟ ಪರಂಪರೆಗೆ ಅಡಿಗಲ್ಲು ಹಾಕಿದ ಮಹಾಶಯ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ಚಂದ್ರ ಅಲಿಯಾಸ್ ಡಾಕ್ಟರ್.ಜೆ. ಸತೀಶ್ಚಂದ್ರ.


ಸತೀಶ್‌ಚಂದ್ರ

ಈತನಲ್ಲಿರುವ ಅದ್ಯಾವ ಗುಣ ನೋಡಿ ಈ ಹುದ್ದೆ ದಯಪಾಲಿಸಿದರೋ ಗೊತ್ತಿಲ್ಲ, ಸಾರ್ವಜನಿಕರ ಅಭಿವೃದ್ಧಿಗಾಗಿಯೇ ತಾನು ಸರ್ಕಾರಿ ಅಧಿಕಾರಿಯಾಗಿದ್ದೇನೆಂಬುದನ್ನು ಸಂಪೂರ್ಣವಾಗಿ ಮರೆತಿರುವ ಈತ ಈಗ ಮಷ್ಕಳವಾಗಿ ಮೇಯುವ ಕೆಲಸದಲ್ಲಿ ಮುಳುಗಿದ್ದಾನೆ. ಸಮರ್ಥತೆ, ಪ್ರಾಮಾಣಿಕತೆ, ದೂರದರ್ಶಿತ್ವ, ಕಾರ್ಯಕ್ಷಮತೆ, ಕನಿಷ್ಠ ಸಾಮಾಜಿಕ ಪ್ರಜ್ಞೆ ಯಾವುದೂ ಇಲ್ಲದ ಈತ ಕೇವಲ ಝುಲಕ್ ಅನುಭವಿಸಲು ಹೊರಟಿರುವಂತಿದೆ.


ಕುಮಾರಸ್ವಾಮಿ

ಈತನ ಒಂದು (ಅ)ವ್ಯವಹಾರವನ್ನು ನೋಡಿ. ತಾಲ್ಲೂಕು ಪಂಚಾಯತ್ ಸಭೆಯ ನಿರ್ಣಯದಲ್ಲಿ ಅನುಮತಿ ಪಡೆಯದ ಹುಡುಗಿಯೊಬ್ಬಳನ್ನು ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ವೋಚರ್ ಆಧಾರದಲ್ಲಿ ಸಹಾಯಕಳಾಗಿ ಮಾಡಿಕೊಂಡಿದ್ದಾನಲ್ಲದೆ ಆಕೆ ಕೆಲಸಕ್ಕೆ ಬಾರದಿದ್ದರೂ, ಜುಲೈ ಹತ್ತರಿಂದ ಸೆಪ್ಟಂಬರ್ ಎಂಟರವರೆಗೆ ಆಕೆಯ ಹೆಸರಿಗೆ 11,437 ರೂಪಾಯಿಗಳನ್ನು ಸಂದಾಯ ಮಾಡಿಸಿ ದಯಾಮಯಿಯೆನಿಸಿದ್ದಾನೆ. ಈ ಸಹಾಯಕ ಹುದ್ದೆಗೆ ಆಯ್ಕೆಗೊಳ್ಳಲು ಕನಿಷ್ಠ ಬಿ.ಕಾಂ. ಅಥವಾ ಬಿ.ಎಸ್ಸಿ ಉತ್ತೀರ್ಣವಾಗಿರುವುದರ ಜೊತೆಗೆ ಕಂಪ್ಯೂಟರ್ ಜ್ಞಾನವಿರಬೇಕು ಎಂಬುದು ನಿಯಮ. ಆದರೆ, ಈತ ಆಯ್ಕೆ ಮಾಡಿದ ಆ ಹುಡುಗಿ ಪಿಯುಸಿ ಫೇಲ್ ಕ್ಯಾಂಡಿಡೇಟ್! ಆದರೂ ಆಕೆಗೆ ಈ ಹುದ್ದೆ ದಯಪಾಲಿಸಿದ್ದಾನೆಂದರೆ ಸತೀಶ್ಚಂದ್ರನಿಗೆ ಏನೆನ್ನಬೇಕು?




ಕೇವಲ ಅಲ್ಲಲ್ಲಿ ಕೈಕಾಲು ಆಡಿಸುವುದರಲ್ಲಿ ಮಾತ್ರ ಈತ ನಿಸ್ಸೀಮನಲ್ಲ, ಭ್ರಷ್ಟಾಚಾರದಲ್ಲೂ ಪಳಗಿರುವ ಆಸಾಮಿ. ಹಿಂದೊಮ್ಮೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ಅಕ್ಕಿ ಹಗರಣ ನಡೆಸಿ ಜೈಲು ಕಂಬ ಎಣಿಸಿ ಬಂದಿರುವ ಖ್ಯಾತಿ ಇವನದ್ದು. 1976 ರಿಂದ ಈವರೆಗೆ ದಕ್ಷಿಣ ಕನ್ನಡದಿಂದ ಹಿಡಿದು ಕೂಡಿಗೆ-ಕುಶಾಲನಗರ, ಮಡಿಕೇರಿ, ಹೊಳೆನರಸೀಪುರ, ಅರಕಲಗೂಡು, ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ತೋಟಗಾರಿಕೆ ಅಧಿಕಾರಿಯಾಗಿ, ಎಡಿ. ಎ, ವಿಸಿ ಫಾರಂನ ಎಓ ಆಗಿ, ಬಿಸಿಎಂ ಅಧಿಕಾರಿಯಾಗಿ, ಐಟಿಡಿಪಿ ಅಧಿಕಾರಿಯಾಗಿ ಹೋದಲ್ಲೆಲ್ಲಾ ಸಾಕಷ್ಟು ಮೇಯ್ದಿದ್ದಾನೆ. ಮೂಡಿಗೆರೆ ಜನರ ದೌರ್ಭಾಗ್ಯವೋ ಏನೋ ಈಗ ಇಲ್ಲಿಗೆ ವಕ್ಕರಿಸಿಕೊಂಡಿದ್ದಾನೆ.

ಗ್ರಾಮಾಂತರ ಪ್ರದೇಶಕ್ಕೆ ಕುಡಿಯುವ ನೀರಿನ ಯೋಜನೆಗಾಗಿ ಬಂದ ಹಣದಲ್ಲಿ ಅರ್ಧವನ್ನು ನೀರಿನಲ್ಲಿ ಮುಳುಗಿಸಿ ಬಿಟ್ಟಿದ್ದಾನೆ. ಕೆಲವು ವರ್ಷಗಳ ಹಿಂದಿನಿಂದ ನಡೆದಿರುವ ಕಾಮಗಾರಿಗಳಲ್ಲಿ ಮೀಟಿಂಗ್ ಹಾಲ್, ಅಧ್ಯಕ್ಷ-ಉಪಾಧ್ಯಕ್ಷರ ಕೊಠಡಿ ಕಟ್ಟಡ ರಿಪೇರಿಗೆಂದು 70 ಸಾವಿರ ರೂ. ಬಿಲ್ ಮಾಡಿದ್ದಾನೆ. ಈತ ಅದೆಷ್ಟು ಕಟ್ಟಡಗಳನ್ನು ರಿಪೇರಿ ಮಾಡಿಸಿದ್ದಾನೆಂದು ಒಮ್ಮೆ ಮೂಡಿ ಗೆರೆಗೆ ಬಂದು ನೋಡಿದರೆ ಅರ್ಥವಾಗುತ್ತದೆ. ತಾ.ಪಂ. ಸದಸ್ಯರ ಅನುದಾನದಲ್ಲಿ ವಿವಿಧ ವಿಷಯಗಳಿಗೆ ಮಂಜೂರಾತಿ ಪಡೆದು ಬಿಡುಗಡೆಯಾದ ಸುಮಾರು 8 ಲಕ್ಷ ರೂ.ಗಳಲ್ಲಿ ತನ್ನ ಮತ್ತು ತನಗೆ ಬೇಕಾದವರ ಮನೆ ಅಭಿವೃದ್ಧಿಪಡಿಸಿಕೊಂಡಿದ್ದಾನೆ. ಇದೇ ಆತ ಮಾಡಿದ ಮಹತ್ಸಾಧನೆ.

ತನ್ನ ವಿರುದ್ಧ ಚಕಾರವೆತ್ತಿದವರ ಮೇಲೆ ಪಕ್ಕಾ ಬೀದಿ ರೌಡಿಯಂತೆ ದೈಹಿಕ ಹಲ್ಲೆ ನಡೆಸಿ ಬೆದರಿಸಿಟ್ಟುಕೊಳ್ಳುವ ತಂತ್ರವನ್ನೂ ಅನುಸರಿಸುತ್ತಾನೆ. ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯಲ್ಲಿ ರುದ್ರಯ್ಯ ಎಂಬ ಕಾಂಗ್ರೆಸ್ ಸದಸ್ಯರ ನೇತೃತ್ವದಲ್ಲಿ ಎಲ್ಲಾ ಸದಸ್ಯರು ಸತೀಶ್ಚಂದ್ರನ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದಾಗ ರುದ್ರಯ್ಯನವರ ಮೇಲೆ ನೀರಿನ ಬಾಟಲಿಯನ್ನೆಸೆದು ಹಲ್ಲೆ ನಡೆಸಿದ. ತುಂಬು ಸಭೆಯಲ್ಲಿಯೇ ಈ ರೀತಿ ದೌರ್ಜನ್ಯ ನಡೆಸುತ್ತಾನೆಂದರೆ, ಇವನೊಬ್ಬ ಬೀದಿ ರೌಡಿಯಾ ಅಥವಾ ಸರ್ಕಾರಿ ಅಧಿಕಾರಿಯಾ ಎಂಬ ಅನುಮಾನ ಬಾರದಿರುತ್ತದೆಯೆ?


ಸತೀಶ್ಚಂದ್ರನ ಭ್ರಷ್ಟಾಚಾರಗಳು, ರೌಡಿಸಂ ಇಡೀ ಮೂಡಿಗೆರೆಯಾದ್ಯಂತ ಜನಜನಿತವಾಗಿದ್ದರೂ ಮೂಡಿಗೆರೆಯ ಬಿಜೆಪಿ ಎಮ್ಮೆಲ್ಲೆ ಎಂ.ಪಿ. ಕುಮಾರಸ್ವಾಮಿ ಮಾತ್ರ ಕಮಕ್ ಕಿಮಕ್ ಅನ್ನುತ್ತಿಲ್ಲ. 2004 ರಲ್ಲಿ ಜಿಲ್ಲಾ ಪಂಚಾಯಿತಿ ಸಹಾಯಕ ಲೆಕ್ಕಾಧಿಕಾರಿಯಾಗಿದ್ದ ಸತೀಶ್‌ಚಂದ್ರನನ್ನು ಮೂಡಿಗೆರೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಯಾಗಿ ತಂದು ಕೂರಿಸಿದ್ದೇ ಶಾಸಕ ಕುಮಾರಸ್ವಾಮಿ. ಅಲ್ಲಿಂದೀಚೆಗೆ ಸತೀಶ್ಚಂದ್ರ ಆಡಿದ ಆಟಕ್ಕೆಲ್ಲಾ ಕುಮಾರಸ್ವಾಮಿಯ ಬೆಂಬಲ ಇದ್ದೇ ಇದೆ. ಹಿಂದೊಮ್ಮೆ ಸತೀಶ್ಚಂದ್ರನ ಹಾವಳಿ ಜಾಸ್ತಿಯಾದಾಗ, ಎಮ್ಮೆಲ್ಲೆ ಮಾತಿಗೂ ಕವಡೆ ಕಾಸಿನ ಕಿಮ್ಮತ್ತು ಕೊಡದಿದ್ದಾಗ ಕುಮಾರಸ್ವಾಮಿಯೇ ಖುದ್ದಾಗಿ ಕಡ್ಡಾಯ ರಜೆ ಅರ್ಜಿ ಬರೆದು ಸಹಿ ಹಾಕಲು ಸತೀಶ್ಚಂದ್ರನಿಗೆ ಒತ್ತಡ ಹೇರಿದ್ದರು. ಆಗ ಕುಮಾರಸ್ವಾಮಿಯ ಕಾಲಿಗೆ ಅಡ್ಡಡ್ಡ ಬಿದ್ದು ಕಂಬನಿ ಮಿಡಿದು ಬಚಾವಾಗಿ ಬಂದಿದ್ದ. ಆದರೂ ಅವನಿಗೆ ಬುದ್ಧಿ ಬಂದಂತಿಲ್ಲ. ಅದೇನು ಮೋಡಿ ಮಾಡಿದ್ದಾನೋ ಗೊತ್ತಿಲ್ಲ, ಇತ್ತೀಚೆಗಂತೂ ಎಮ್ಮೆಲ್ಲೆ ಕುಮಾರಸ್ವಾಮಿ ಮತ್ತು ಸತೀಶ್ಚಂದ್ರ ಭಾಯಿ-ಭಾಯಿಯಾಗಿಬಿಟ್ಟಿದ್ದಾರೆ.


ರುದ್ರಯ್ಯ

ಎಮ್ಮೆಲ್ಲೆ ಕುಮಾರಸ್ವಾಮಿಯ ಮದುವೆ ಕಾರ್ಯ ಮೈಸೂರಿನಲ್ಲಿ ನಡೆದು ಮೂಡಿಗೆರೆ ಹೊಯ್ಸಳ ಕ್ರೀಡಾಂಗಣದ ತುಂಬೆಲ್ಲಾ ಶಾಮಿಯಾನ ಹರಡಿ, ಜನರಿಗೆ ಬಾಡೂಟ ಹಾಕುವ ಕೈಂಕರ್ಯಕ್ಕೆ ಹಣ ಸುರಿದ ಅಧಿಕಾರಿಗಳಲ್ಲಿ ಸತೀಶ್‌ಚಂದ್ರ ಕೂಡ ಇರುವುದರಿಂದ ಸಧ್ಯಕ್ಕೆ ಆತನಿಗೆ ವರ್ಗಾವಣೆಯ ಶಿಕ್ಷೆಯಿಲ್ಲ ಎಂದು ಖುದ್ದು ಶಾಸಕರ ಆಪ್ತವಲಯ ಹೇಳಿಕೊಳ್ಳುತ್ತಿದೆ.

ಮೂಡಿಗೆರೆ ಜನ ಇನ್ನೆಷ್ಟು ದಿನ ಇವನನ್ನು ಸಹಿಸಿಕೊಂಡಿರುತ್ತಾರೋ ಗೊತ್ತಿಲ್ಲ.

■ ಅಜೀಜ್ ಕಿರುಗುಂದ



ಫೋಟೋ ಕೃಪೆ: ಗಲ್ಫ್ ಕನ್ನಡಿಗ

ಪತ್ರಕರ್ತ ಸೀತಾರಾಂ ಬಂಧನ: ಇದು ನಮ್ಮ ಅವಸಾನದ ಆರಂಭ!

ಸೀತಾರಾಂ ಅವರನ್ನು ಮೊನ್ನೆ ಉಡುಪಿಯ ಕೋರ್ಟಿಗೆ ಕರೆತಂದಾಗ ಅವರು ತಮ್ಮ ಕೋಳತೊಡಿಸಿದ ಕೈಯನ್ನು ಅದೊಂದು ವಿಜಯದ ಸಂಕೇತವೋ ಎಂಬಂತೆ ಮೇಲೆ ಎತ್ತಿದ್ದರು. ಅದು ಸೀತಾರಾಂ ಅವರು ಸೋತು ಗೆದ್ದಿರುವ ಸಂಕೇತ. ಸರ್ಕಾರ ಅವರನ್ನು ಈ ರೀತಿ ನಡೆಸಿಕೊಂಡು ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಿದೆ. ಸೀತಾರಾಂ ಅವರನ್ನು ಬಂಧಿಸಿದ ರೀತಿ ಮಾತ್ರವಲ್ಲ; ಅವರ ಬಂಧನವೇ ಒಂದು ದಬ್ಬಾಳಿಕೆಯ ಕ್ರಮವಾಗಿದೆ. ಪತ್ರಿಕೆಗಳ ವಿರುದ್ಧ ಮಾನಹಾನಿಯ ಮೊಕದ್ದಮೆ ಹೂಡಲು ಅವಕಾಶ ಮಾಡಿಕೊಡುವ ಕ್ರಿಮಿನಲ್ ಕಾಯ್ದೆಯ ಕಲಮುಗಳು ವಸಾಹತುಶಾಹಿಯ ಪಳೆಯುಳಿಕೆ. ಸೀತಾರಾಂ ಅವರ ಬಂಧನವನ್ನು ಪ್ರತಿಭಟಿಸುವುದರ ಜೊತೆ, ನಾವು ಕ್ರಿಮಿನಲ್ ಕಾಯ್ದೆಯ ಈ ಕರಾಳ ಕಲಮಿನ ವಿರುದ್ಧ ಕೂಡ ಪ್ರತಿಭಟಿಸಬೇಕಾಗಿದೆ.


ನೆಡುಹರೆಯದ, ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲದ, ಕೃಶಶರೀರಿಯೂ ಆಗಿರುವ ಪತ್ರಕರ್ತರೊಬ್ಬರನ್ನು ಕೈಗೆ ಕೋಳ ಹಾಕಿ, ಅದರ ಸರಪಳಿಯನ್ನು ಪೊಲೀಸನೊಬ್ಬ ಹಿಡಿದು ಸರ್ಕಾರಿ ಆಸ್ಪತ್ರೆಯಿಂದ ಕೋರ್ಟಿಗೆ ತರಲಾಗುತ್ತದೆ ಮತ್ತು ಕೋರ್ಟಿನ ಛಾವೆಯಲ್ಲಿ ಸದ್ರಿ 'ಆರೋಪಿ'ಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುತ್ತದೆ. ನ್ಯಾಯಾಧೀಶರು ಕಾನೂನಿನ ಕ್ರಮಕ್ಕೆ ಅನುಗುಣವಾಗಿ ಈ ಪತ್ರಕರ್ತರಿಂದ ಒಂದು ಮುಚ್ಚಳಿಕೆ ಬರೆಸಿಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಉತ್ಸುಕರಾಗಿದ್ದಾರೆ. ಆದರೆ ಮೊದಲೇ ಮಾನಸಿಕವಾಗಿ ಜರ್ಜರಿತರಾಗಿರುವ ಆ ಪತ್ರಕರ್ತರು ನ್ಯಾಯಾಧೀಶರೆದುರು ಆರ್ತರಾಗಿ "ನನಗೆ ಜಾಮೀನು ಬೇಡ; ನಾನು ಇದೇ ಊರಿನ ಜೈಲಿನಲ್ಲಿ ಇರುತ್ತೇನೆ. ಇಲ್ಲಿ ನನ್ನನ್ನು ಈ ಕೇಸಿನಿಂದ ಬಿಡುಗಡೆ ಮಾಡಿದರೆ, ಮಂಗಳೂರು ಕೋರ್ಟಿನ ಮುಂದೆ ಇರುವ ಇನ್ನೊಂದು ಕೇಸಿನಲ್ಲಿ ನನ್ನನ್ನು ಬಂಧಿಸಲು ಅಲ್ಲಿನ ಪೊಲೀಸರು ವಾರಂಟ್ ಹಿಡಿದು ಹೊರಗೆ ಕಾದು ಕೂತಿದ್ದಾರೆ. ನನ್ನನ್ನು ಮಂಗಳೂರು ಜೈಲಿಗೆ ಒಯ್ದರೆ ಅಲ್ಲಿ ಭಜರಂಗಿಗಳು ನನಗೆ ಚಿತ್ರಹಿಂಸೆ ಕೊಡುವುದು ಖಂಡಿತ" ಎಂದು ನಿವೇದಿಸಿಕೊಳ್ಳುತ್ತಾರೆ.

ನ್ಯಾಯಾಧೀಶರು ಆರೋಪಿ ಸ್ಥಾನದಲ್ಲಿ ನಿಂತಿರುವ ಪತ್ರಕರ್ತರ ಕೋರಿಕೆಯನ್ನು ಮನ್ನಿಸಿ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸುತ್ತಾರೆ. ಅಲ್ಲಿನ ಜೈಲಿನಲ್ಲಿ ಈಗಾಗಲೇ ವಿಚಾರಣಾಪೂರ್ವ ಕೈದಿಗಳು ತುಂಬಿಹೋಗಿರುವುದರಿಂದ ಪತ್ರಕರ್ತರನ್ನು ಊರಿನ ಸರ್ಕಾರಿ ಆಸ್ಪತ್ರೆಯ ಕೊಠಡಿಯೊಂದರಲ್ಲಿ ಪೊಲೀಸರ ಕಾವಲಿನಲ್ಲಿ ಇರಿಸಲಾಗುತ್ತದೆ. ಈ ಪತ್ರಕರ್ತರು ತನ್ನ ಪತ್ರಿಕೆಯನ್ನು ಕಳೆದ 17 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಅದಕ್ಕಿಂತ ಮೊದಲು ಅವರು 9 ವರ್ಷ ಹಿಂದುನಲ್ಲಿ ಮತ್ತು ಎರಡು ವರ್ಷ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪತ್ರಕರ್ತರಾಗಿ ದುಡಿದಿದ್ದರು!

ಇದು ಕ್ರೈಮ್ ಸ್ಟೋರಿ ಅಲ್ಲ. ಮೊನ್ನೆ 5.1.09 ಸೋಮವಾರ ಉಡುಪಿಯಲ್ಲಿ ನಡೆದ ನೈಜ ಘಟನೆ; ಮಂಗಳೂರಿನ ದಿನಪತ್ರಿಕೆ 'ಕರಾವಳಿ ಅಲೆ'ಯ ವ್ಯವಸ್ಥಾಪಕ ಬಿ.ವಿ. ಸೀತಾರಾಂ ಅವರೇ ಈ ಆರೋಪಿ ಪತ್ರಕರ್ತ. 2006 ರ ಡಿಸೆಂಬರ್ ತಿಂಗಳಲ್ಲಿ ಉಡುಪಿಗೆ ಸಮೀಪದ ಶಿರ್ವದ ಭೋಜಶೆಟ್ಟಿ ಎಂಬವರು ಸೀತಾರಾಂ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕಿದ್ದರು. ಪತ್ರಕರ್ತರ ಮೇಲೆ ಇನ್ನು ಯಾವ ಥರದ ಮೊಕದ್ದಮೆ ಹೂಡಲು ಸಾಧ್ಯ? ಮೊನ್ನೆ ಇದ್ದಕ್ಕಿದ್ದಂತೆ ಪೊಲೀಸರು ಸೀತಾರಾಂ ಅವರನ್ನು ಬಂಧಿಸಿದರು.

ಸೀತಾರಾಂ ಹೇಳುವ ಪ್ರಕಾರ ಈ ಬಂಧನದ ಕುರಿತ ಹಾಗೆ ಅವರಿಗೆ ಯಾವುದೇ ನೋಟಿಸು, ಸಮನ್ಸ್ ಇತ್ಯಾದಿ ಜಾರಿಯಾಗಿರಲಿಲ್ಲ. ಹಾಗೆ ಆಗಿದ್ದರೆ ತಾನು ಸ್ವತಃ ಕೋರ್ಟಿನ ಎದುರು ಹಾಜರಾಗಿ ಜಾಮೀನು ಪಡೆದುಕೊಳ್ಳುತ್ತಿದ್ದೆ; ಅದು ತನ್ನ ಹಕ್ಕು ಕೂಡ. ಈಗ ಈ ಮೂಲಭೂತ ಹಕ್ಕು ನನಗೆ ನಿರಾಕರಿಸಲಾಗಿದೆ ಎಂದು ಅವರು ನನ್ನೊಡನೆ ಹೇಳಿದರು. ಅವರನ್ನು .ಬಂಧಿಸಿದ್ದು ಕೂಡ ಅತ್ಯಂತ ನಾಟಕೀಯವಾಗಿತ್ತು. ಸೀತಾರಾಂ, ತನ್ನ ಪತ್ನಿಯ ಜೊತೆ ಮಂಗಳೂರಿನಿಂದ ಕಟೀಲು ಮಾರ್ಗವಾಗಿ ಕುಂದಾಪುರಕ್ಕೆ ಹೊರಟಿದ್ದರು.

ಅವರ ಕಾರು ಕಾರ್ಕಳದಿಂದ ಹೆಬ್ರಿಯ ಕಡೆಗೆ ಸಾಗುತ್ತಿದ್ದಾಗ ಹಠಾತ್ತನೆ ನಾಲ್ಕು, ಐದು ಪೊಲೀಸು ವಾಹನಗಳು ಕಾರಿಗೆ ಅಡ್ಡ ನಿಂತವು. ಶಿರ್ವ ಪೊಲೀಸು ಠಾಣೆಯ ಅಧಿಕಾರಿ ಸಂತೋಷ್




ಸೀತಾರಾಂ ಹತ್ತಿರ ಬಂದು "ಯೂ ಆರ್ ಅಂಡರ್ ಅರೆಸ್ಟ್" ಎಂದರು. ಸೀತಾರಾಂ "ನೀವು ಹಾಗೆಲ್ಲ ಏಕಾಏಕಿ ಬಂಧಿಸುವ ಹಾಗೆ ಇಲ್ಲ, ನಾನು ಅಂತಹ ದೊಡ್ಡ ಅಪರಾಧ ಏನನ್ನೂ ಮಾಡಿಲ್ಲ, ನಿಮ್ಮ ಬಳಿ ನನ್ನನ್ನು ಬಂಧಿಸಲು ವಾರಂಟ್ ಎಲ್ಲಿದೆ?" ಎಂದು ಕೇಳಿದರು. ಪೊಲೀಸರ ಬಳಿ ವಾರಂಟಿರಲಿಲ್ಲ, ಸುಮಾರು ಒಂದು ಗಂಟೆಯ ನಂತರ, ಹೆಸರು, ವಿಳಾಸ ಇತ್ಯಾದಿ ವಿವರಗಳೇ ತಪ್ಪಾಗಿದ್ದ ಒಂದು ವಾರಂಟನ್ನು ಅವರ ಮುಂದೆ ಹಿಡಿಯಲಾಯಿತು. ಆಗ ರಾತ್ರಿ ಸುಮಾರು 8 ಗಂಟೆಯಾಗಿತ್ತು. ಆ ಹೊತ್ತಿನಲ್ಲಿ ಸೀತಾರಾಂ ಎಲ್ಲಿರುತ್ತಾರೆ ಎಂದು ಖಾತ್ರಿಪಡಿಸಿಕೊಳ್ಳಲು ಪೊಲೀಸರು ಮೊಬೈಲು ಫೋನಿನ ಜಿ.ಪಿ.ಎಸ್. ಬಳಸಿಕೊಂಡಿದ್ದರಂತೆ!

ಆದರೆ ತನಗೆ ಇಂತಹದ್ದೇನೋ ಕಾದಿದೆ ಎಂಬ ಅಂದಾಜು ಸೀತಾರಾಂಗೆ ಇತ್ತು. ಕಳೆದ ಕೆಲವು ತಿಂಗಳುಗಳಿಂದ 'ಕರಾವಳಿ ಅಲೆ' ಗೂಂಡಾ ದಾಳಿಗಳಿಗೆ ಈಡಾಗುತ್ತಿದೆ. 2008 ರ ನವೆಂಬರ್ 17 ರ ರಾತ್ರಿ ಪತ್ರಿಕೆಯ ಕಚೇರಿ ಮೇಲೆ ದಾಳಿ ನಡೆಸಿ ಕುರ್ಚಿ, ಮೇಜು, ಕಂಪ್ಯೂಟರ್‌ಗಳನ್ನು ನಾಶ ಮಾಡಿದ್ದರು. ಆದರೆ ಮಂಗಳೂರು ಪೊಲೀಸರು ಈವರೆಗೆ ಆ ಘಟನೆಯಲ್ಲಿ ಭಾಗಿಯಾದವರನ್ನು ಹಿಡಿದಿಲ್ಲ, ಯಾಕೆಂದರೆ ಆ ದಾಳಿಯ ಹಿಂದಿರುವುದು ಬಿಜೆಪಿಯ ಪರಿವಾರದ ಒಂದು ಸಂಘಟನೆ ಎಂಬ ಗುಮಾನಿ ಇದೆ. ಆನಂತರ ಮಂಗಳೂರಿನ ಓರ್ವ ನಕಲಿ ಸ್ವಾಮಿ, ತನ್ನ ಬಾಡಿಗೆ ಬಂಟರಿಂದ ಕರಾವಳಿ ಅಲೆಯ ಏಜೆಂಟರನ್ನೂ, ಮಾರಾಟಗಾರರನ್ನು ಬೆದರಿಸಲು ಪ್ರಾರಂಭಿಸಿದ. ಅದು ಈಗಲೂ ಮುಂದುವರಿದಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಅನೇಕ ಸಣ್ಣ ಊರುಗಳಲ್ಲಿ 'ಕರಾವಳಿ ಅಲೆ'ಯ ಮಾರಾಟವೇ ನಿಂತಿದೆ. ಉಡುಪಿ ಮತ್ತು ಮಂಗಳೂರು ನಗರಗಳಲ್ಲಿ ಕೂಡ ಇದುವರೆಗೆ ಪತ್ರಿಕೆಯನ್ನು ಮಾರುತ್ತಿದ್ದ ಅನೇಕ ಅಂಗಡಿಗಳು ಈಗ ಅದನ್ನು ನಿಲ್ಲಿಸಿವೆ. ಮತೀಯವಾದಿ ಹಿಂದೂ ಸಂಘಟನೆಯೊಂದರ ಜನಗಳು ತಮ್ಮ ಸಂಘಟನೆಯ ಹೆಸರು ಹೇಳಿಕೊಂಡೇ ಪತ್ರಿಕೆ ಮಾರದಂತೆ ಮಾರಾಟಗಾರರಿಗೆ ತಾಕೀತು ಮಾಡುತ್ತಿದ್ದಾರೆ. ಹಲವೆಡೆ ಪತ್ರಿಕೆಯ ಬಂಡಲ್ಲುಗಳಿಗೆ ಬೆಂಕಿ ಹಚ್ಚಲಾಗಿದೆ. ಈ ಮೊದಲು ಕರಾವಳಿ ಅಲೆಯ ಸುಮಾರು 55,000 ಪ್ರತಿಗಳು ದಿನವಹಿ ಮಾರಾಟವಾಗುತ್ತಿದ್ದವು. ಈಗ ಈ ಗುಂಪು ಬೆದರಿಕೆಯಿಂದಾಗಿ ಪತ್ರಿಕೆ ಮಾರಾಟದಲ್ಲಿ 12,000 ದಷ್ಟು ಕಡಿತವಾಗಿದೆ ಎಂದು ಸೀತಾರಾಂ ಹೇಳಿದರು. ಸೀತಾರಾಂ ಈ ಕುರಿತು ಪೊಲೀಸರಿಗೆ ಹಲವು ದೂರುಗಳನ್ನು ಸಲ್ಲಿಸಿದ್ದಾರೆ. ತನ್ನ ವಿರುದ್ಧ ದಾಳಿ ಪ್ರಾರಂಭಿಸಿದ ಸ್ವಾಮಿ ರಾಜಶೇಖರಾನಂದರ ವಿರುದ್ಧವೂ ದೂರು ಕೊಟ್ಟಿದ್ದಾರೆ. ಆದರೆ ಮಂಗಳೂರು ಪೊಲೀಸರು ಯಾವುದೇ ನಿರ್ದಿಷ್ಟ ವ್ಯಕ್ತಿಯ ವಿರುದ್ಧವೂ ಕ್ರಮ ತೆಗೆದುಕೊಳ್ಳದೆ, ತಾವು ಪತ್ರಿಕಾ ಕಚೇರಿ ಮತ್ತು ಪತ್ರಿಕೆಯ ಡೆಲಿವರಿ ವ್ಯಾನುಗಳಿಗೆ ರಕ್ಷಣೆ ಕೊಟ್ಟಿದ್ದೇವೆ ಎಂಬ ವಿವರಣೆ ನೀಡುತ್ತಿದ್ದಾರೆ.

ಕರಾವಳಿಯ ಅಲೆಯ ವಿರುದ್ಧ ಇದುವರೆಗೆ ನಡೆದದ್ದು ಸರ್ಕಾರದಿಂದ ಪ್ರಾಯೋಜಿತವಾದ ಹಿಂಸೆ; ಬಿಜೆಪಿಯ ಪರಿವಾರದ ಸಂಘಟನೆಗಳು ನಡೆಸುವ ಅಕೃತ್ಯಗಳನ್ನು ಪೊಲೀಸರು ಕಂಡೂಕಾಣದವರಂತೆ ಇರುತ್ತಿದ್ದರು; ಅಥವಾ "ನಾನು ಹೊಡೆದ ಹಾಗೆ ಮಾಡುತ್ತೇನೆ; ನೀನು ಅತ್ತ ಹಾಗೆ ಮಾಡು" ಎಂಬ ;ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವ ನಾಟಕ ಮಾಡುತ್ತಿದ್ದರು. ಆದರೆ ಮೊನ್ನೆ ಉಡುಪಿಯಲ್ಲಿ ನಡೆದದ್ದು ಸರ್ಕಾರದ ನೇರ ಹಿಂಸೆ. ಉಡುಪಿಯಲ್ಲಿ ತಮಗೆ ಕೋಳ ತೊಡಿಸಲು ಮುಂದಾದ ಪೊಲೀಸರಿಗೆ ಸೀತಾರಾಂ "ನೀವು ಸುಪ್ರೀಂ ಕೋರ್ಟಿನ ಆದೇಶ ಮೀರಿ ವರ್ತಿಸುತ್ತಿದ್ದೀರಿ. ನೀವು ನನಗೆ ಕೋಳ ತೊಡಿಸುವಂತಹ ಕ್ರಿಮಿನಲ್ ಆರೋಪ ನನ್ನ ಮೇಲೆ ಇಲ್ಲ" ಎಂದು ಹೇಳಿದಾಗ ಪೊಲೀಸರು "ನಮಗೆ ಮೇಲಿನವರ ಆಜ್ಞೆ ಇದೆ" ಎಂದರಂತೆ. ಹಾಗಾಗಿ ಸೀತಾರಾಂ ಅವರನ್ನು ಕೋಳಹಾಕಿ ಕೋರ್ಟಿಗೆ ಎಳೆದುಕೊಂಡು ಹೋದ ಅಮಾನುಷ ಕ್ರಮಕ್ಕೆ ರಾಜ್ಯ ಗೃಹಮಂತ್ರಿಗಳೇ ಅಂತಿಮವಾಗಿ ಹೊಣೆಗಾರರು. ಕರಾವಳಿ ಅಲೆಯ ವಿರುದ್ಧ ನಿರಂತರವಾಗಿ ನಡೆಯುತ್ತಿರುವ ದಾಳಿಗಳ ಬಗ್ಗೆ ಅವರು "ಕಾನೂನು ತನ್ನ ಹಾದಿಯಲ್ಲಿ ನಡೆಯುತ್ತದೆ" ಎಂಬ ಹಾರಿಕೆಯ ಉತ್ತರ ನೀಡಿದ್ದಾರೆ. ಈ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ರೈತರ ಹತ್ಯೆ, ಉಡುಪಿಯ ಶಾಸಕರ ಪತ್ನಿಯ ಅಸಹಜ ಸಾವಿನ ಪ್ರಕರಣ, ರಾಜ್ಯದ ಕ್ರೈಸ್ತ ಮಂದಿರಗಳ ಮೇಲೆ ದಾಳಿ, ಮಂಗಳೂರಿನ ಜೈಲಿನಲ್ಲಿ ಭಜರಂಗಿಗಳ ದಾಂಧಲೆ- ಈ ಯಾವ ಸಂದರ್ಭದಲ್ಲೂ ಗೃಹಮಂತ್ರಿಗಳ ಮಾತು ಮತ್ತು ವರ್ತನೆ ಅವರ ಸ್ಥಾನಕ್ಕೆ ತಕ್ಕುದಾಗಿರಲಿಲ್ಲ. ನಾಡಿನ ಗೃಹಮಂತ್ರಿಯೇ ದರ್ಪ, ದುರಹಂಕಾರ ದಬ್ಬಾಳಿಕೆಗಳನ್ನು ತನ್ನ ಕಾರ್ಯಶೈಲಿ ಮಾಡಿಕೊಂಡರೆ ಯಾರ ಸ್ವಾತಂತ್ರ್ಯವೂ ಸುರಕ್ಷಿತವಲ್ಲ ಎಂಬುದಕ್ಕೆ ಸೀತಾರಾಂ ಅವರ ಬಂಧನವೇ ಸಾಕ್ಷಿ.

ಸೀತಾರಾಂ ಅವರನ್ನು ಮೊನ್ನೆ ಉಡುಪಿಯ ಕೋರ್ಟಿಗೆ ಕರೆತಂದಾಗ ಅವರು ತಮ್ಮ ಕೋಳತೊಡಿಸಿದ ಕೈಯನ್ನು ಅದೊಂದು ವಿಜಯದ ಸಂಕೇತವೋ ಎಂಬಂತೆ ಮೇಲೆ ಎತ್ತಿದ್ದರು. ಅದು ಸೀತಾರಾಂ ಅವರು ಸೋತು ಗೆದ್ದಿರುವ ಸಂಕೇತ. ಸರ್ಕಾರ ಅವರನ್ನು ಈ ರೀತಿ ನಡೆಸಿಕೊಂಡು ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಿದೆ. ಸೀತಾರಾಂ ಅವರನ್ನು ಬಂಧಿಸಿದ ರೀತಿ ಮಾತ್ರವಲ್ಲ; ಅವರ ಬಂಧನವೇ ಒಂದು ದಬ್ಬಾಳಿಕೆಯ ಕ್ರಮವಾಗಿದೆ. ಪತ್ರಿಕೆಗಳ ವಿರುದ್ಧ ಮಾನಹಾನಿಯ ಮೊಕದ್ದಮೆ ಹೂಡಲು ಅವಕಾಶ ಮಾಡಿಕೊಡುವ ಕ್ರಿಮಿನಲ್ ಕಾಯ್ದೆಯ ಕಲಮುಗಳು ವಸಾಹತುಶಾಹಿಯ ಪಳೆಯುಳಿಕೆ. ಸೀತಾರಾಂ ಅವರ ಬಂಧನವನ್ನು ಪ್ರತಿಭಟಿಸುವುದರ ಜೊತೆ, ನಾವು ಕ್ರಿಮಿನಲ್ ಕಾಯ್ದೆಯ ಈ ಕರಾಳ ಕಲಮಿನ ವಿರುದ್ಧ ಕೂಡ ಪ್ರತಿಭಟಿಸಬೇಕಾಗಿದೆ. ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಸೀತಾರಾಂ ಅವರನ್ನು ಭೇಟಿ ಮಾಡಿ ಹೊರಬರುವಾಗ "ನಿಮಗೆ ಭಯವಾಗುತ್ತಿದೆಯಾ" ಎಂದು ನಾನು ಕೇಳಿದೆ. ಅವರು, "ಉಡುಪಿಯಲ್ಲಿ ಭಯವಿಲ್ಲ, ಆದರೆ ಮಂಗಳೂರು ಜೈಲಿನ ಬಗ್ಗೆ ಖಂಡಿತ ಭಯವಾಗುತ್ತದೆ" ಎಂದರು. ನಾನು ಸೀತಾರಾಂ ಅವರನ್ನು ಪ್ರಶ್ನಿಸಿದ್ದು ತನ್ನ ಅವರು ಪತ್ರಿಕೆಯನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ. ಸೀತಾರಾಂ ಹೇಳಿದ್ದು ತನ್ನ ಜೀವಭಯದ ಬಗ್ಗೆ. ನಾವು ಎಂತಹ ಕಾಲದಲ್ಲಿ ಬದುಕುತ್ತಿದ್ದೇವೆ! ಇಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆಯೇ?

■ ಜೆ. ರಾಜಶೇಖರ



ಸತ್ಯಂ ಮಿಥ್ಯಂ



ಸತ್ಯಂ ವಂಚನೆ ವ್ಯವಹಾರ ನಡೆದುಕೊಂಡೇ ಬಂದಿದ್ದ ಕಳೆದ ನಾಲ್ಕೈದು ವರ್ಷಗಳಲ್ಲಿ ಅದರ ಪಾಲಿನ ಕಾನೂನೇ ಮಾಯಾ, ಬ್ಯಾಂಕ್ ಕಾಯ್ದೆ ಸೆಬಿ ಕಾನೂನು, ಲೆಕ್ಕಪತ್ರ ಶೋಧನೆಗಳ ನಿಯಮಗಳೆಲ್ಲಾ ಮಾಯವಾಗಿ ಹೋಗಿದ್ದವು. ಇನ್ನೂ ಹೇಳಬೇಕೆಂದರೆ, ದೇಶದ ಖ್ಯಾತ ಇಕನಾಮಿಸ್ಟ್‌ಗಳ ವಿಮರ್ಶಾ ಶಕ್ತಿ ಮಾಯವಾಗಿತ್ತು. ಪ್ರಖ್ಯಾತ ಟಿವಿ ಚಾನೆಲ್ಲುಗಳ, ಇಂಗ್ಲಿಷ್ ಪತ್ರಿಕೆಗಳ ವಿಶ್ಲೇಷಣಾ ಶಕ್ತಿಯೇ ಮಾಯವಾಗಿ ಹೋಗಿತ್ತು. ಬ್ಯುಸಿನೆಸ್ ಚಾನಲ್ಲುಗಳ, ಬ್ಯುಸಿನೆಸ್ ಪತ್ರಿಕೆಗಳ ಕರ್ತವ್ಯಪ್ರಜ್ಞೆ ಮಾಯವಾಗಿ ಹೋಗಿತ್ತು.

● ಪಾರ್ವತೀಶ್

Delete Satyam....

ಕಂಪ್ಯೂಟರ್ ಪರದೆ ಮೇಲಿನ ಒಂದಕ್ಷರವನ್ನು ಡಿಲೀಟ್ ಮಾಡುವಷ್ಟೇ ಸಲೀಸಾಗಿ ಸತ್ಯಂ ಕಂಪ್ಯೂಟರ್ ಸರ್ವಿಸಸ್ ಎಂಬ ಬೃಹತ್ ಕಂಪನಿಯನ್ನೇ ಅದರ ಮಾಲೀಕ ರಾಮಲಿಂಗ ರಾಜು ಡಿಲೀಟ್ ಮಾಡಿಬಿಟ್ಟಿದ್ದಾನೆ.

ಇದೊಂಥರಾ ಮಾಯಾಬಜಾರ್.

ಈಗೆ ಹೆಸರಿಗೆ ಸತ್ಯಂ ಉಳಿದುಕೊಂಡಿದೆಯಾದರೂ ಅದರ 67 ಕೋಟಿ ಷೇರುಗಳ ಮೌಲ್ಯ ಮಾಯಾ, ಕಂಪನಿಯ 7 ಸಾವಿರ ಕೋಟಿ ರೂಪಾಯಿ ಮಾಯಾ, 52 ಸಾವಿರ ಟೆಕ್ಕಿಗಳ ಭವಿಷ್ಯ ಮಾಯಾ, ಲಕ್ಷಾಂತರ ಹೂಡಿಕೆದಾರರ ಬಂಡವಾಳವೇ ಮಾಯಾ..... ಈ ಮಾಯಾ ಬಜಾರ್‌ನ ಸರಣಿ ಇಲ್ಲಿಗೇ ಮುಗಿಯುವುದಿಲ್ಲ.

ಸತ್ಯಂ ವಂಚನೆ ವ್ಯವಹಾರ ನಡೆದುಕೊಂಡೇ ಬಂದಿದ್ದ ಕಳೆದ ನಾಲ್ಕೈದು ವರ್ಷಗಳಲ್ಲಿ ಅದರ ಪಾಲಿನ ಕಾನೂನೇ ಮಾಯಾ, ಬ್ಯಾಂಕ್ ಕಾಯ್ದೆ ಸೆಬಿ ಕಾನೂನು, ಲೆಕ್ಕಪತ್ರ ಶೋಧನೆಗಳ ನಿಯಮಗಳೆಲ್ಲಾ ಮಾಯವಾಗಿ ಹೋಗಿದ್ದವು. ಇನ್ನೂ ಹೇಳಬೇಕೆಂದರೆ, ದೇಶದ ಖ್ಯಾತ ಇಕನಾಮಿಸ್ಟ್‌ಗಳ ವಿಮರ್ಶಾ ಶಕ್ತಿ ಮಾಯವಾಗಿತ್ತು. ಪ್ರಖ್ಯಾತ ಟಿವಿ ಚಾನೆಲ್ಲುಗಳ, ಇಂಗ್ಲಿಷ್ ಪತ್ರಿಕೆಗಳ ವಿಶ್ಲೇಷಣಾ ಶಕ್ತಿಯೇ ಮಾಯವಾಗಿ ಹೋಗಿತ್ತು. ಬ್ಯುಸಿನೆಸ್ ಚಾನಲ್ಲುಗಳ, ಬ್ಯುಸಿನೆಸ್ ಪತ್ರಿಕೆಗಳ ಕರ್ತವ್ಯಪ್ರಜ್ಞೆ ಮಾಯವಾಗಿ ಹೋಗಿತ್ತು.

ಆದರೆ ಈಗ ಅವರಲ್ಲಿ ಪ್ರತಿಯೊಬ್ಬರೂ ಎಚ್ಚರಗೊಂಡಿದ್ದಾರೆ. ಈ ಮಂಕು ದಿಣ್ಣೆಗಳನ್ನು ಬಡಿದೆಚ್ಚರಿಸಿದವನು ಬೇರ‍್ಯಾರೂ ಅಲ್ಲ ಸ್ವತಃ ಹುಟ್ಟು ವಂಚಕ ರಾಜುನೇ.

ಇದಲ್ಲವಾ ತಮಾಷೆ ಅಂದರೆ?

ಅಷ್ಟೇ ಅಲ್ಲ ಬಹುಶಃ ಇದು ಇಂಡಿಯಾ ದೇಶದ ದುರಂತವೂ ಹೌದು. ಇಲ್ಲಿ ಹರ್ಷದ್ ಮೆಹತಾ, ಕೇತನ್ ಪಾರೀಖ್‌ಗಳ ಷೇರ್ ಬಜಾರ್ ವಂಚನೆ ಬಗ್ಗೆ ಅವರೇ ಬಾಯಿಬಿಡುವವರೆಗೂ ಯಾರಿಗೂ ತಿಳಿಯುವುದಿಲ್ಲ, ಲಂಚಖೋರ ಖದೀಮರು ತಿಂದು ಸುಸ್ತಾಗುವವರೆಗೂ ಯಾರಿಗೂ ಅದರ ಸುಳಿವು ಸಿಕ್ಕಿರುವುದಿಲ್ಲ.

ಈಗ ಸತ್ಯಂನ ರಾಮಲಿಂಗ ರಾಜು ವಂಚನೆ ನಡೆದಿರುವುದೂ ಹಾಗೇನೆ. 'ನನಗೆ ಸುಳ್ಳು ಲೆಕ್ಕ ತೋರಿಸಿ ನಕಲಿ ಲಾಭ ಬಿಂಬಿಸಿ ಸಾಕಾಗಿ ಹೋಗಿದೆ. ಇಷ್ಟು ದಿನ ನಾನು ಹೇಳಿದ್ದೆಲ್ಲಾ ಬೋಗಸ್'' ಅಂತ ಸ್ವತಃ ಮಾಲೀಕ ರಾಜುನೇ ಗುಟ್ಟು ಬಯಲು ಮಾಡಿದ ಮೇಲೆ ಎಲ್ಲವೂ ಬಹಿರಂಗವಾಗಿದೆ. ಇಷ್ಟು ದಿನ ಸತ್ಯಂ ಕಂಪನಿಯನ್ನು ಹಾಡಿ ಹೊಗಳುತ್ತಿದ್ದ ಮುತ್ಸಾಳರೆಲ್ಲಾ ಇವತ್ತು ತೋಳಗಳಂತೆ ಮುಗಿಬಿದ್ದು ಸತ್ಯಂ ಮೇಲೆ ತಲೆಗೊಂದು ಕಲ್ಲು ಎಸೆಯುತ್ತಿದ್ದಾರೆ. ಆಂಧ್ರ ರಾಜಕಾರಣಿಗಳು 'ಸತ್ಯಂ ಬೆಳೆಸಿದ್ದು ನಾನಲ್ಲ ನೀನಲ್ವಾ' ಎಂದು ಹಾದಿರಂಪ ಬೀದಿ ರಂಪ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ತನ್ನ ಬುಡಕ್ಕೇ ಬೆಂಕಿ ಬತ್ತೇನೊ ಅನ್ನುವಂತೆ ಅರ್ಜೆಂಟಾಗಿ ಸತ್ಯಂ ಕಂಪನಿಯನ್ನು ತನ್ನ ಹತೋಟಿಗೆ ತೆಗೆದುಕೊಂಡಿದೆ.

ಆದರೆ ಒಬ್ಬನೇ ಒಬ್ಬನಾದರೂ, ಒಂದು ಮೀಡಿಯಾನಾದರೂ ಈ ಕಾರ್ಪೊರೇಟ್ ಜಗತ್ತಿನ ರಕ್ತಗತ ಗುಣವಾಗಿರುವ ಚೀಟಿಂಗ್ ಬಗ್ಗೆ ವಿಮರ್ಶೆ-ಆತ್ಮವಿಮರ್ಶೆ ಮಾಡಿಕೊಳ್ಳುತ್ತಿಲ್ಲ.



ವೈಎಸ್‌ಆರ್ ಜೊತೆ ವಂಚಕ ರಾಜು

ಜಾಗತೀಕರಣ-ಖಾಸಗೀಕರಣಗಳೆಂಬ ಈ ಕರಾಳ ಯುಗದಲ್ಲಿ ಕಾರ್ಪೊರೇಟ್ ಕಂಪನಿಗಳ ದಕ್ಷತೆ, ಸಾಧನೆ, ಪ್ರಾಮಾಣಿಕತೆಗಳ ಬಗ್ಗೆ ನಂಬಲುಸಾಧ್ಯ ಹೊಗಳಿಕೆ ನಡೆದಿತ್ತು. ಸರ್ಕಾರ ಅಂದರೆ ನಾಲಾಯಕ್ ವ್ಯವಸ್ಥೆ ಡೆಮಾಕ್ರಸಿ ಅಂದರೆ ಅದೊಂದು ಗೋಳು, ಇವೆಲ್ಲಾ ಪ್ರಗತಿಗೆ ಅಡ್ಡಿ ಎಂದೇ ಯಾವಾಗಲೂ ಬಿಂಬಿಸಲಾಗುತ್ತಿತ್ತು. ವಿಪ್ರೋ, ಇನ್‌ಫೋಸಿಸ್‌ಗಳಂತಹ ಮಾಮೂಲಿ ವ್ಯಾಪಾರಿಗಳೂ ಇಡೀ ಬೆಂಗಳೂರು ನಗರವನ್ನೇ ತಮ್ಮ ಆಡಳಿತದ ವಶಕ್ಕೆ ಒಪ್ಪಿಸುವಂತೆ ಕೇಳುವಷ್ಟು ದುರಹಂಕಾರ ಬೆಳೆಸಿಕೊಂಡಿದ್ದರು.

ಆದರಿವತ್ತು ಏನಾಗಿದೆ?

ಭಾರತದ ಕೀರ್ತಿಯ ಕಿರೀಟದ ನಾಲ್ಕನೇ ರತ್ನದಂತಿದ್ದ ಸತ್ಯಂ ಕಂಪ್ಯೂಟರ್ಸ್ ದಿವಾಳಿಯಾಗಿದೆ. ಕಂಪನಿಯ ಮಾಲೀಕನೇ ನಡೆಸಿದ ಮೋಸದಿಂದ ಆಗಿರುವ ಆಕ್ಸಿಡೆಂಟ್ ಇದು. ಇಂಥ ನಯವಂಚಕರ ಕೈಗೆ ಬೆಂಗಳೂರು ಅಥವಾ ಹೈದರಾಬಾದ್‌ನಂತಹ ನಗರಗಳ ಆಡಳಿತ ವಹಿಸಿಕೊಟ್ಟರೆ ಪರಿಣಾಮ ಏನಾಗಬಹುದಿತ್ತು ಯೋಚಿಸಿ ನೋಡಿ?

'ನಾನು ಜೈಲಿಗೆ ಹೋದರೂ ಪರವಾಗಿಲ್ಲ, ಸಾರ್ವಜನಿಕರ ಮತ್ತು ಸರ್ಕಾರದ ಹಣ ಕದಿಯದೆ ಬಿಡಲಾರೆ' ಎಂಬುದೇ ಇವತ್ತಿನ ಇಡೀ ಸತ್ಯಂ ಹಗರಣದ ತಿರುಳಾಗಿದೆ.

ಇದರ ರೂವಾರಿಗಳಾದ ರಾಮಲಿಂಗ ರಾಜು ಮತ್ತವನ ಮಕ್ಕಳಾದ ತೇಜ ರಾಜು, ರಾಮ ರಾಜು, ಹಾಗೂ ರಕ್ತ ಸಂಬಂಧಿಗಳ ಧನದಾಹವೇ ಇಡೀ ಹಗರಣದ ಕೇಂದ್ರಬಿಂದು.

ವಂಚಕರ ಚಕ್ರವ್ಯೂಹ

1987 ರಲ್ಲಿ ಶುರುವಾದ ಸತ್ಯಂ ಕಂಪನಿ 94 ರ ಹೊತ್ತಿಗೆ ದೇಶದ ಅತಿದೊಡ್ಡ ಐಟಿ ಕಂಪನಿಗಳಲ್ಲಿ ಒಂದೆಂಬ ಖ್ಯಾತಿ ಪಡೆದಿತ್ತು. ದಿನ ಕಳೆದಂತೆ Asian Make ಅವಾರ್ಡು, ಗೋಲ್ಡನ್ ಪೀಕಾಕ್ ಪ್ರಶಸ್ತಿ, ಇಂಗ್ಲೆಂಡಿನ India Business ಅವಾರ್ಡ್‌ಗಳೂ ರಾಜುಗೆ ಸಿಕ್ಕಿದ್ದವು. ಯಾವುದೇ ದೇಶದ ನಾಯಕ ಭಾರತಕ್ಕೆ ಬಂದರೂ ಹೈದರಾಬಾದಿಗೆ ಹೋಗಿ ಸತ್ಯಂ ರಾಜುನ ಭೇಟಿ ಮಾಡಿ ಹೋಗುತ್ತಿದ್ದರು. ಜಗತ್ತಿನ 66 ದೇಶಗಳ 185 ಶ್ರೀಮಂತ ಕಂಪನಿಗಳು ಸತ್ಯಂ ಸೇವೆ ಪಡೆಯುತ್ತಿದ್ದವು. ಭಾರತ, ಅಮೆರಿಕಾ, ಇಂಗ್ಲೆಂಡ್, ಜಪಾನ್, ಸಿಂಗಪುರ್, ಚೀನಾ, ಕೆನಡಾಗಳಲ್ಲೂ ಸತ್ಯಂ ಶಾಖೆಗಳಿದ್ದವು. ಬೆಂಗಳೂರು, ದೆಹಲಿ, ಕಲ್ಕತ್ತಾಗಳಲ್ಲಿ 50 ಸಾವಿರದಷ್ಟು ಸತ್ಯಂ ಟೆಕ್ಕಿಗಳು ಕೆಲಸ ಮಾಡುತ್ತಿದ್ದರು. ಸತ್ಯಂ ಪ್ರತಿ ಮೂರು ತಿಂಗಳಿಗೆ ಕನಿಷ್ಠ ಅಂದರೂ 500 ಕೋಟಿ ಲಾಭ ತೋರಿಸುತ್ತಿತ್ತು. ಹೀಗಿದ್ದಾಗ ಸತ್ಯಂ ಷೇರುಗಳಿಗೆ ಡಿಮ್ಯಾಂಡ್ ಬರದಿರುತ್ತದೆಯೇ?


ಜನ ಮುಗಿಬಿದ್ದು ಒಂದಕ್ಕೆ ಹತ್ತರಷ್ಟು ಬೆಲೆ ತೆತ್ತು ಸತ್ಯಂ ಷೇರು ಖರೀದಿಸಿ ಸ್ವರ್ಗವೇ ಸಿಕ್ಕಂತೆ ಬೀಗುತ್ತಿದ್ದರು.

▶▶▶

ಸತ್ಯಂ ದುಡ್ಡು ಟಿವಿ9 ನಲ್ಲಿದೆಯಾ?

ಸತ್ಯಂ ಕಂಪನಿ ಮುಳುಗಿದ ಸುದ್ದಿ ಹೊರಬೀಳುತ್ತಿದ್ದಂತೆ ಕರ್ನಾಟಕದ ಮೀಡಿಯಾ ವಲಯದಲ್ಲಿ ಕೇಳಿಬಂದ ಮೊದಲ ರೂಮರ್ ಏನೆಂದರೆ..

"ಇನ್ನು ಟಿವಿ9 ಕತೆ ಮುಗೀತು" ಎಂದು. ಕೆಲವರ ಪ್ರಕಾರ ಟಿವಿ9ಗೆ ಹಣ ಪಂಪ್ ಮಾಡುತ್ತಿದ್ದವರೇ ಸತ್ಯಂ ಕಂಪೆನಿಯವರು ಎಂಬುದಾಗಿತ್ತು, ಆದರೆ ವಾಸ್ತವ ಹಾಗಿಲ್ಲ, ಹಾಗಂತ ಸತ್ಯಂಗೂ ಟಿವಿ9 ಗೂ ಒಳಸಂಬಂಧ ಇಲ್ಲ ಅಂತಲೂ ಇಲ್ಲ, ಅದೊಂತರ ಭಾವ ಭಾಮೈದನ ವ್ಯವಹಾರಿಕ ಸಂಬಂಧದ ರೀತಿ ಇದೆ. ಸತ್ಯಂ ಕಂಪೆನಿಯ ಮಾಲೀಕರಾಗಿದ್ದ



ಶ್ರೀನಿರಾಜು

ಹಲವಾರು "ರಾಜು"ಗಳ ನೆಟ್‌ವರ್ಕ್‌ನ ಲಿಂಕೂ ಟಿವಿ9 ಗಿದೆ. ಶ್ರೀನಿವಾಸ ಅವರಲ್ಲೊಬ್ಬ.

ಸತ್ಯಂ ಮಾಲೀಕ ರಾಮಲಿಂಗರಾಜುನ ಭಾವನಾದ ಶ್ರೀನಿವಾಸ ರಾಜು ಅಲಿಯಾಸ್ ಶ್ರೀನಿ ರಾಜು ಈ ಟಿವಿ9 ನ ಪರೋಕ್ಷ ಮಾಲೀಕ. ಪರೋಕ್ಷ ಮಾಲೀಕ ಅಂತ ಯಾಕನ್ನಬೇಕೆಂದರೆ, 2003ರಲ್ಲಿ ಶುರುವಾದ ಟಿವಿ9 ಈಗ ತೆಲುಗು, ಕನ್ನಡ ಹಾಗೂ ಗುಜರಾತಿ ನ್ಯೂಸ್ ಚಾನೆಲ್ ಹೊಂದಿದೆ. ಮೊನ್ನೆ ತಾನೆ ಹೊಸದಾಗಿ ಹಿಂದಿ-ಇಂಗ್ಲಿಷ್ ನ್ಯೂಸ್ ಚಾನಲ್ಲೂ ಶುರುವಾಗಿದೆ. ಈ ಎಲ್ಲಾ ಚಾನೆಲ್‌ಗಳ ಮಾಲಿಕತ್ವ ಎಬಿಸಿಎಲ್ ಎಂಬ ಕಂಪನಿಯದ್ದು. Associated Broad Casting co-pvt Ltd ಎಂಬ ಎಬಿಸಿಎಲ್ ಕಂಪನಿಗೆ ಶ್ರೀನಿರಾಜು, ಸಂಜಯರೆಡ್ಡಿ, ಸುನಿಲ್ ಅವಸ್ತಿ ಎಲಿಸಾಚ್‌ರೆಂಬ ಪಾರ್ಟನರ್‌ಗಳಿದ್ದಾರೆ. ಆದರೆ ಎಬಿಸಿಎಲ್‌ಗೆ ಮೂಲ ಬಂಡವಾಳ ಹೂಡಿರುವ I-Lab ಎಂಬ ಇನ್ನೊಂದು ಕಂಪನಿ ಇದೆ. ಅದರ ಪೂರ್ಣ ಮಾಲಿಕತ್ವ ಮಾತ್ರ ಶ್ರೀನಿವಾಸ ರಾಜು ಕೈಲಿದೆ. ಅದಿಷ್ಟೇ ಅಲ್ಲ, ಶ್ರೀನಿ ರಾಜುನ I-Lab ಕಂಪೆನಿ ಎಬಿಸಿಎಲ್ ತರದ ಇತರ 13 ಕಂಪನಿಗಳಿಗೆ ಹಣಕಾಸು ಬಂಡವಾಳ ಹರಿಸುತ್ತಾ ಕಂಟ್ರೋಲ್ ಇಟ್ಟುಕೊಂಡಿದೆ.

ಈಗಿನ ಪ್ರಶ್ನೆ ಏನೆಂದರೆ ಶ್ರೀನಿರಾಜುಗೆ ಅಷ್ಟು ಹಣ ಎಲ್ಲಿಂದ ಹರಿದುಬಂತು?

ಈ ಶ್ರೀನಿ ರಾಜು 2000ನೇ ಇಸವಿ ತನಕ ಸತ್ಯಂ ಕಂಪ್ಯೂಟರ್ಸ್‌ನ ಎಕ್ಸಿಕ್ಯೂಟೀವ್ ಡೈರೆಕ್ಟರ್ ಆಗಿದ್ದ, ಆಮೇಲೆ ಅಲ್ಲಿಂದ ಹೊರಬಂದು Peepul Capital ಅಂತಾ ಒಂದು ಹೊಸ ಕಂಪೆನಿ ಚಾಲೂ ಮಾಡಿದ. ಇದರ ಆಸ್ತಿ ಮೌಲ್ಯ ಇವತ್ತು ಸಾವಿರದೈನೂರು ಕೋಟಿಯಷ್ಟಿದೆ. ಈ ಶ್ರೀನಿ ರಾಜು ಎಂತಾ ಚಾಲಾಕಿಯೆಂದರೆ ಇಡೀ ವಿಶ್ವದ ಗಮನ ಸೆಳೆದಿರುವ ಹೈದರಾಬಾದಿನ Fab city ಯಲ್ಲೂ ಒಂದಷ್ಟು ಭೂಮಿ ಗುಳುಂ ಮಾಡಿದ್ದಾನೆ. ಚಿತ್ತೂರು ತಮಿಳುನಾಡಿನ ಗಡಿ ಪ್ರದೇಶವಾದ ಸತ್ಯಮೇಡಂನಲ್ಲಿ ತನ್ನದೇ ಎಸ್‌ಇಝಡ್‌ಗಾಗಿ ಬಡರೈತರ ಸಾವಿರಾರು ಎಕರೆ ಭೂಮಿ ಮಂಜೂರು ಮಾಡಿಸಿಕೊಂಡಿದ್ದಾನೆ. ಟಿವಿ ಚಾನೆಲ್ ವ್ಯವಹಾರದಲ್ಲಿ ಇನ್ನಷ್ಟು ವೇಗವಾಗಿ ಬೆಳೆಯಬೇಕೆಂದು ಇಡೀ ಆಫ್ರಿಕಾ ತಲುಪುವಂತಾ ಒಂದು ಚಾನೆಲ್ ಮತ್ತು ಅರಬ್ ದೇಶಗಳಿಗಾಗಿ ಇನ್ನೊಂದು ಚಾನೆಲ್ ಶುರುಮಾಡಲು ತಯಾರಾಗಿದ್ದ. ಅದಕ್ಕಾಗಿ ಜಪಾನಿನ ಬ್ಯಾಂಕ್ ಒಂದರಿಂದ ಒಂದುಸಾವಿರ ಕೋಟಿ ಸಾಲ ಎತ್ತಲು ಹೊರಟು ನೂರು ಕೋಟಿ ತಗೊಂಡುಬಿಟ್ಟಿದ್ದಾನೆ. ಆದರೆ ಸತ್ಯಂ ಕಂಪನಿ ಮುಳುಗುತ್ತಿದ್ದಂತೆ ಟಿವಿ9 ಶ್ರೀನಿ ರಾಜುಗೂ ಷೇರು ಮಾರ್ಕೆಟ್‌ನಲ್ಲಿ ಹತ್ತಿರತ್ತಿರ ನೂರು ಕೋಟಿ ಲಾಸಾಗಿದೆ. ಅವನ ಕಂಪನಿ ಶೇರುಗಳಿಗಾಗಿರುವ ನಷ್ಟ ಇದು.

ಇದೆಲ್ಲದರಿಂದ ಟಿವಿ9ಗೆ ತಕ್ಷಣದಲ್ಲಿ ಅಪಾಯ ಬಾರದಿರಬಹುದು. ಕರ್ನಾಟಕದಲ್ಲಂತೂ ಟಿವಿ9

...ಟಿ ಷೇರು.... ಹುಶಾರು... ಹುಶಾರು

...ಸತ್ಯಂ ಕಂಪ್ಯೂಟರ್ಸ್‌ನ ಸುಮಾರು 67 ಕೋಟಿ ...ಗಳು ಮಾರ್ಕೆಟ್‌ನಲ್ಲಿತ್ತು. ಕಳೆದ ವರ್ಷ ಇದೇ ...ನಲ್ಲಿ ಸತ್ಯಂ ಷೇರಿನ ಬೆಲೆ 544 ರೂಪಾಯಿ ...ದ್ದು ಈಗ ಹನ್ನೊಂದು ರೂಪಾಯಿಗೆ ಬಂದು ಬಿದ್ದಿದೆ. ...ರಿ 5 ನೇ ತಾರೀಖು ಸತ್ಯಂನ ಮಾಲೀಕ ರಾಜು ವಂಚನೆಯ ಬಗ್ಗೆ ಹೇಳಿಕೊಂಡಾಗ 179 ರೂ. ಷೇರು ಬೆಲೆ ಏಕಾಏಕಿ 39ಕ್ಕೆ ಇಳಿಯಿತು. ಒಂದೇ ...ದಲ್ಲಿ ಭಾರತದ ಸಾಮಾನ್ಯ ಪ್ರಜೆ 9736 ಕೋಟಿ ...ಕಳೆದುಕೊಂಡಿದ್ದ. ಇದಕ್ಕಿಂತ ದುರಂತ ಆದರೆ ಯಾರೂ ...ಮಾಡದೇ ಇರುವ ವಿಚಾರ ಏನೆಂದರೆ ಸರ್ಕಾರಿ ...ದ ಹಾಗೂ ಸಾರ್ವಜನಿಕ ಕ್ಷೇತ್ರದ ಅನೇಕ ...ಕು ಹಾಗೂ ಹಣಕಾಸು ಸಂಸ್ಥೆಗಳೂ ಸತ್ಯಂ ಮೇಲೆ ...ದಾರು ಕೋಟಿ ರೂ. ಹೂಡಿದ್ದವು. ಎಚ್‌ಡಿಎಫ್‌ಸಿ ...ಕ್ 1 ಕೋಟಿ ಷೇರು, ಎಲ್‌ಐಸಿ 25 ಲಕ್ಷ ಷೇರು, ...ಸಿಐ 52 ಲಕ್ಷ, ಬಿರ್ಲಾಗಳದ್ದು 22 ಲಕ್ಷ, ...ಎಸ್‌ಬಿಸಿಯವರ 8 ಲಕ್ಷ ಷೇರುಗಳು ಸತ್ಯಂನಲ್ಲಿದ್ದವು. ...ಧಿ ಮಾಡಿದಾಗ ಒಂದು ಷೇರಿಗೆ ಸರಾಸರಿ 300 ...ಇತ್ತು ಎಂದಿಟ್ಟುಕೊಂಡರೂ ಈ 8 ಲಕ್ಷ, 10, ...30 ಲಕ್ಷ ಷೇರುಗಳಿಗೆ ಈ ಮ್ಯೂಚುವಲ್ ಫಂಡ್‌...ಗಳು ಹಾಕಿರುವ ದುಡ್ಡು ಎಷ್ಟು ಸಾವಿರ ...ಟಿಯಾಗಿರಬೇಕು ಯೋಚಿಸಿ ನೋಡಿ.

ಇದೆಲ್ಲ ಯಾರಪ್ಪನ ಮನೆಯ ದುಡ್ಡೂ ಅಲ್ಲ, ಜನಸಾಮಾನ್ಯರು ಈ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿದ್ದ ಹಣ. ಅದೇ ಹಣವನ್ನು ನಮ್ಮ Market Expert ಗಳು ತಗೊಂಡು ಹೋಗಿ ಸತ್ಯಂನ ರಾಜು ಜೇಬಿಗೆ ತುಂಬಿಸಿ ಈಗ ಬರಿಗೈಯಾಗಿದ್ದಾರೆ.

ಅಲ್ಲಿ ಲಾಭ ಬಂದಿದ್ದರೆ ಮಾತ್ರ ಜನಸಾಮಾನ್ಯರ ಹೂಡಿಕೆಗೂ ಕೊಂಚ ಡೆವಿಡೆಂಟ್ ರೂಪದ ಲಾಭ ಸಿಗುತ್ತಿತ್ತು, ಈಗ ಅದೆಲ್ಲಾ ಗುಳುಂ ಆಗಿ ಹೋಗಿದೆ.

ಈ ಅನುಭವದಿಂದ ಜನ ಈಗಲಾದರೂ ಪಾಠ ಕಲಿಯಬೇಕಿದೆ. ಸತ್ಯಂ ಒಂದೇ ಅಲ್ಲ ಐಟಿ ಬಿಟಿ ಕಂಪನಿಗಳ ಷೇರುಗಳ ಬಗ್ಗೆ ಈಗಲೇ ಎಚ್ಚರ ವಹಿಸಿದರೆ ಒಳ್ಳೆಯದು.




ಯಾಕೆಂದರೆ ಅಮೆರಿಕ-ಯುರೋಪ್‌ಗಳೇ ಇವರ ಪ್ರಮುಖ ಗಿರಾಕಿಗಳು. ಆದರೆ ಜಾಗತಿಕ ಆರ್ಥಿಕ ಕುಸಿತದಿಂದ ಐಟಿ ಕಂಪನಿಗಳಿಗೆ ಈಗ ಮೊದಲಿನಂತೆ ವ್ಯಾಪಾರ ಗಿಟ್ಟುತ್ತಿಲ್ಲ ಹಾಗೂ ಅವರ ಲಾಭವೂ ಇನ್ನು ಮುಂದೆ ಕುಸಿಯಲಿದೆ.

ತೀರಾ ಮೊನ್ನೆ ತಮಿಳುನಾಡಿನಲ್ಲಿ ಪ್ರವಾಸಿ ದಿವಸ ಸಮಾರಂಭದಲ್ಲಿ ಮಾತನಾಡಿರುವ ಮಂತ್ರಿ ಆರ್ಕಾಟ್ ವೀರಸ್ವಾಮಿ ಐಟಿಯಲ್ಲಿ ಹಣ ಹಾಕಬೇಡಿ ಅಂತ ಬಹಿರಂಗ ಹೇಳಿಕೆ ಕೊಟ್ಟದ್ದಾನೆ. 'ಯಾಕೆ ಸ್ವಾಮಿ ಹಾಗಂತೀರಾ?' ಅಂತ ಪತ್ರಕರ್ತರು ಕೇಳಿದ್ದಕ್ಕೆ ಚೆನ್ನೈನ ರಾಜೀವ್‌ಗಾಂಧಿ ಸಲೈ ಏರಿಯಾದ (ಹಳೇ ಮಹಾಬಲೀಪುರಂ ರಸ್ತೆ) ಲ್ಲಿದ್ದ ಐಟಿ ಕಂಪನಿಗಳಲ್ಲಿ 50% ಈಗಾಗಲೇ ಬಾಗಿಲು ಹಾಕಿವೆ ಅದಕ್ಕೆ ಅಂದನಂತೆ. ಅದೇ ರೀತಿ ಗಲ್ಫ್‌ನಲ್ಲಿದ್ದ ಸಾವಿರಾರು ಮಲೆಯಾಳಿ ಐಟಿ ನೌಕರರು ಈಗ ಕೆಲಸವಿಲ್ಲದೆ ಕೇರಳಕ್ಕೆ ವಾಪಸ್ ಬರುತ್ತಿದ್ದಾರೆ. ಈಗ ಸತ್ಯಂನ 50 ಸಾವಿರ ಜನ ಬೀದಿಗೆ ಬೀಳುತ್ತಿದ್ದಾರೆ. ಬೆಂಗಳೂರಿನ ಐಟಿ-ಬಿಟಿ ಗಳಲ್ಲಿ Pink Slip ಗಳು ಭರದಿಂದ ಖರ್ಚಾಗುತ್ತಿವೆ.

ಯಾವುದಕ್ಕೂ ಐಟಿ-ಬಿಟಿ ಷೇರಿನಲ್ಲಿ ಹಣ ಹಾಕುವ ಮುನ್ನ ಲಾಭ ಭಾರೀ ಲಾಭ ಅಂತಾ ಸುಮ್‌ಸುಮ್ನೆ ಓಳು ಬಿಡುವವರ ಬಗ್ಗೆ ಹುಶಾರು.. ಹುಶಾರು.

▶

...ಆಶ್ಚರ್ಯ ಅಂದರೆ ಇಷ್ಟೆಲ್ಲಾ ಸಾವಿರಾರು ...ಟಿ ಲಾಭ ಮಾಡುತ್ತಿದ್ದ ಸತ್ಯಂ ಮಾಲೀಕರ ...ಕುಟುಂಬದವರು ಸತ್ಯಂನಲ್ಲಿ ಕೇವಲ 8.64%



ಮಾತ್ರ ಉಳಿಸಿಕೊಂಡಿದ್ದರು. ಅಂದರೆ ...ಲ್ಲಾ ನಾಳೆ ಸತ್ಯಂ ಕಂಪನಿಯನ್ನು ...ಗಿಸುವ ತಯಾರಿ ಮಾಡಿಕೊಂಡೇ ಅವರ ...ದ್ದ ಕೋಟಿಗಟ್ಟಲೆ ಷೇರುಗಳನ್ನು ಭಾರಿ ...ಕ್ಕೆ ಜನರಿಗೆ ಮಾರಿ ಟೋಪಿ ಹಾಕುತ್ತಾ ...ದ್ದರು. ಇವರ ವಂಚನೆ ಯಾವ ...ಕ್ಕಿತ್ತೆಂದರೆ ಈಗ್ಗೆ ಆರು ತಿಂಗಳ ಹಿಂದೆ ...ನಿಯ ಲೆಕ್ಕಾಧಿಕಾರಿ ಪದಲಮಣಿ ಶ್ರೀನಿವಾಸ ...ದ್ದ 90 ಸಾವಿರ ಶೇರುಗಳನ್ನು ಊರಿಗೆ ...ವಲೇ ಮಾರಿ ತನ್ನ ಚರ್ಮ ಉಳಿಸಿಕೊಂಡಿದ್ದ. ಅಂದರೆ ಸತ್ಯಂ ಒಂದು ಮುಳುಗುವ ...ಗೆಂಬುದು ಇವರಿಗೆಲ್ಲಾ ಮೊದಲೇ ಗೊತ್ತಿತ್ತು? ...ಸ್ತುತಃ ಮಾಲೀಕ ರಾಮಲಿಂಗರಾಜು ತನ್ನ ...ನ ಷೇರುಗಳನ್ನು 1200 ಕೋಟಿ

ರೂಪಾಯಿಗಳಿಗೆ ಮಾರಿ ಅಷ್ಟೂ ಹಣದಲ್ಲಿ ಲ್ಯಾಂಡ್ ಖರೀದಿಸಿದ್ದಾನೆ. ಸತ್ಯಂ ನಿಜವಾಗಲೂ ಗಳಿಸಿದ್ದ ಲಾಭವನ್ನು ತರಾತುರಿಯಲ್ಲಿ ತನ್ನ ಮಕ್ಕಳ ಮಾಲೀಕತ್ವದ ಮೇತಾಸ್ ಕಂಪನಿಗೆ ಅಕ್ರಮವಾಗಿ ದಾಟಿಸಿಬಿಡುವುದು ರಾಜೂನ ಪಿತೂರಿಯ ಎರಡನೇ ಆಯಾಮವಾಗಿತ್ತೆಂದು ಕಾಣುತ್ತದೆ.

ಅವೆರಡು ಕೆಲಸ ಮುಗಿದೇಟಿಗೆ ಈಗ ರಾಜು 'ಸತ್ಯಂ ಲಾಸ್‌ನಲ್ಲಿದೆ' ಎಂಬ ಬಾಂಬ್ ಹಾಕಿದ್ದಾನೆ. ಬ್ಯಾಂಕ್‌ನಲ್ಲಿದೆ ಎನ್ನಲಾಗಿದ್ದ 5 ಸಾವಿರ ಕೋಟಿ ಇಲ್ಲ ಎನ್ನುತ್ತಿದ್ದಾನೆ. ಬ್ಯಾಂಕ್ ಬಡ್ಡಿಯಿಂದ ಬಂದ 387 ಕೋಟಿಯೂ ಇಲ್ಲಾ ಎಂದಿದ್ದಾನೆ. ಡಿಪಾಸಿಟ್ಟೇ ಇರದಿರುವಾಗ ಇನ್ನು ಬಡ್ಡಿ ಎಲ್ಲಿಂದ ಮರಿ ಹಾಕಬೇಕು ಹೇಳಿ? ಇಂತದ್ದೇ ತಪ್ಪು ಲೆಕ್ಕ, ಸುಳ್ಳು ದಾಖಲೆಗಳ ಒಟ್ಟು ಮೊತ್ತ ಏಳು ಸಾವಿರ ಕೋಟಿಗೆ ಹೋಗಿ ತಲುಪಿದೆ.

ಸತ್ಯಂ ಲೆಕ್ಕದಲ್ಲಿ ಇರಬೇಕಾಗಿದ್ದ ಹಣ ಅದು. ಆದರೆ ಈಗ ಇಲ್ಲ!

ರಾಜು ಕಂಪನಿಯ ಇಷ್ಟು ದುಡ್ಡನ್ನು ಕಳವು ಮಾಡಿದ್ದಾನೆ ಎಂದು ತನಿಖಾ ಸಂಸ್ಥೆಗಳು ಅನುಮಾನಪಡುತ್ತಿದ್ದರೆ ಈ ರಾಜು ಮಾತ್ರ ಆ ಹಣ ಬರೀ ಕಾಗದದ ಮೇಲಿದ್ದ ಲೆಕ್ಕ ಅಷ್ಟೆ. ಈಗ ಆ ಕಾಗದ ಕಸದಬುಟ್ಟಿಗೆ ಬಿಸಾಕಿ ಅಂತ ಕೂಲಾಗಿ ಹೇಳಿಬಿಟ್ಟಿದ್ದಾನೆ. ಈಗ ತನಿಖಾ ಸಂಸ್ಥೆಗಳ ಕೆಲಸ ಏನೆಂದರೆ "ಆ ಹಣ ನಿಜವಾಗಲೂ ಇತ್ತಾ, ಇದ್ದರೆ ಎಲ್ಲಿ ಹೋಯಿತೆಂದು ಪತ್ತೆಹಚ್ಚುವುದು ಅಥವಾ ರಾಜು ಸುಳ್ಳು ಲೆಕ್ಕ ಯಾಕೆ ಕೊಟ್ಟ ಎಂದು ತನಿಖೆ ಮಾಡುವುದೇ" ಆಗಿದೆ.



ಇವೆರಡರಲ್ಲಿ ಯಾವುದು ಸಾಬೀತಾದರೂ ರಾಜು ಜೈಲು ಪಾಲಾಗುವುದಂತೂ ಗ್ಯಾರಂಟಿ. ಆದರೆ ಇದು ಇಂಡಿಯಾ ದೇಶ ಆಗಿರುವುದರಿಂದ ಇನ್ನೊಂದೇ ವಾರದಲ್ಲಿ ರಾಜು ಜೈಲಿನಿಂದ ಹೊರಬಂದು ಇನ್ನು ಹತ್ತು ವರ್ಷಗಳಲ್ಲಿ ಆರೋಪ ಮುಕ್ತನಾದರೂ ಆಶ್ಚರ್ಯವಿಲ್ಲ ಬಿಡಿ.

ಮಣಿಪಾಲ ಪೈಗಳು ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಹೆಸರಲ್ಲಿ ನೂರಾರು ಕೋಟಿ ಉಡಾಯಿಸಿ ಈಗಲೂ ಅರಾಮಾಗಿ ಓಡಾಡಿಕೊಂಡಿಲ್ಲವೆ? ಹಾಗೆ ಸತ್ಯಂನಲ್ಲಿ ಮಾಲೀಕ ರಾಜುನ ಶೇರುಗಳು ಕಡಿಮೆ ಇದ್ದರೂ ಕಂಪನಿಯ ಕೀ ಪೋಸ್ಟ್‌ಗಳಲ್ಲಿ ಅವನ

ಕುಟುಂಬದವರೇ ಇದ್ದರು. ರಾಮಲಿಂಗ ರಾಜು ಚೇರ್ಮನ್, ತಮ್ಮ ರಾಮ ರಾಜು ಎಂಡಿ, ನೆಂಟ ಚಿಂತಾಶ್ರೀ ರಾಜುಗೊಂದು ಉನ್ನತ ಹುದ್ದೆ. ಶ್ರೀನಿ ರಾಜು ಎಕ್ಸಿಕ್ಯುಟೀವ್ ಡೈರೆಕ್ಟರ್... ಹೀಗೆ ಸತ್ಯಂನಲ್ಲಿ ಎಲ್ಲಿ ನೋಡಿದರೂ ಬರೀ ರಾಜಾಡಳಿತ ಇತ್ತು.

ಈ ರಾಜುಗಳಿಗಿರುವ ಇನ್ನೊಂದು ಚಾಳಿ ಏನೆಂದರೆ ಹೊಸ ಹೊಸ ಕಂಪನಿಗಳನ್ನು ಹುಟ್ಟುಹಾಕಿ ಬೆಳೆಸಿ ಆಮೇಲೆ ಮಾರಿಬಿಡುವುದು. ಈ ಹಿಂದೆ ಅವರ ಕುಟುಂಬ Satyam Infoways, Satyam Constructions, Satyam Enterprises ಕಂಪನಿಗಳನ್ನು ತೇಲಿಬಿಟ್ಟು ಮಾರಿಕೊಂಡಿದ್ದರು. ಈಗ ಸತ್ಯಂ ಕಂಪ್ಯೂಟರ್ಸ್ ಅನ್ನು ಮಾರದಿದ್ದರೂ ತಮ್ಮೆಲ್ಲಾ ಷೇರುಗಳನ್ನು ಮಾರಿಕೊಂಡು ಕಂಪನಿಯಲ್ಲಿದ್ದ ಸಾವಿರಾರು ಕೋಟಿ ಹಣವನ್ನು ಕದ್ದು ನಂಬಿದವರಿಗೆ ಕೈಕೊಟ್ಟಿದ್ದಾರೆ. ಇವರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಇದಿಷ್ಟೇ ಅಲ್ಲ; ಸತ್ಯಂ ಬಿಪಿಓ, ಸಿಟಿಸಾಫ್ಟ್, ಎಸ್‌ಎಟಿ, ಬ್ರಿಡ್ಜ್ ಕನ್‌ಸಲ್‌ಟೆಂಟ್ಸ್, ಸಿ.ಎ. ಸತ್ಯಂ ಎಂಬ ಬೇರೆ ಅಂಗಡಿಗಳು ಇವೆ. ನಷ್ಟದಲ್ಲಿರುವ ಇವನ್ನೆಲ್ಲಾ ಯಾರಿಗಾದರೂ ಮಾರಿ ಟೋಪಿ ಹಾಕುವ ಮೊದಲೇ ಸತ್ಯಂ ಹಗರಣ ಹೊರಬಿದ್ದಿದೆ.

ಕಂಪನಿಯೊಳಗೊಂದು ಕಂಪನಿ, ಅದನ್ನೊಂದು ಕಂಪನಿ, ಹೀಗೆ ಕಂಪನಿ ಸಾಮ್ರಾಜ್ಯ ಕಟ್ಟಿಕೊಂಡಿದ್ದ ರಾಜುಗಳು ಈಗ ತಮ್ಮೆಲ್ಲಾ ಹಣ, ಗಮನ ಹರಿಸಿರುವುದು ಮೇತಾಸ್ ಕನ್‌ಸ್ಟ್ರಕ್ಷನ್ ಹಾಗೂ ಮೇತಾಸ್ ಇನ್‌ಫ್ರಾ ಎಂಬ ಕಂಪನಿಗಳ ಬಗ್ಗೆ ಮಾತ್ರ. ರಾಜುನ ಮಕ್ಕಳಾದ ತೇಜು ರಾಜು ಹಾಗೂ ರಾಮ ರಾಜು ಮಾಲೀಕತ್ವದ ನಿರ್ಮಾಣ ಕಂಪನಿಗಳಿವು. ಸತ್ಯಂ ಕಂಪ್ಯೂಟರ್ಸ್ ಶುರುವಾದಾಗಲೇ ಇವು ಅಸ್ತಿತ್ವಕ್ಕೆ ಬಂದಿದ್ದವು. ಈಗ ಹೈದರಾಬಾದ್ ಮೆಟ್ರೋ ರೈಲಿನ 12 ಸಾವಿರ ಕೋಟಿಯ ಯೋಜನೆ, ಮಚಲಿಪಟ್ಟಣಂ 1200 ಕೋಟಿ ಬಂದರು ಕಾಮಗಾರಿ ಹೈದರಾಬಾದಿಗೆ ಗೋದಾವರಿ ನೀರು ತರುವ 170 ಕೋಟಿ ರೂ. ಗುತ್ತಿಗೆ... ಹೀಗೆ ಆಂಧ್ರದ ದೊಡ್ಡ ಕಾಂಟ್ರಾಕ್ಟ್‌ಗಳನ್ನೆಲ್ಲಾ ಮೇತಾಸ್

▶▶▶12

...ದು ಜನಪ್ರಿಯ ನ್ಯೂಸ್ ಚಾನೆಲ್ ಆಗಿ ಹೆಸರು ...ದೆ. ಜಾಹಿರಾತು ಆದಾಯವೂ ಓಕೆ ...ಸುವಷ್ಟಿದೆ.

...ಲವು ಬಾಲಿಶ ಅನ್ನಿಸುವ ತರಲೆ ಸುದ್ದಿಗಳು, ...ನ ಪೋಲಿಯೋ ಡ್ರಾಪ್ಸ್‌ನಿಂದ ಮಕ್ಕಳು ...ಬ ಸುಳ್ಳು ಬೇಜವಾಬ್ದಾರಿ ವರದಿಗಳನ್ನು ...ಶಿ ರಾಘವೇಂದ್ರನೆಂಬ ಅವಿವೇಕಿಯ ಹಾರಾಟ ...ತುಪಡಿಸಿದರೆ ಟಿವಿ9 ಒಂದು ಸಹನೀಯ ...ನ್ನೇ ಆಗಿದೆ. ಆದರೆ ಸಾಮಾನ್ಯ ಜನ ಇವತ್ತು ... ಸೂಕ್ಷ್ಮವಾಗಿ ಪ್ರತಿಯೊಂದನ್ನೂ ಗಮನಿಸುತ್ತಾರೆ ...?

...ಸತ್ಯಂ ವಂಚನೆ ಬಗ್ಗೆ ಟಿವಿ9 ಹೆಚ್ಚು ಪ್ರಸಾರ ...ಕಲಿಲ್ಲ ಯಾಕೆ ಎಂದು ಕೇಳುತ್ತಿದ್ದಾರೆ.

...ಸತ್ಯಂ ವಂಚಕ ರಾಜು ಹಾಗೂ ಟಿವಿ9 ...ಲೀಕ ಶ್ರೀನಿ ರಾಜು ನೆಂಟರು ಹಾಗೂ ...ನೆಸ್ ಪಾರ್ಟನರ್ಸ್ ಎಂಬ ಕಾರಣಕ್ಕೆ ಎಂತಲೂ ...ಮಾನ ಪಡುತ್ತಿದ್ದಾರೆ.

...ಸತ್ಯಂ ವಂಚನೆಯ ಬಗ್ಗೆ ಅತೀ ಕಡಿಮೆ ಸುದ್ದಿ ...ದ್ದು ಟಿವಿ9 ನಲ್ಲಿ ಮಾತ್ರ ಎಂಬುದನ್ನು ...ಕೆ ನೀವೂ ಗಮನಿಸಿರುತ್ತೀರಿ ಬಿಡಿ.

ರಾಮಲಿಂಗರಾಜುನ ಜನ್ಮ ಜಾಲಾಡಿದಾಗ



ತೇಜರಾಜು ಮತ್ತು ರಾಮರಾಜು

ಇವತ್ತು ಹೈದರಾಬಾದ್‌ನ ಚಂಚಲಗುಡಾ ಜೈಲಿನಲ್ಲಿ ಮುದ್ದೆ ಮುರಿಯುತ್ತಾ ಕುಳಿತಿರುವ ರಾಮಲಿಂಗರಾಜು ಹುಟ್ಟುತ್ತಲೇ ಶ್ರೀಮಂತನಾಗೇನು ಹುಟ್ಟಲಿಲ್ಲ. ಈಗ ಐವತ್ತೈದು ವಯಸ್ಸಿನ ರಾಜು ವಿಜಯವಾಡದ ಭೀಮಾವರಂನಲ್ಲಿದ್ದ ಸತ್ಯನಾರಾಯಣ ಎಂಬ ಸಾಮಾನ್ಯ ರೈತನ ಮಗ. ಒಂದು ಬಿ.ಕಾಂ. ಪದವಿ. ಆಮೇಲೆ ಅಮೆರಿಕಕ್ಕೆ ಹೋಗಿ ಎಂಬಿಎ ಓದಿಕೊಂಡು ಬಂದ ರಾಜುಗೆ ಕಂಪ್ಯೂಟರ್‌ನ ತಲೆಬುಡ ಗೊತ್ತಿರಲಿಲ್ಲ, ಅಸಲಿಗೆ ಅವನು ವ್ಯಾಪಾರ ಅಂತ 1978ರಲ್ಲಿ ಮೊದಲು ಶುರುಮಡಿದ್ದೇ ಶ್ರೀ ಸತ್ಯಂ ಎನ್ನುವ ಒಂದು ಆರ್ಡಿನರಿ ಸ್ಪಿನ್ನಿಂಗ್ ಮಿಲ್ ಅನ್ನು. ಈ ಸತ್ಯಂ ಅನ್ನೋದು ಅವರಪ್ಪನ ಹೆಸರು. ಈ ವಂಚಕ ಅಲ್ಲಿಂದಾಚೆಗೆ ತನ್ನ ಎಲ್ಲಾ ದಂಧೆಗಳಿಗೂ ಒಂದೋ Satyam ಎಂದು ಹೆಸರಿಡುತ್ತಿದ್ದ ಇಲ್ಲಾ Satyam Meytas (Satyamನ ಉಲ್ಟಾ) ಹೆಸರಿಡುತ್ತಿದ್ದ. ಸ್ಪಿನ್ನಿಂಗ್ ಮಿಲ್ ವ್ಯವಹಾರ ಗೆಟಪ್ ಆಗದಿದ್ದಾಗ ಸತ್ಯಂ ಕನ್‌ಸ್ಟ್ರಕ್ಷನ್ ಕಂಪನಿ ಚಾಲೂ ಮಾಡಿ ಹೈದರಾಬಾದಿಗೆ ಬಂದಿಳಿದ. ಆಮೇಲೆ ಅದೇನು ವಾಸನೆ ಹಿಡಿದನೋ 1987ರಲ್ಲೇ ಸತ್ಯಂ ಕಂಪ್ಯೂಟರ್ಸ್ ಎಂಬ ಬೋರ್ಡ್ ನೇತು ಹಾಕಿಕೊಂಡು ಕುಳಿತುಬಿಟ್ಟ. ಯಾವುದಕ್ಕೂ ಇರಲಿ ಅಂತಂದುಕೊಂಡು 1988 ರಲ್ಲೇ ಮೇತಾಸ್ ಕನ್‌ಸ್ಟ್ರಕ್ಷನ್ ಅಂಡ್ ಪ್ರಾಪರ್ಟಿಸ್ ಅನ್ನೂ ಚಾಲೂ ಮಾಡಿಬಿಟ್ಟ.

ಈ ರಾಮಲಿಂಗರಾಜು ಎಂತಹ ಕಿಲಾಡಿಯೆಂದರೆ ಸ್ವತಃ ಕಂಪ್ಯೂಟರ್ ತಜ್ಞನಲ್ಲದಿದ್ದರೂ 1981ರಲ್ಲಿ ಶುರುವಾಗಿದ್ದ ಇನ್ಫೋಸಿಸ್, 1979ರಲ್ಲಿ ಐಟಿಗೆ ಕಾಲಿಟ್ಟ ವಿಪ್ರೋ ಕಂಪನಿಗಳ ಬೆಳವಣಿಗೆ ಗಮನಿಸಿ ತಾನೂ ಸತ್ಯಂ ಕಂಪ್ಯೂಟರ್ಸ್ ಕಂಪೆನಿ ಶುರುಮಾಡಿದ್ದ. ವೆಜಿಟೆಬಲ್ ಆಯಿಲ್, ಬಟ್ಟೆ ಸೋಪು ಮಾರುತ್ತಿದ್ದ ಅಜೀಂ ಪ್ರೇಮ್‌ಜಿ ಐಟಿ ಕಂಪೆನಿ ಮಾಡಿರುವಾಗ ತಾನೂ ಏಕೆ ಒಂದು ಕೈನೋಡಬಾರದೆಂಬ ಭಂಡ ಧೈರ್ಯ ರಾಜುಗಿತ್ತೇನೋ! ಅದೇರೀತಿ ದಿನಕಳೆದಂತೆ ಸತ್ಯಂ ವ್ಯವಹಾರ ಬೆಳೆದೂ ಬೆಳೆದು ರಾಜು ಕೂಡಾ ಫೇಮಸ್ ಆದ. ಆದರೆ ಸತ್ಯಂನ ಲಾಭವನ್ನೆಲ್ಲಾ ಕದ್ದು ತನ್ನ ಮಕ್ಕಳ ಮಾಲೀಕತ್ವದ ಮೇತಾಸ್ ಗ್ರೂಪಿಗೆ ದಾಟಿಸಿ ಈಗ ಸಿಕ್ಕಿಬಿದ್ದಿದ್ದಾನೆ. ಜುಜುಬಿ ನೂರಿನ್ನೂರು ಕೋಟಿ ರೂಪಾಯಿಗಳ ಲಾಭಕ್ಕಾಗಿ ಜೀವಮಾನ ಪೂರ್ತಿ ಕಾಯುತ್ತಾ ಕೂತಿರುವ ಬದಲಾಗಿ ಒಂದೇ ಸಾರಿಗೆ ಹತ್ತಾರು ಸಾವಿರ ಕೋಟಿರೂಪಾಯಿ ಲಪಟಾಯಿಸಿ ಆಮೇಲೆ ಆರಾಮಾಗಿದ್ದು ಬಿಡಬಹುದೆಂದುಕೊಂಡಿದ್ದನೇನೋ..

ಆ ಮೆಗಾ ವಂಚನೆಯ ಕನಸು ಈಗ ಕೈಕೊಟ್ಟಿದೆ. ಕೋಟ್ಯಾಧೀಶ ರಾಮಲಿಂಗರಾಜು ಅರಮನೆಯಂಥ ಮನೆಯಲ್ಲಿದ್ದವನು, ಮರ್ಸಿಡೀಸ್ ಬೆಂಜ್ ಕಾರಿನಲ್ಲಿ ಓಡಾಡಿಕೊಂಡಿದ್ದವನು ಇವತ್ತು ಚಂಚಲಗುಡಾ ಜೈಲಿನಲ್ಲಿ ಒಬ್ಬ ವಿಚಾರಣಾಧೀನ ಕೈದಿಯಾಗಿ 40 ಜನ ಕಳ್ಳರು, ತಲೆಹಿಡುಕರು, ಪಿಕ್‌ಪಾಕೆಟರ್‌ಗಳ ಜೊತೆ ಒಂದೇ ಬ್ಯಾರಕ್‌ನಲ್ಲಿರಬೇಕಾಗಿ ಬಂದಿದೆ. ಜೈಲಿನ ಸಪ್ಪೆ ಊಟ ತಿನ್ನುತ್ತಾ ಬಾಗಿಲುಗಳಿರದ ಟಾಯ್ಲೆಟ್‌ನಲ್ಲಿ ಶೌಚಕಾರ್ಯ ಮುಗಿಸುತ್ತಾ ಬೀದಿನಾಯಿಗಿಂತ ಕಡೆಯಾಗಿ ಕಾಲ ಕಳೆಯುತ್ತಿದ್ದಾನೆ. ■




ದೇವೇಗೌಡರಿಗೆ ಕೊಕ್!

ಗೃಹ ಮಂಡಳಿ ಅಧ್ಯಕ್ಷರಾಗಿರುವ ಮಾಜಿ ಸಚಿವ ಜಿ.ಟಿ. ದೇವೇಗೌಡ ತಣ್ಣಗಾಗಿದ್ದಾರೆ. ಟುಟಪಿಟಕ್ ಅಂದರೆ ಶೋಭಕ್ಕ ಗೌಡರ ತಲೆಗೇ ಮೊಟಕುವುದರಿಂದ ಏನೂ ಮಾಡಲಾಗದ ಸ್ಥಿತಿಯಲ್ಲಿ ಅವರು ನರಳುತ್ತಿದ್ದಾರೆ. ದೇವೇಗೌಡ ಪಕ್ಷ ಸೇರಿರುವುದರಿಂದ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಲಾಭವಾಗಲಿದೆ ಎಂಬ ಬಿಜೆಪಿ ಲೆಕ್ಕಾಚಾರ ತಲೆಕೆಳಗಾಗಿತ್ತು. ಸ್ವತಃ ಗೌಡರೇ ಸೋತಿದ್ದರು. ಹೀಗಾಗಿ ಪಕ್ಷದಲ್ಲಿ ಅವರಿಗೆ ಈಗ ಮೂರುಕಾಸಿನ ಬೆಲೆ ಇಲ್ಲ. ನೆಪಮಾತ್ರಕ್ಕೆ ಗೃಹ ಮಂಡಳಿಯ ಅಧ್ಯಕ್ಷ ಸ್ಥಾನವಿದೆಯಾದರೂ, ಯಾವ ಕೆಲಸ ಮಾಡಿಸಲೂ ಸಾಧ್ಯವಾಗುತ್ತಿಲ್ಲ.

ಜಿಲ್ಲೆಯಲ್ಲಿ ಏನಾದರೂ ಕೆಲಸ ಮಾಡಿಸೋಣ ಎಂದರೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಶೋಭ ಎಲ್ಲದಕ್ಕೂ ಅಡ್ಡಗಾಲು ಹಾಕುತ್ತಿದ್ದಾರೆ. ಅಧಿಕಾರಿಗಳ ಎದುರೇ ಶೋಭಕ್ಕ ರೇಗುವುದು ಸಾಮಾನ್ಯವಾಗಿದ್ದು, ಈಕೆಯ ಸಹವಾಸವೇ ಬೇಡ ಎಂದು ಗೌಡರೀಗ ಸುಮ್ಮನಾಗಿದ್ದಾರಂತೆ. ಈಯಮ್ಮನ ಬಗ್ಗೆ ಯಾರಲ್ಲಿ ದೂರು ಹೇಳುವುದು ಎಂದು ಗೌಡರು ತಮ್ಮ ಆಪ್ತರಲ್ಲಿ ಹೇಳಿಕೊಂಡು ಓಡಾಡುತ್ತಿದ್ದಾರೆ.

ಇದರಿಂದ ಕುಪಿತಗೊಂಡಿರುವ ಶೋಭಕ್ಕ ಗೃಹಮಂಡಳಿಯಿಂದ ಗೌಡರನ್ನು ಓಡಿಸಲು ಉದ್ದೇಶಿಸಿದ್ದಾರೆನ್ನಲಾಗಿದೆ. ಒಂದು ವೇಳೆ ಶ್ರೀಕಂಠಯ್ಯ ಪಕ್ಷ ಸೇರಿದರೆ, ಗೃಹ ಮಂಡಳಿಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ, ದೇವೇಗೌಡರನ್ನು ಕಾರ್ಯಕ್ಕೆ ಬಾರದ ಯಾವುದಾದರೂ ಮಂಡಳಿಗೆ ದೂಡುವ ತಂತ್ರ ರೂಪಿಸಿದ್ದಾರೆಂಬ ಸುದ್ದಿ ಇದೆ. ಇದನ್ನೆಲ್ಲಾ ನೋಡಿದ ಮೈಸೂರಿನ ಜೆಡಿಎಸ್ ಕಾರ್ಯಕರ್ತರು ದೇವೇಗೌಡರ ಬಗ್ಗೆ ಮರುಕಪಡುತ್ತಿದ್ದಾರಂತೆ. ಶ್ರೀಕಂಠಯ್ಯಗೆ ಕೂಡ ಈ ಪರಿಸ್ಥಿತಿ ಬಾರದಿರಲಿ.



ಕಮಲ ಹಿಡಿದ ಶ್ರೀಕಂಠಯ್ಯ!

ಮಂಡ್ಯದ ಮಾದೇಗೌಡರು ಬಿಜೆಪಿಯನ್ನು ಬೆಂಬಲಿಸಿ, ಆ ಪಕ್ಷದ ಕಾರ್ಯಕರ್ತರಿಂದಲೇ ಗೂಸಾ ತಿಂದು ನೋವುನುಂಗುತ್ತಿದ್ದಾರೆ. ಇದೆಲ್ಲಾ ಆಗಿ ಇನ್ನೂ ಒಂದು ವಾರ ಕಳೆಯುವುದರೊಳಗೆ ಹಾಸನದ ಹಿರಿಯ ರಾಜಕಾರಣಿ ಶ್ರೀಕಂಠಯ್ಯ ಇದೇ ತಪ್ಪು ಮಾಡ ಹೊರಟಿದ್ದಾರೆ.

ಸಂಕ್ರಾಂತಿ ನಂತರ ಬಿಜೆಪಿ ಸೇರಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ಸ್ಪರ್ಧಿಸುವುದಾಗಿ ಪ್ರಕಟಿಸಿದ್ದಾರೆ. ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಿಜೆಪಿ ಅಧ್ಯಕ್ಷ ಸದಾನಂದ ಗೌಡರೊಂದಿಗೆ ಮಾತುಕತೆ ನಡೆಸಿದ್ದಾರೆ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುತ್ತೇವೆ ಮತ್ತು ಯಾವುದಾದರೂ ಒಂದು ಪ್ರಮುಖ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ನೀಡುತ್ತೇವೆ ಎಂಬ ಭರವಸೆ ನೀಡಿ ಈ ಹಿರಿಯ ನಾಯಕನನ್ನು ಬಿಜೆಪಿ ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಕಾಂಗ್ರೆಸ್ ತಮ್ಮನ್ನು ನಿರ್ಲಕ್ಷಿಸುತ್ತಿದೆ ಅದಕ್ಕೆ ಈ ತೀರ್ಮಾನ ತೆಗೆದುಕೊಂಡಿದ್ದೇನೆ ಎಂದು ಶ್ರೀಕಂಠಯ್ಯ ಹೇಳುತ್ತಿದ್ದಾರೆ. ಬಿಜೆಪಿ ಸೇರಿದ ಮಾತ್ರಕ್ಕೆ ಅವರಿಗೆ ಆ ಪಕ್ಷದಲ್ಲಿ ಯಾವ ರೀತಿಯ ಪ್ರಾಮುಖ್ಯತೆ ದೊರೆಯುತ್ತದೆಯೋ ಆ ರಾಮನೇ ಬಲ್ಲ.

ಈಗಾಗಲೇ ಹಾಸನ ಜಿಲ್ಲೆಯ ಶಿವಪ್ಪ ಬಿಜೆಪಿ ಸೇರಿ ಎಂತಹ ಪ್ರಾಮುಖ್ಯತೆ ಪಡೆದಿದ್ದಾರೆ ಎಂಬುದನ್ನಾದರೂ ಶ್ರೀಕಂಠಪ್ಪ ತೆರೆದ ಕಣ್ಣಿನಿಂದ ನೋಡಬೇಕಿತ್ತು.

ಅದೇನೇ ಇರಲಿ, ಇಂದಿರಾ ಗಾಂಧಿ ಕಾಲದಿಂದಲೂ ಕಾಂಗ್ರೆಸ್ ಪಕ್ಷದಲ್ಲಿದ್ದೇನೆ. ಪಕ್ಷದ ಶಿಸ್ತಿನ ಸಿಪಾಯಿಯಂತೆ ದುಡಿದಿದ್ದೇನೆ ಎನ್ನುವ ಶ್ರೀಕಂಠಪ್ಪ ಪಕ್ಷದ ಸಿದ್ಧಾಂತವನ್ನು ಅರ್ಥಮಾಡಿಕೊಂಡಿಲ್ಲವೇ? ಅರ್ಥ ಮಾಡಿಕೊಂಡಿದ್ದರೆ, ತಾವೇ ಪಕ್ಷದ ನಾಯಕರೊಂದಿಗೆ ಮಾತನಾಡಿ ಬಗೆಹರಿಸಿಕೊಳ್ಳಬಹುದಾಗಿದ್ದ ಕಾರಣಗಳನ್ನು ಮುಂದಿಟ್ಟುಕೊಂಡು ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾದ ಕೋಮುವಾದಿ ಬಿಜೆಪಿ ಸೇರಲು ಈ ಇಳಿವಯಸ್ಸಿನಲ್ಲಿ ನಿರ್ಧರಿಸಿರುವುದು ಯಾವ ಕಾರಣಕ್ಕಾಗಿ? ಅಧಿಕಾರದ ಆಸೆಗಾಗಿಯೇ? ಅವರೇ ಉತ್ತರಿಸಬೇಕು.

ಹಾಸನದಲ್ಲಿ ಪಕ್ಷಕ್ಕೆ ನೆಲೆ ಕಾಣಿಸಲು ಶ್ರೀಕಂಠಪ್ಪರನ್ನು ಬಿಜೆಪಿ ತನ್ನತ್ತ ಸೆಳೆಯುತ್ತಿದೆ. ಮಂಡ್ಯದಲ್ಲಿ ಮಾದೇಗೌಡರಂತೆ ಇಲ್ಲಿಯೂ ಶ್ರೀಕಂಠಪ್ಪ ಬಳಕೆಯಾಗಲಿದ್ದಾರೆ. ಕೊನೆಗೆ 'ಬಲಿ'ಯಾಗಲಿದ್ದಾರೆ. ಹೀಗಾಗಿ ಮಾದೇಗೌಡರನ್ನು ಒಂದು ಮಾತು ಕೇಳಿ ಶ್ರೀಕಂಠಪ್ಪ ಈ ನಿರ್ಧಾರ ಅಂತಿಮಗೊಳಿಸಿದರೆ ಒಳ್ಳೆಯದು.

ಕಾಂಗ್ರೆಸ್‌ನಲ್ಲಿ ತನ್ನ ಮಾತಿಗೆ ಮನ್ನಣೆ ಸಿಗುತ್ತಿಲ್ಲ, ಯಾವುದೇ ಕೆಲಸ ಆಗುತ್ತಿಲ್ಲ, ಟಿಕೆಟ್ ಮಾರಿಕೊಳ್ಳಲಾಗುತ್ತಿದೆ ಎಂದೆಲ್ಲಾ ದೂರುವ ಶ್ರೀಕಂಠಪ್ಪ ತಮ್ಮ ಹಿರಿತನದ ಜವಾಬ್ದಾರಿ ಮರೆತು ಕೋಮುವಾದಿಗಳ ಹಿಂದೆ ಹೋದರೆ, ಹಾಸನದ ಜನತೆ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ. ■



ಲಂಕೇಶ್ ಎಫೆಕ್ಟ್!

ಮೈಸೂರಿನ ಸುತ್ತೂರು ದೇಶೀಕೇಂದ್ರ ಸ್ವಾಮಿಗಳು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಮೋಸ ಮಾಡಿದ ಮಹಾವಂಚನೆಯ ಬಗ್ಗೆ ಅಕ್ಟೋಬರ್ 29ರ 'ಲಂಕೇಶ್' ಸಂಚಿಕೆಯಲ್ಲಿ ವರದಿ ಮಾಡಲಾಗಿತ್ತು. ಮೈಸೂರಿನ ಟಿ.ನರಸೀಪುರ ರಸ್ತೆಯ ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದ ಮತ್ತು ಹಾಲಿನ ಡೈರಿ ಮಧ್ಯದಲ್ಲಿ ಬರುವ ಜಾಗಕ್ಕೆ ಸಂಬಂಧಿಸಿದಂತೆ ಅವರು ಎಸಗಿದ ವಂಚನೆ ಮತ್ತು ಅಲ್ಲಿ ಪರವಾನಗಿ ಪಡೆಯದೇ ಅಕ್ರಮವಾಗಿ ನಡೆಸುತ್ತಿದ್ದ ಪೆಟ್ರೋಲ್ ಬಂಕ್ ಬಗ್ಗೆಯೂ ವಿವರವಾಗಿ ಬರೆಯಲಾಗಿತ್ತು. 'ಲಂಕೇಶ್' ವರದಿಯನ್ನು ಗಂಭೀರವಾಗಿ ತೆಗೆದುಕೊಂಡ ಮೈಸೂರು ಜಿಲ್ಲಾಧಿಕಾರಿ ಮಣಿವಣ್ಣನ್ ಕೊನೆಗೂ ಈ ಅಕ್ರಮ ಪೆಟ್ರೋಲ್ ಬಂಕ್ ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇದು ಮೈಸೂರಿನ ಜನರಿಗೂ ಮತ್ತು ವರದಿ ಮಾಡಿದ 'ಲಂಕೇಶ್'ಗೂ ಸಿಕ್ಕ ಜಯವಾಗಿದೆ.

ಪ್ರೈಸ್‌ವಾಟರ್-ಖದೀಮ ಆಡಿಟರ್ ಕಂಪ

ಲಂಡನ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ಪ್ರೈಸ್ ವಾಟರ್ ಹೌಸ್ ಕೂಪರ್ಸ್ ಎಂಬ ಆಡಿಟಿಂಗ್ ಕಂಪೆನಿ ಈಗಿನ ಸತ್ಯಂ ವಂಚನೆ ಹಗರಣದಲ್ಲಿ ಕೈಜೋಡಿಸಿದೆ. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ವಾರ್ಷಿಕ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಆಡಿಟಿಂಗ್ ಕಸುಬು ನಡೆಸುತ್ತಿರುವ ಪ್ರೈಸ್‌ವಾಟರ್‌ನ ಜನ ಪ್ರಾಮಾಣಿಕರಲ್ಲ. ಅವರಿಗೆ ಸ್ವಲ್ಪವಾದರೂ ವೃತ್ತಿಬದ್ಧತೆ, ಪ್ರಾಮಾಣಿಕತೆ ಇದ್ದಿದ್ದರೆ ಸತ್ಯಂ ಮಾಲೀಕ ರಾಜು ಈ ಮಟ್ಟದ ವಂಚನೆ ನಡೆಸದಂತೆ ತಡೆಯಬಹುದಿತ್ತು. ಈ ರಾಜು 'ಸತ್ಯಂ ಭಾರೀ ಲಾಭದಲ್ಲಿದೆ' ಎಂದಾಗ 'ಹೌದು' ಎಂದಿದ್ದ ಪ್ರೈಸ್‌ವಾಟರ್ ಸತ್ಯಂನ ಅಸಲೀ ಲೆಕ್ಕಪತ್ರ, ಅವ್ಯವಹಾರಗಳ ಆಳಕ್ಕಿಳಿಯಲ್ಲೇ ಇಲ್ಲ. ಹಣ ಎಲ್ಲಿಂದ ಬಂತು, ಆಮೇಲೆ ಎತ್ತಕಡೆ ಹರಿದು ಮಾಯವಾಯಿತೆಂಬ ಬಗ್ಗೆ ಒಂದು ಸಾರಿಯೂ ಪ್ರಶ್ನೆ ಕೇಳಲಿಲ್ಲ.

PRICEWATERHOUSECOOPERS

ಇದರರ್ಥ ಪ್ರೈಸ್‌ವಾಟರ್‌ನವರಿಗೆ ಆಡಿಟಿಂಗ್ ಕೆಲಸ ಗೊತ್ತಿರಲಿಲ್ಲ ಎಂದಲ್ಲ; ಬದಲಿಗೆ ಎಲ್ಲಾ ವಂಚನೆ ಗೊತ್ತಿದ್ದರೂ ಅವರು ರಾಜು ಬಯಸಿದಂತೆ ಅವನ ಸುಳ್ಳುಸುಳ್ಳೇ ಲೆಕ್ಕಗಳನ್ನೆಲ್ಲಾ 'ಸರಿ' ಅಂತ ಒಪ್ಪಿಕೊಂಡು ಕೋಟಿಗಟ್ಟಲೆ ಫೀಸ್ ಕಿತ್ತುಕೊಂಡು ಜಾಗ ಖಾಲಿ ಮಾಡಿದ್ದಾರೆ.

ಈ ಪ್ರೈಸ್‌ವಾಟರ್ ಅಂತಿಂಥ ಆಡಿಟಿಂಗ್ ಕಂಪನಿಯಲ್ಲ. ಒಂದೂವರೆ ಶತಮಾನದ ಹಿಂದೆ ಸಾಮುಯೆಲ್ ಲೇಮಲ್ ಪ್ರೈಸ್ ಎಂಬ ಮಾಮೂಲಿ ಅಕೌಂಟೆಂಟ್ ಒಬ್ಬ ಶುರುಮಾಡಿದ ಕಂಪೆನಿ ಇವತ್ತು ಒಂದೂವರೆ ಲಕ್ಷ ನೌಕರರನ್ನು ಹೊಂದಿದೆ. ತೆರಿಗೆ, ಲೆಕ್ಕಪತ್ರ ಪರಿಶೋಧನೆ, ಹಣಕಾಸು ಸಲಹೆ – ಇಂತದ್ದೇ ಹತ್ತಾರು ಕೆಲಸ ಮಾಡಿ ಕೊಡುತ್ತಾರೆ. ಫೋರ್ಡ್ ಮೋಟಾರ್ಸ್, ಎಕ್ಸಾನ್‌ಮೊಬಿಲ್, ಶೆಲ್‌ನಂತಹ ಸಮುದ್ರಗಾತ್ರದ ಕಂಪೆನಿಗಳಿಂದ ಹಿಡಿದು ಬ್ಯಾಂಕ್ ಆಫ್ ಅಮೆರಿಕ, ಬ್ಯಾಂಕ್ ಆಫ್ ಚೀನಾಗಳವರೆಗೂ ಲೆಕ್ಕಪತ್ರ ಪರಿಶೀಲಿಸಿ ಸರ್ಟಿಫಿಕೇಟ್ ಕೊಡುವುದು ಇದೇ ಪ್ರೈಸ್‌ವಾಟರ್ ಕಂಪೆನಿಯವರು. ಬರೀ ಅವರಿವರ ಲೆಕ್ಕಪತ್ರ ನೋಡಿಯೇ ಇವರು ವರ್ಷಕ್ಕೆ ಒಂದು ಲಕ್ಷ ಕೋಟಿ ರೂಪಾಯಿ ಸಂಪಾದಿಸುತ್ತಾರೆಂದರೆ ಇದಿನ್ನೆಂಥಾ ದೊಡ್ಡ ಗಾತ್ರದ ಆಡಿಟಿಂಗ್ ಕಂಪೆನಿ ಇರಬಹುದು ಊಹಿಸಿಕೊಳ್ಳಿ. ಆದರೆ ಇದಕ್ಕೆ ಇನ್ನೊಂದು ಕರಾಳ ಮುಖವೂ ಇದೆ. ಸತ್ಯಂ ಕಂಪ್ಯೂಟರ್ಸ್ ತನ್ನ ಲೆಕ್ಕಪತ್ರ ಪರಿಶೋಧನೆಗೆ ಪ್ರೈಸ್‌ವಾಟರ್‌ನವರನ್ನು ನೇಮಿಸಿಕೊಂಡಿದ್ದು ಅವರ ದಕ್ಷತೆ, ಖ್ಯಾತಿಗಾಗಿ ಅಲ್ಲ, ಬದ… ತನ್ನ ಚೀಟಿಂಗ್ ದಂಧೆಗೆ ನೆರವಾಗುತ್ತಾರೆಂದು!

ಅದು ಹೇಗೆಂದರೆ ಪ್ರೈಸ್‌ವಾಟರ್ ಹೌಸ್ ಕೂ… ಕಂಪನಿಗೆ ಅಂತಹ ವಂಚನೆ ಮಾಡುವ, ನಕಲಿ… ತೋರಿಸುವ ಮೂಲಕ ಕಂಪನಿಗಳಿಗೆ ನೆರವಾದ ಕು… ಆಗಲೇ ಇತ್ತು.

2007ರಲ್ಲಿ ವಿಶ್ವವಿಖ್ಯಾತ ಕಂಪ್ಯೂಟರ್ ತಯಾ… ಕಂಪನಿಯಾದ ಡೆಲ್‌ನ ಲೆಕ್ಕಪತ್ರ ಗೋಲ್‌ಮಾಲ್ ಪ… ಪ್ರೈಸ್‌ವಾಟರ್ ಸಿಕ್ಕಿ ಬಿದ್ದಿತ್ತು. ಅದೇ ವರ್ಷ ಟೈ… ಇಂಟರ್‌ನ್ಯಾಷನಲ್ ಎಂಬ ಕಂಪನಿಯ ನಕಲಿ ಲೆಕ್ಕಪತ್ರ… ಆಡಿಟ್ ಮಾಡಿ ಅವೆಲ್ಲಾ ಅಸಲಿ ಎಂದು ಸರ್ಟಿಫಿಕೇ… ನೀಡಿತ್ತು. ಕೊನೆಗದು ಎಂತಹ ದೊಡ್ಡ ರಾದ್ಧಾಂತವಾ… ತೆಂದರೆ ಟೈಕೋ ಕಂಪೆನಿಯ ಶೇರುದಾರರು ಪ್ರೈಸ್‌ವಾ… ಮೇಲೇ ವಂಚನೆಯ ಕೇಸು ಹಾಕಿ 1125 ಕೋ… ರೂಪಾಯಿ ಪರಿಹಾರ ಕಕ್ಕುವಂತೆ ಮಾಡಿದ್ದರು.

ಇಷ್ಟೇ ಅಲ್ಲ, ನಿಮಗೆ ಗ್ಲೋಬಲ್ ಟ್ರಸ್ಟ್ ಬ್ಯಾ… ದಿವಾಳಿ ಕತೆ ನೆನಪಿದೆಯಾ?

ಇದೇ ಹೈದರಾಬಾದ್‌ನಲ್ಲಿ ಕೇಂದ್ರ ಕಚೇರಿ ಹೊ… ಆ ಬ್ಯಾಂಕ್ ಸಾರ್ವಜನಿಕರಿಂದ ಸಾವಿರಾರು ಕೋ… ಸಂಗ್ರಹಿಸಿ ಒಂದುದಿನ ಏಕಾಏಕಿ ದಿವಾಳಿ ಘೋ… ಕೊಂಡಿತ್ತು. ಆ ಬ್ಯಾಂಕಿನ ಲೆಕ್ಕಪತ್ರ ಪರಿಶೀಲನೆ ಮ… ತ್ತಿದ್ದವರೂ ಇದೇ ಪ್ರೈಸ್‌ವಾಟರ್‌ನ ಜನ. ಆಗ ರಿಸ… ಬ್ಯಾಂಕ್ ಆಫ್ ಇಂಡಿಯಾ ಪ್ರೈಸ್‌ವಾಟರ್ ಮೇಲೆ ಒ… ವರ್ಷ ನಿಷೇಧ ಹೇರಿತ್ತು. ಕೇತನ್ ಮೆಹ್ತಾ ಷ… ಹಗರಣದಲ್ಲೂ ಪ್ರೈಸ್‌ವಾಟರ್‌ನವರ ಕೈವಾಡವಿತ್ತೆಂಬ… ತನಿಖೆಯಿಂದ ಬೆಳಕಿಗೆ ಬಂದಿತು. ದೆಹಲಿ ಜಲ ನಿಗ… ಆಡಿಟಿಂಗ್ ಗುತ್ತಿಗೆ ಗಿಟ್ಟಿಸಲು ಲಂಚ ನೀಡಿ … ಮಾಡಿದ್ದ ಪ್ರೈಸ್‌ವಾಟರ್‌ನವರು ಕುಡಿಯುವ ನೀ… ಖಾಸಗೀಕರಣ ಲಾಬಿಯಲ್ಲಿ ಕೈಗೂಡಿಸುತ್ತಾರೆ.

ಇದೆಲ್ಲದರಿಂದ ನಾವು ಅರ್ಥಮಾಡಿಕೊಳ್ಳಬೇಕಾ… ಇಷ್ಟೆ. ಷೇರು ವ್ಯವಹಾರ ಮಾಡುವಾಗ ಯಾವುದಾದ… ಕಂಪನಿಯ ಲೆಕ್ಕಪತ್ರವನ್ನು ಪ್ರೈಸ್‌ವಾಟರ್‌ನವರು ಮಾಡಿ… ಅದನ್ನು ನಂಬಕೂಡದು!

ಸತ್ಯಂ ಕಂಪ್ಯೂಟರ್ಸ್‌ನಲ್ಲಿ ಹಣ ಹಾಕಿ ನಷ್ಟ ಮ… ಕೊಂಡಿರುವ ಜನ ಬೇಕಿದ್ದರೆ ಪ್ರೈಸ್‌ವಾಟರ್ ಮೇ… ಕೇಸು ಹಾಕಬಹುದು.

▶▶▶11

ಗಿಟ್ಟಿಸಿಕೊಂಡಿದೆ. ಆದರೆ ಅವರ ಬಳಿ ಅಷ್ಟೊಂದು ಹಣ ಇದ್ದಂತಿಲ್ಲ, ಹಾಗಾಗಿ ಕೆಲಸಗಳೂ ಶುರುವಾಗಿಲ್ಲ. ಇಂಥ ತನ್ನ ಮಕ್ಕಳ ಕಂಪನಿಯನ್ನೇ ಸತ್ಯಂ 6400 ಕೋಟಿ ರೂ.ಗೆ ಖರೀದಿಸುವ ಡೀಲ್ ಒಂದನ್ನು ರಾಜು ಕುದುರಿಸಲು ಹೊರಟಿದ್ದ. ಆದರೆ ಸತ್ಯಂ ಷೇರುದಾರರು ನೋ ಅಂದಿದ್ದಕ್ಕೆ ಆ ಡೀಲು ರದ್ದಾಯಿತು. ಅದೇ ಸಮಯಕ್ಕೆ ವಿಶ್ವಬ್ಯಾಂಕಿನವರು ಸತ್ಯಂ ಜೊತೆಗಿನ ತನ್ನ ಕಾಂಟ್ರಾಕ್ಟ್ ರದ್ದುಗೊಳಿಸಿ ಲಂಚ, ಫೋರ್ಜರಿ, ಕಳವು ಆರೋಪ ಹೊರಿಸಿ ಸತ್ಯಂ ಮೇಲೆ ನಿಷೇಧ ವಿಧಿಸಿದ್ದು ದೊಡ್ಡ ಗುಲ್ಲಾಗಿ ಹೋಯಿತು. ಸತ್ಯಂ ಕಂಪನಿಯಲ್ಲಿ ನಾಪತ್ತೆಯಾಗಿದ್ದ ಏಳು ಸಾವಿರ ಕೋಟಿ ರೂ.ನ ಲೆಕ್ಕ ಸರಿದೂಗಿಸಲು ಈ ರಾಜು ಯಾವ ಪ್ಲಾನ್ ಮಾಡಿದ್ದನೆಂದರೆ ತನ್ನ ಮಕ್ಕಳದ್ದೇ ಮೇತಾಸ್ ಕಂಪನಿಯನ್ನು 6400 ಕೋಟಿಗೆ ಖರೀದಿಸಿದಂತೆ ಮಾಡಿ ಒಂದಿಷ್ಟು ಹಣ ನೀಡಿ ಉಳಿದಿದ್ದಕ್ಕೆ ಬರೀ ಪೇಪರ್ ಲೆಕ್ಕ ತೋರಿಸಿ ಎಲ್ಲಾ ತೇಪೆ ಹಾಕಿಬಿಡಬಹುದು ಎಂದು. ಹಾಗಾಗಿದ್ದಿದ್ದರೆ ಅದು ಒಂದು ಚೀಟಿಂಗ್‌ನಿಂದ ಇನ್ನೊಂದಕ್ಕೆ ನೆಗೆದಂತಾಗುತ್ತಿತ್ತೆ ವಿನಃ ಸಮಸ್ಯೆಯಂತೂ ಬಗೆಹರಿಯುತ್ತಿರಲಿಲ್ಲ.


ಪ್ರೈಸ್‌ವಾಟರ್ ಕಂಪನಿ ಕಟ್ಟಡ

ಸತ್ಯಂ ಕೇವಲ 3% ಲಾಭಂಶಕ್ಕೆ ಕೆಲಸ ಮಾಡುತ್ತಿತ್ತು ಎಂದು ರಾಜು ಹೇಳಿಕೊಂಡಿದ್ದಾ… ಬಹುಶಃ ಅದು ನಿಜವಿರಲಾರದು. ಸತ್ಯಂ ಸಾವಿರಾರು ಕೋಟಿ ಲಾಭ ಮಾಡಿರುವುದೇನೋ ನಿಜ, ಆದರೆ ಆ ಹಣ ರಾಜುನ, ಅವನ ಮಕ್ಕ… ಇನ್ನಿತರ ಕುಟುಂಬದ ಕಂಪನಿಗಳಿಗೆ ರಹಸ್ಯವಾ… ದಾಖಲಿಸಲ್ಪಟ್ಟಿದೆ.

ಭಾರತದ ಆರ್ಥಿಕತೆ… ಏಟಿನ ಮೇಲೆ ಏಟು ಬೀಳುತ್ತಿದೆ.

ಮೊದಲಿಗೆ ಜಾಗತಿಕ… ಆರ್ಥಿಕ ಬಿಕ್ಕಟ್ಟು ಬಂತು… ಆಮೇಲೆ ಮುಂಬೈ ಮೇ… ಉಗ್ರರ ದಾಳಿ. ಈಗ ಸ… ಮಿಥ್ಯಂ ಹಾವಳಿ.

ಕರ್ನಾಟಕದಲ್ಲೂ ರಾ… ಮಕ್ಕಳ ಮೇತಾಸ್‌ಗೆ ಕೆ… ದೊಡ್ಡ ನಿರ್ಮಾಣ ಗುತ್ತಿ… ಕೊಡಲಾಗಿದೆ. ಬೆಂಗಳೂರು–ಹೊಸೂರಿ… 19 ಕಿ.ಮೀ. ಫ್ಲೈ ಓವರ್… ಕಾಮಗಾರಿ, ಶಿವಮೊಗ್ಗ… ಬಳ್ಳಾರಿ ಏರ್‌ಪೋರ್ಟ್‌ನ… ಕೆಲಸ ಹೀಗೆ.....


ಮುಖ್ಯಮಂತ್ರಿ ಯಡಿಯೂರಪ್ಪ ಎಂಬ … ಲಂಚ ಕೊಟ್ಟರೆ ಯಾರಿಗೆ ಬೇಕಾದರೂ ಗುತ್ತಿ… ಕಾಮಗಾರಿ ಕೊಡುತ್ತಿದ್ದಾರಾದ್ದರಿಂದ ಈ ಮೇ… ಕಂಪನಿಯ ನಿಜ ಬಣ್ಣ ಏನು ಎಂಬ ಬಗ್ಗೆ ದ… ಅಧಿಕಾರಿಗಳ್ಯಾರಾದರೂ ನಿಗಾ ಇಟ್ಟು ಸರ್ಕಾರಿ… ಹಣ ಕೈಗೆ ಸಿಗದಂತೆ ಎಚ್ಚರಿಕೆವಹಿಸಬೇಕಿದೆ.



ಆಪರೇಷನ್ ಕಮಲವೂ, ಸಪರೇಷನ್ ಕಾಂಗ್ರೆಸೂ!

ಕೇಸರಿ ತೆಕ್ಕೆಗೆ ಹಾವೇರಿ ಜಿಪಂ

ಸೋಲು ಎನ್ನುವುದು ಹಾವೇರಿ ಕಾಂಗ್ರೆಸಿಗರಿಗೆ ಸದೇನಲ್ಲ, ಆದರೆ ಕೈಯಲ್ಲಿರುವ ಅಧಿಕಾರವನ್ನು ಜಿಗಿಟ್ಟು ಕಳೆದುಕೊಳ್ಳುತ್ತಾರೆಂದರೆ ಇಲ್ಲಿರುವವರು ಮುಕರಾ ಅಥವಾ ನಾಲಾಯಕರಾ? ಎಂದು ನಿಷ್ಠಾವಂತ ಗ್ರೆಸಿಗರು ನೋವು ಮತ್ತು ಸಿಟ್ಟಿನಿಂದ ಪ್ರಶ್ನಿಸುತ್ತಿದ್ದಾರೆ.



ಸಿ.ಎಂ.ಉದಾಸಿ

ಯು ಹಿರೇಕೆರೂರನ್ನು ಹೊರತು ಸಿದರೆ ಉಳಿದೆಲ್ಲ ಕಡೆ ಸೋತು ಣ್ಣವಾದ ಅಸೆಂಬ್ಲಿ ಕ್ಯಾಂಡಿಡೇಟುಗಳು ಡಲು ಕೆಲಸವಿಲ್ಲದೆ ಪೂರ್ಣ ಮತದಿಂದ ಅಧಿಕಾರ ನಡೆಸುತ್ತಿದ್ದ ಲ್ಲಾ ಪಂಚಾಯತ್‌ನಲ್ಲಿ ತಮ್ಮ ಲಸು ರಾಜಕೀಯ ಪ್ರದರ್ಶಿಸಲು ೀಗಿ ಇದ್ದಿದ್ದನ್ನೂ ಕಳೆದುಕೊಂಡು ತಿದ್ದಾರೆ. ಮಾಜಿ ಸಂಸದ ಕಂ ಡಿಸಿಸಿ ಕ್ಷ ಐ.ಜಿ. ಸನದಿ ಈ ಹೊತ್ತು ಜಿಲ್ಲಾ ಕಾಂಗ್ರೆಸ್ಸನ್ನು ಸ್ಟ್ರಾಪ್ ದಿದ ಅಪಕೀರ್ತಿ ಹೊತ್ತುಕೊಂಡಿ . ಕೆಲಸವಿಲ್ಲದ ಕಮ್ಮಾರ ಅದೇನೋ ದಿದ ಅನ್ನೋ ಹಾಗೆ.

ಹತ್ತು ತಿಂಗಳಿಗೆ ಹಂಚಿದ್ದ ಅಧ್ಯಕ್ಷಗಾದಿಯನ್ನು ಮಾಜಿ ಕ್ಷ ಮೇಗಳಮನಿ ಪರಮೇಶಿಯಿಂದ ಬೇರೆಯವರಿಗೆ ಬಿಸದೆ ಅವನನ್ನೇ ಮುಂದುವರೆಸಲು ಹೋಗಿ ದವರ ವಿರೋಧ ಕಟ್ಟಿಕೊಂಡು ಸ್ವಪಕ್ಷದಿಂದಲೇ ಬ್ವಾಸ ಆಗೋಹಾಗೆ ಮಾಡಿ ಇಡೀ ವ್ಯವಸ್ಥೆಯನ್ನೇ ಹಿಡಿಸಿದ ಐ.ಜಿ. ಸನದಿ ಹಾಗೂ ಮಾಜಿ ಮಂತ್ರಿ .ಕೋಳಿವಾಡ ಈಗ ಮುಟ್ಟಿಮುಟ್ಟಿ ಡಿಕೊಳ್ಳುತ್ತಿದ್ದಾರೆ. ಇದ್ದವರಲ್ಲಿ ಐದು ಕೇಸರಿ ಪಕ್ಷಕ್ಕೆ ಜಿಗಿದು ಚಡ್ಡಿಗಳಿಗೆ ಕಾರ ಕೊಡಿಸಿದ್ದಾರೆ. ಇದು ಆಪರೇಷನ್ ಅಲ್ಲಾ ಸಪರೇಷನ್ ಕಾಂಗ್ರೆಸ್ ಎಂದು ಮೋಹಕ್ಕೆ ಸಿಕ್ಕ ಅಧಿಕಾರದಲ್ಲಿ ಹಲ್ಲುಗಿಂಜು ವ ಜಿಲ್ಲೆಯ ಮುದಿಚಡ್ಡಿ ಮಂತ್ರಿ ಾಸಿ ಗುಲಾಲ್ ಹಾಕಿಕೊಂಡು ಹಾರಾ ದ್ದಾನೆ.



ಪರಮೇಶ್

ಜಿಲ್ಲಾ ಪಂಚಾಯತ್‌ನಲ್ಲಿ ಪೂರ್ಣ ಮತ ಹೊಂದಿದ್ದ ಕಾಂಗ್ರೆಸ್ ಯಾವ ತ್ತೂ ಅಧಿಕಾರ ಕಳೆದುಕೊಳ್ಳುವುದಿಲ್ಲ, ರ್ಣ ಐದು ವರ್ಷ ಅಧಿಕಾರ ನಡೆಸುತ್ತದೆ ಊಹೆಯೀಗ ತಲೆಕೆಳಕಾಗಿದೆ. ಅನೈತಿಕ ಕಾರಣಕ್ಕೆ ಪೀಠಿಕೆ ಹಾಕಿರುವ ಯಡ್ಡಿ ತ್ವದ ಬಿಜೆಪಿ ಸರ್ಕಾರ ಬೇರೆ ಪಕ್ಷದವರಿಗೆ ಕಾರ ಅನುಭವಿಸುವ ಹಕ್ಕೇ ಇಲ್ಲವೆನ್ನು ವರ್ತಿಸುತ್ತಿದೆ. ಅದಕ್ಕೊಂದು ಈಗಾಗಲೇ ಟ್ಯಾಂತರ ರೂ. ಸುರಿದಿದೆ. ಕಾಂಗ್ರೆಸ್ಸಿ ುವ ಕಿತ್ತಾಟದ ಲಾಭ ಪಡೆಯಲು ತ್ರಿ ಉದಾಸಿ ಜಿಲ್ಲೆಯಲ್ಲಿ ರೆಡ್ಡಿ ಪಿಯನ್ನು ಜಾರಿಮಾಡಿದ್ದಾನೆ. ಮುಂದಿನ ಕಸಭಾ ಚುನಾವಣೆಗೆ ತನ್ನ ಮಗ ುಮಾರನನ್ನು ಕ್ಯಾಂಡಿಡೇಟ್ ಮಾಡ ಟ್ಟಿರುವ ಉದಾಸಿ ಅದಕ್ಕಾಗಿ ಪ್ಲಾಟ್ ತರಹ ಜಿಪಂಗೆ ಕೈಹಾಕಿದ್ದು ಗುಟ್ಟಾ ವ ವಿಚಾರವೇನಲ್ಲ. ಅಧಿಕಾರ ಕಳೆದು ದು ಹುಚ್ಚ ಮಂಗನಂತಾಗಿದ್ದ ಪರ ುಂಗೆ ಹತ್ತು ಲಕ್ಷ ಡೀಲ್ ಇಟ್ಟಿದ್ದಾರಷ್ಟೆ. ಉಳಿದಿರುವ ್ಕು ತಿಂಗಳ ಅವಧಿಯಲ್ಲಿ ಅಧ್ಯಕ್ಷನಾಗಿ ಕೆಬರುವುದು ಇದೆ ಎಂದು ಲೆಕ್ಕಹಾಕಿದ ಪರಮೇಶಿ ಬಿಜೆಪಿ ಾರಕ್ಕೆ ಬರಲು ಐದು ಜನ ಸದಸ್ಯರನ್ನು ತನ್ನೊಂದಿಗೆ ಚಡ್ಡಿಗಳ ಪಾದಗಳಿಗೆ ಕೆಡವಿದ್ದಾನೆ.



ಕೆ.ಬಿ.ಕೋಳಿವಾಡ



ಅನಸೂಯ

32 ಜನ ಸದಸ್ಯ ಬಲ ಹೊಂದಿರುವ ಜಿಪಂನಲ್ಲಿ ್ರೆಸ್‌ನ 15, ಬಿಜೆಪಿಯ 13, ಜೆಡಿಎಸ್‌ನ 3 ರ ಜೊತೆಗೆ ಒಬ್ಬ ಪಕ್ಷೇತರ ಸದಸ್ಯರಿದ್ದಾರೆ. ಈ 5 ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರ ಲದಿಂದ 19 ಜನ ಸದಸ್ಯ ಬೆಂಬಲದೊಂದಿಗೆ ಾರ ನಡೆಸಿತ್ತು, ಈಗ ನಡೆದಿರುವ ಸಪರೇಷನ್ ್‌ನಿಂದ 5 ಜನ ಬಿಜೆಪಿಗೆ ಹಾರುವ ಮೂಲಕ ಕೇಸರಿ ಪಕ್ಷ 18 ಸದಸ್ಯರ ಬೆಂಬಲ ಹೊಂದಿದಂತಾಗಿದೆ. ಹಿಂದಿನಿಂದಲೂ ಜಿಪಂ ಅಧಿಕಾರಕ್ಕಾಗಿ ಹಗಲುಗನಸು ಕಾಣುತ್ತಾ ಸದಸ್ಯರ ಖರೀದಿಗೆ ಕೈಹಾಕುತ್ತಿದ್ದ ಬಿಜೆಪಿಗರಿಗೆ ಕಾಂಗ್ರೆಸ್ ನಾಯಕರ ಕಿತ್ತಾಟದಿಂದ ಈ ಬಾರಿ 'ವೈದ್ಯರು ಹೇಳಿದ್ದೂ ಹಾಲು ಅನ್ನ, ರೋಗಿ ಬಯಸಿದ್ದೂ ಹಾಲು ಅನ್ನ' ಎಂಬಂತಾಗಿದೆ.

ಪರಮೇಶಿಯ ಪವರ್ ಪ್ರಸಂಗ

ಮಾಜಿ ಮಂತ್ರಿ ಕೆ.ಬಿ. ಕೋಳಿವಾಡರ ರಾಜಕೀಯ ಜೀವನದ ಪ್ರಾರಂಭದಿಂದಲೂ ಅವರ ಕಾಯಂ ಚೇಲಾ ಆಗಿ ಬೆಳೆದವನು ಪರಮೇಶಪ್ಪ ಮೇಗಳಮನಿ. ಈತ ಬಾಯಲ್ಲಿ ಚಿನ್ನದ ಚಮಚವಿಟ್ಟುಕೊಂಡೇ ಹುಟ್ಟಿದವನೇನಲ್ಲ, ಯಾವಾಗಲೂ ಅಪ್ಪಾಜಿ.. ಅಪ್ಪಾಜಿ.. ಎಂದುಕೊಂಡು ಹಿಂದೆ ತನ್ನ ತಿರುಗುತ್ತಿದ್ದ ಪರಮೇಶಪ್ಪನನ್ನು ಕೋಳಿವಾಡರು ವಿಪರೀತ ನಂಬಿದ್ದರಲ್ಲದೆ ಸಾಯುವ ತನಕ ನಿನಗೆ ಅಪ್ಪಾಜಿಯಾಗಿರುತ್ತೇನೆ ಎಂದು ಹೇಳಿದ್ದರಂತೆ. ಸಾಲದೆಂಬಂತೆ ಆತನನ್ನು ಜಿಪಂ ಸದಸ್ಯನನ್ನಾಗಿಯೂ ಮಾಡಿದರು. ಜಿಪಂ ಅಧ್ಯಕ್ಷಗಾದಿಗೆ ಪ.ಪಂ. ಮೀಸಲಾತಿ ನಿಗದಿಯಾದಾಗ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿ ಲಕ್ಷಗಟ್ಟಲೆ ಹಣ ಸುರಿದು ಮೀಸಲಾತಿಯನ್ನು ಪರಿಶಿಷ್ಟ ಜಾತಿಗೆ ನಿಗದಿ ಮಾಡಿಕೊಂಡು ಬಂದು ಶಿಷ್ಯ ಮೇಗಳಮನಿಯನ್ನು ಒಪ್ಪಂದದ ಮೇರೆಗೆ ಹತ್ತು ತಿಂಗಳ ಅಧ್ಯಕ್ಷಗಾದಿಗೆ ತಂದು ಕೂರಿಸಿದ್ದೇ ತಡ, ತನ್ನ ನಾಯಿ ಬುದ್ಧಿಯನ್ನು ಈ ಆಸಾಮಿ ಶುರುಹಚ್ಚಿಕೊಂಡು ಬಿಟ್ಟ. ತಾನೊಬ್ಬ ಕಾಂಗ್ರೆಸ್ ಸದಸ್ಯ ಅನ್ನೋದನ್ನೂ ಮರೆತು ಮಂತ್ರಿ ಉದಾಸಿಯನ್ನು "ಅಪ್ಪಾಜಿ" ಎನ್ನಲು ಶುರು ಮಾಡಿದ. ರಣಹುವಿದ್ದಾಗಲೇ ಅಧ್ಯಕ್ಷಗಿರಿಗೆ ಏರಿದ್ದ ಪರಮೇಶಿ ಪರ್ಸಂಟೇಜ್ ಕೊಟ್ಟ ಬಿಲ್ಲಿಗೆ ಚೆನ್ನು ಹತ್ತಿದ್ದಲ್ಲದೆ, ಅಧಿಕಾರಿಗಳಿಗೆ ಧಮಕಿ ಹಾಕಿ ಹಣ ಪೀಕಲು ಹತ್ತಿದ್ದ. ಕ್ರಮೇಣ ಇವನ ಹಲ್ಕಟ್ ದಂಧೆಗೆ ಬೆಂಗಾವಲಾಗಿ ನಿಂತ ಉದಾಸಿಗೆ ದಾಸನಂತೆ ಚಡ್ಡಿ ಪಾಳಯದಲ್ಲಿ ಗುರುತಿಸಿಕೊಳ್ಳಲು ಶುರುಹಚ್ಚಿಕೊಂಡ. ಅಷ್ಟರಲ್ಲಾಗಲೇ ಕಾಂಗ್ರೆಸ್ಸಿನ ಉಳಿದ ಸದಸ್ಯರ ಸಹನೆ ಕಟ್ಟೆಯೊಡೆದು ಪರಮೇಶಿಯನ್ನು ಪರ್ಮನೆಂಟಾಗಿ ಅಧ್ಯಕ್ಷಗಿರಿಯಿಂದ ಕೆಳಗಿಳಿಸಿದರು. ಪವರ್ ಕಳಕೊಂಡು ಪರದೇಶಿಯಾದ ಪರಮೇಶಿ ಜಿಪಂ ಚಡ್ಡಿಗಳೊಂದಿಗೆ ಸೇರಿ ಉಪಾಧ್ಯಕ್ಷ ಅನಸೂಯ ದೊಡ್ಡಮನಿ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿ ಗೆದ್ದೂಬಿಟ್ಟ. ಹೇಗೂ ಬಿಜೆಪಿಗಳೊಂದಿಗೆ ಗುರುತಿಸಿಕೊಂಡಿದ್ದೇನೆ, ಬಾಕಿ ಉಳಿದ ನಾಲ್ಕು ತಿಂಗಳಿಗೆ ಚಡ್ಡಿಗಳು ತನ್ನನ್ನೇ ಅಧ್ಯಕ್ಷನನ್ನಾಗಿ ಮಾಡುತ್ತಾರೆಂಬ ಹಗಲುಗನಸಿನಲ್ಲಿದ್ದ. ಸಾಲದೆಂಬಂತೆ ಈಗ "ಕಾಂಗ್ರೆಸಿಗರು ದಲಿತ ವಿರೋಧಿಗಳು, ಅನ್ಯಾಯ ಮಾಡಿದ್ದಾರೆ, ನಾನು ಅಧಿಕಾರದಲ್ಲಿರಬೇಕಾದರೆ ನಾಯಕರಿಗೆ 5 ಲಕ್ಷ ಕೊಡಬೇಕಾಗಿತ್ತು. ಕೋಳಿವಾಡ, ಸನದಿಗಳು ತಿಂಗಳ ಪರ್ಸಂಟೇಜ್ ಬೇಕೆಂದು ಡಿಮ್ಯಾಂಡ್ ಮಾಡಿದ್ದಾರೆ" ಎಂದು ಕಂಡಕಂಡಲ್ಲಿ ಬೊಗಳುತ್ತಾ ತಿರುಗುತ್ತಿದ್ದಾನೆ. ಆದರೆ, ಉಂಡ ಮನೆಗೆ ಕನ್ನ ಹಾಕುವ ಜಾಯಮಾನದ ಬಿಜೆಪಿಗಳು ಪರಮೇಶಿಯನ್ನು ಊಟದಲ್ಲಿನ ಉಪ್ಪಿನಕಾಯಿ ಥರ ಉಪಯೋಗಿಸಿ, ಅವನಿಗೊಂದು ರೇಟ್ ಫಿಕ್ಸ್ ಮಾಡಿ ಮಾಜಿ ಅಧ್ಯಕ್ಷನನ್ನಾಗಿ ಮಾಡಿಬಿಟ್ಟಿದ್ದಾರೆ.

ಹಾಗೊಮ್ಮೆ ಪರಮೇಶಿಗೆ ಕಾಂಗ್ರೆಸಿನಿಂದ ಅನ್ಯಾಯವಾಗಿದ್ದರೆ ಅದನ್ನು ರಾಜ್ಯಮಟ್ಟದ ನಾಯಕರ ಗಮನಕ್ಕೆ ತಂದು ಇಲ್ಲಿಯ ನಾಯಕರಿಗೆ ಪಾಠ ಕಲಿಸಬೇಕಿತ್ತು, ಅದನ್ನು ಬಿಟ್ಟು ಹಣ ಮತ್ತು ಅಧಿಕಾರದಾಸೆಗೆ ಚಡ್ಡಿಗಳ ಬೆನ್ನಿಗೆ ಬಿದ್ದು ಹುಚ್ಚನಂತೆ ಕಾಂಗ್ರೆಸಿಗರ ವಿರುದ್ಧ ಹೇಳಿಕೆ ನೀಡುತ್ತಿರುವುದು ಅವನ ನಂಗಾನಾಚ್ ಬುದ್ಧಿಯನ್ನು ತೆರೆದಿಟ್ಟಂತಾಗಿದೆ. ಪರಮೇಶಿ ಪಂಚರ್ ಆಗಿದ್ದಾನೆ ಎನ್ನುವಂತಾಗಿದೆ.

ಡಾ. ಮಲ್ಲೇಶಪ್ಪನಿಗೆ ಆಪರೇಷನ್ ಕಮಲ

ತಿಕ್ಕಲು ಬುದ್ಧಿಯ ಪರಮೇಶಿಯನ್ನು ತಮ್ಮ ತೆಕ್ಕೆಗೆ ಹಾಕಿಕೊಂಡ ಬಿಜೆಪಿಗಳು ಕೇಳಿದಷ್ಟು ಹಣ ಕೊಟ್ಟು ಸದಸ್ಯರಿಗೆ ಓಪನ್ ಆಫರ್ ಕೊಡಲು ಶುರುಮಾಡಿದರು. ಅಸಲಿಗೆ ಪರಮೇಶಿಗೆ ತನ್ನನ್ನೇ ಅಧ್ಯಕ್ಷನನ್ನಾಗಿ ಮಾಡಲು ಉದಾಸಿ ಮತ್ತವನ ಮಗ ಶಿವಕುಮಾರ್ ರೆಡಿಯಾಗಿದ್ದಾರೆ ಎಂದುಕೊಂಡಿದ್ದ. ಆದರೆ, ಲಕ್ಷಗಟ್ಟಲೇ ಹಣ ಸುರಿದು ಇವನನ್ನು ಖರೀದಿಸಿದ ಬಿಜೆಪಿಗಳು ಅದಕ್ಕೆ ಒಪ್ಪುತ್ತಾರೆಯೇ?



ಮಲ್ಲೇಶಪ್ಪ

ಬಿಜೆಪಿಯಲ್ಲಿದ್ದ ಪರಿಶಿಷ್ಟ ಜಾತಿಗೆ ಸೇರಿದ ಏಕೈಕ ಕ್ಯಾಂಡಿಡೇಟ್ ಡಾ. ಮಲ್ಲೇಶಪ್ಪ ಹರಿಜನ್‌ಗೆ ಅಧ್ಯಕ್ಷ ಪಟ್ಟ ಕಟ್ಟಿ ರಾಜ್ಯಮಟ್ಟದಲ್ಲಿ ತಾನು ರೆಡ್ಡಿಗಳ ಹಾಗೆ ಆಪರೇಷನ್ ಮಾಡಬಲ್ಲೆ ಎಂದು ತೋರಿಸಿಕೊಂಡು ತಳ ಗಟ್ಟಿಗೊಳಿಸಲು ಉದಾಸಿ ಸ್ಕೆಚ್ ಹಾಕಿಬಿಟ್ಟ. ಪಂಚರ್ ಆಗಿದ್ದ ಪರಮೇಶಿಯೂ ಇದಕ್ಕೆ ಓಕೆ ಎಂದ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ರಾಣೆಬೆನ್ನೂರಿನಿಂದ ಟಿಕೆಟ್ ಕೊಡಲಿಲ್ಲವೆಂದು ಪಕ್ಷ ಬಿಟ್ಟು ಜೆಡಿಎಸ್ ಸೇರಿ ಎಲೆಕ್ಷನ್ನಲ್ಲಿ ನಿಂತು ಸೋತು ಸುಣ್ಣವಾಗಿದ್ದ ಎಸ್.ಎಸ್.ರಾಮಲಿಂಗಣ್ಣನವರ ಸ್ಥಳೀಯ ನಾಯಕರ ವಿರುದ್ಧ ಮೊದಲೇ ತಿರುಗಿಬಿದ್ದಿದ್ದರಿಂದ ಸಲೀಸಾಗಿ ಬಿಜೆಪಿಗೆ ಫಿಕ್ಸ್ ಆಗಿಬಿಟ್ಟ. ಕೆ.ಬಿ ಕೋಳಿವಾಡರ ಅಂಗಳದಲ್ಲಿಯೇ ರಾಜಕಾರಣ ಕಂಡ ಹೊನ್ನವ್ವಾ ರಾಹುತನಕಟ್ಟಿ ಕಾಂಗ್ರೆಸ್ಸಿನಲ್ಲಿ ಒಂದು ಅವಧಿಯ ಅಧ್ಯಕ್ಷೆಯಾಗಿ ಕೆಳಗಿಳಿದಾಕೆ. ಅಧಿಕಾರದ ರುಚಿ ಕಂಡು ಹಣಕ್ಕಾಗಿ ಹಾತೊರೆಯುತ್ತಿದ್ದ ಈಕೆ ಚಡ್ಡಿಗಳ ಕೂಗಿಗೆ ಬಾಯ್ತೆರೆದು ತನ್ನೊಂದಿಗೆ ಇನ್ನೊಬ್ಬ ಸದಸ್ಯೆ ಕರಿಬಸವ್ವಾ ಇಮುಡಿಯನ್ನು ಕರೆದುಕೊಂಡು ಹೋಲ್‌ಸೇಲ್ ಮಾರಾಟವಾಗಿದ್ದಾಳೆ. ತಾನು ಕಟ್ಟಾ ಕಾಂಗ್ರೆಸ್ ಎಂದು ಪೋಜು ಕೊಟ್ಟು ಪರಮೇಶಿಯನ್ನು ಅಧ್ಯಕ್ಷಗಿರಿಯಿಂದ ಕೆಳಗಿಳಿಸಲು ಪ್ರಮುಖ ಪಾತ್ರ ವಹಿಸಿದ್ದ ಉಪಾಧ್ಯಕ್ಷೆ ಅನಸೂಯ ದೊಡ್ಡಮನಿ ಸ್ವಜಾತಿಯ ಮಂತ್ರಿ ಬಸವರಾಜ ಬೊಮ್ಮಾಯಿಯ ಫರ್ಮಾನಿಗೆ ಜೋತು ಬಿದ್ದು ಬಿಜೆಪಿ ಪಾಳೆಯಕ್ಕೆ ಜಿಗಿದಿದ್ದಾಳೆ. ಜಾತಿ ನಿಷ್ಠೆಗೆ ಹೆಸರಾದ ಬೊಮ್ಮಾಯಿ ಅನಸೂಯಳನ್ನು ಮತ್ತೆ ಉಪಾಧ್ಯಕ್ಷಳನ್ನಾಗಿಸಿ ಕೃತಾರ್ಥನಾದೆ ಎಂದು ಸಿರಿಗೆರೆಯ ಮಠದ ಶ್ರೀಗಳಿಗೆ ಎರಗಿದ್ದಾನೆ.



ಬಿ.ಸಿ.ಪಾಟೀಲ್



ಸನದಿ

ಸ್ನಾತಕೋತ್ತರ ಪದವಿ ಪಡೆದು ಪಾಲಿಟಿಕ್ಸ್‌ಗೆ ಎಂಟ್ರಿ ಕೊಟ್ಟಿರುವ ಡಾ. ಮಲ್ಲೇಶಪ್ಪ ಹರಿಜನ ಜಿಪಂ ಚುನಾವಣೆಗೆ ಸ್ಪರ್ಧಿಸಿದಾಗ ಜೇಬಿನಲ್ಲಿ ನಯಾ ಪೈಸೆ ಇರಲಿಲ್ಲ, ಶಿಗ್ಗಾವಿ ತಾಲ್ಲೂಕಿನ ದುಂಡಸಿ ಕ್ಷೇತ್ರದವನು, ಪದವೀಧರ, ಬಡವ ಎಂದು ಅವನನ್ನು ಜನ ಚಂದಾ ಎತ್ತಿ ಚುನಾವಣೆಯಲ್ಲಿ ಗೆಲ್ಲಿಸಿದ್ದರು. ಆದರೆ ಮಲ್ಲೇಶಿ ಗೆದ್ದಮೇಲೆ ಈತ ಶಿಗ್ಗಾವಿಯಲ್ಲಿ ಮೋಜಿನ ಹೈಟೆಕ್ ಜೀವನ ಮಾಡಿದನೇ ಹೊರತು ತನಗೆ ಮತಹಾಕಿದ್ದ ಬಡಜನರತ್ತ ತಿರುಗಿ ಕೂಡ ನೋಡಲಿಲ್ಲ. ಈಗ ಉದಾಸಿ ಆಶೀರ್ವಾದದಿಂದ ನಾಲ್ಕು ತಿಂಗಳಿಗೆ ಅಧ್ಯಕ್ಷನಾಗಿದ್ದಾನೆ. ಬಿಜೆಪಿಗೆ ಕೊರತೆಯಿರುವ ಹಿಂದುಳಿದ ವರ್ಗಗಳ ನಾಯಕನನ್ನಾಗಿ ಮಲ್ಲೇಶನನ್ನು ರೆಡಿಮಾಡುವುದರ ಜೊತೆಗೆ ಹಾವೇರಿ ಶಾಸಕ ನೆಹರು ಓಲೇಕಾರನ ಓಟಕ್ಕೆ ಕತ್ತರಿ ಹಾಕಲು ಉದಾಸಿ ರೂಪಿಸುತ್ತಿರುವ ಸಂಚು ಇದಾಗಿದೆ. ಆದರೆ ಹಸಿದ ಮಲ್ಲೇಶಪ್ಪ ಜಿಪಂನ ಸರ್ಜರಿ ಮಾಡಿ ಕೊಳ್ಳೆಹೊಡೆಯಲು ತಾಲೀಮು ಒಂದೇ ಉಳಿದಂತಾಗಿದೆ.

ಸನದಿ ಹಠಾವೋ, ಕಾಂಗ್ರೆಸ್ ಬಚಾವೋ

ಧ್ರಮ್‌ಸಿಂಗ್ ಮತ್ತು ಖರ್ಗೆ ಎಂಬ ದಂಡಪಿಂಡಗಳಿಂದ ರಾಜ್ಯ ಕಾಂಗ್ರೆಸ್ ನೆಲಕಚ್ಚಿರುವಂತೆ ಸನದಿ ಮತ್ತು ಕೋಳಿವಾಡಗಳೆಂಬ ದಂಡಪಿಂಡಗಳಿಂದ ಜಿಲ್ಲಾ ಕಾಂಗ್ರೆಸ್ ಆಕ್ಸಿಜನ್ ಇಲ್ಲದೇ ಒದ್ದಾಡುತ್ತಿದೆ. ಧ್ರಮ್‌ಸಿಂಗ್-ಖರ್ಗೆ ಜೋಡಿಯನ್ನು ಕಿತ್ತೆಸೆಯುವ ಮೂಲಕ ರಾಜ್ಯ ಕಾಂಗ್ರೆಸ್‌ಗೆ ಪುನಶ್ಚೇತನ ಕೊಡುವ ಕೆಲಸಕ್ಕೆ ಹೈಕಮಾಂಡ್ ಕೈಯಿಟ್ಟಂತೆ ಸನದಿ-ಕೋಳಿವಾಡ ಎಂಬ ಈ ನಿರುಪಯುಕ್ತ ಜೋಡಿಯನ್ನು ಮನೆಗೆ ಕಳಿಸದ ಹೊರತು ಜಿಲ್ಲಾ ಕಾಂಗ್ರೆಸ್‌ಗೆ ಜೀವ ಬರುವುದಿಲ್ಲ.

ಎರಡು ಅವಧಿಗೆ ಧಾರವಾಡ ದಕ್ಷಿಣ ಕ್ಷೇತ್ರದಿಂದ ಎಂಪಿಯಾಗಿದ್ದ ಐ.ಜಿ. ಸನದಿ ಬಸವಣ್ಣನ ಇನ್ನೊಂದು ಅವತಾರವೆಂಬಂತೆ ವಚನಗಳನ್ನು ಹೇಳಿಕೊಂಡೇ ಜಿಲ್ಲೆಯಲ್ಲಿ ರಾಜಕಾರಣ ಮಾಡಿದವರು. ನಂತರದಲ್ಲಿ ಎರಡು ಬಾರಿ ಸೋತು, ಉಳಿದವರನ್ನೂ ಸೋಲಿಸಿ ಕುಖ್ಯಾತಿ ಗಳಿಸಿದವರು. ಇವತ್ತು ಜಿಲ್ಲಾ ಕಾಂಗ್ರೆಸ್ ಕೆಟ್ಟು ಕೆರ ಹಿಡಿದು ಹೋಗಿದೆಯೆಂದರೆ ಅದಕ್ಕೆ ಸನದಿಯ ಯೋಗದಾನ ಬಹಳಷ್ಟಿದೆ. ಹಾವೇರಿ ಜಿಲ್ಲೆಯವರಲ್ಲದ ಇಂತಹ ದಂಡಪಿಂಡವನ್ನು ಇನ್ನೂ ಜಿಲ್ಲಾಧ್ಯಕ್ಷರನ್ನಾಗಿ ಮಾಡಿಟ್ಟುಕೊಂಡಿದ್ದಾದರೂ ಏಕೆ ಎಂಬ ಜಿಲ್ಲೆಯ ನಿಷ್ಠಾವಂತ ಕಾರ್ಯಕರ್ತರ ಪ್ರಶ್ನೆಗೆ ಆ ದೇಶಪಾಂಡೆ ಮತ್ತು ಡಿಕೆಶಿ ಉತ್ತರಿಸಬೇಕು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಲ್ಲಾ ಕ್ಯಾಂಡಿಡೇಟುಗಳನ್ನು ಸಾರಾಸಗಟಾಗಿ ಮಕಾಡೆ ಮಲಗಿಸಿದ್ದೇ ಸನದಿಯ ಜೀವ ಮಾನದ ಅತಿದೊಡ್ಡ ಸಾಧನೆ. ಹುಬ್ಬಳ್ಳಿಯಲ್ಲಿದ್ದುಕೊಂಡು ಹಾವೇರಿ ಜಿಲ್ಲಾ ಅಧ್ಯಕ್ಷಗಿರಿ ನಡೆಸುವ ಸನದಿಯಿಂದಲೇ ಈ ಹೊತ್ತು ಕಾಂಗ್ರೆಸ್ ಕೈಯಲ್ಲಿದ್ದ ಹಾವೇರಿ ಜಿಲ್ಲಾ ಪಂಚಾಯತ್ ಕೈತಪ್ಪಿ ಬಿಜೆಪಿಗಳ ಪಾಲಾಗಿರುವುದು. ರಾಣೆಬೆನ್ನೂರು ಬಿಟ್ಟು ಬೇರೆ ಏನೂ ಗೊತ್ತಿಲ್ಲದ ಕೋಳಿವಾಡವನ್ನಿಟ್ಟುಕೊಂಡು ಸನದಿ ಜಿಲ್ಲಾ ಕಾಂಗ್ರೆಸಿಗೆ ದುಡಿದಿದ್ದೆಷ್ಟೆಂಬುದು ಬಯಲಾಗಿದೆ ಎಂದು ಸ್ವತಃ ಅವರ ಪಕ್ಷದ ಮಾಜಿ ಮಂತ್ರಿ ಬಸವರಾಜ ಶಿವಣ್ಣನವರ, ಹಾಲಿ ಶಾಸಕ ಬಿ.ಸಿ. ಪಾಟೀಲರು ಈಗ "ಸನದಿ ಹಠಾವೋ ಕಾಂಗ್ರೆಸ್ ಬಚಾವೋ" ಎಂದು ವರಿಷ್ಠರಿಗೆ ಕಂಪ್ಲೆಂಟು ಕೊಟ್ಟಿದ್ದಾರೆ.


ಕೋಳಿವಾಡನ ಕ್ಷೇತ್ರದವರೇ ನಾಲ್ಕು ಜನ ಜಿಪಂ ಸದಸ್ಯರು ಕಾಂಗ್ರೆಸ್ಸಿಗೆ ಕೈ ಕೊಟ್ಟಿದ್ದಕ್ಕೇ ಇಂದು ಜಿಪಂ ಕೈತಪ್ಪಿದೆ. ವರಿಷ್ಠರಿಗೆ ಎಲ್ಲಾ ವಿಷಯ ತಿಳಿಸಿ ಕ್ಯಾನ್ಸರ್‌ನಂತೆ ತಗುಲಿರುವ ಇವರಿಬ್ಬರನ್ನು ಪರ್ಮನೆಂಟಾಗಿ ಮನೆಗೆ ಕಳುಹಿಸುತ್ತೇವೆ ಎಂದಿದ್ದಾರೆ. ಇನ್ನೊಂದೆಡೆ ಕಾಂಗ್ರೆಸ್ ಸದಸ್ಯರನ್ನು ಉಳಿಸಿಕೊಳ್ಳಲು ವಿಫಲರಾದ ಸನದಿ ಬುಡ್ಡಾನ ವಿರುದ್ಧ ಕೆಲವರು ಛೀ...ಥೂ... ಚಳವಳಿ ಮಾಡುತ್ತೇವೆಂದು ಪ್ಲಾನ್ ಹಾಕಿರುವುದು ಕಾಂಗ್ರೆಸ್ ಕರ್ಮವೇ ಸರಿ.

ಒಟ್ಟಿನಲ್ಲಿ ಇವರಿವರ ಕಿತ್ತಾಟ, ತಿಕ್ಕಲುತನದಿಂದ ಇಂದು ಹಾವೇರಿ ಜಿಲ್ಲೆಯಲ್ಲಿ ಕೊಳ್ಳಿದೆವ್ವಗಳು ಹಗಲು ಹೊತ್ತಿನಲ್ಲೇ ಬೀದಿಗೆ ಬಿದ್ದಂತಾಗಿದೆ. ಅಧಿಕಾರಕ್ಕೆ ಬಂದು ಆರು ತಿಂಗಳಾಗಿದ್ದರೂ ಸಾಮಾನ್ಯ ಜನರಿಗೆ ಒಂದು ಪೈಸಾ ಉಪಯೋಗಕ್ಕೆ ಬಾರದೆ ಕೇವಲ ಕೇಸರಿ ಪಟಾಲಂಗಳ ಲೂಟಿಗೆ ಬೆನ್ನೆಲುಬಾಗಿ ನಿಂತಿರುವ ಮಂತ್ರಿ ಉದಾಸಿ, ಬೊಮ್ಮಾಯಿ ಮತ್ತವರ ಶಾಸಕರು ಈಗ ಜಿಪಂ ಅನ್ನು ತಮ್ಮತ್ತ ತೆಗೆದುಕೊಂಡಿದ್ದಾರೆ. ಜಿಲ್ಲೆಯ ಜನರಿಗೆ ಮುಂದೆ ಅದ್ಯಾವ ಶಾಕ್ ಕಾದಿದೆಯೋ ಆ ಹಾವೇರೀಶನೇ ಬಲ್ಲ.

■ ಹುರುಳಿಕುಪ್ಪಿ ವಿನಯ್

ಹಜ್ ಸಮಿತಿ: ವಂಚಕ ಟಿಪ್ಪೂವಿನ ವೃತ್ತಾಂತ

■ ಬಾನು ಮುಷ್ತಾಕ್



ಜುಲ್ಫಿಕಾರ್ ಅಹ್ಮದ್

ಮುಸ್ಲಿಮರಿಗೆ ಇಹಲೋಕಕ್ಕಿಂತ ಪರಲೋಕದ ಬದುಕಿನ ಬಗ್ಗೆ ಅಪಾರ ನಂಬಿಕೆ ಮತ್ತು ವಿಶ್ವಾಸ. ಇಹಲೋಕದ ತೀರ್ಪೇನೋ ಬಂದಾಯಿತು. ಪರಲೋಕದ ತೀರ್ಪಿನ ಗತಿಯೇನು? ಜುಲ್ಫಿಕರ್ ಅಹ್ಮದ್ ಟಿಪ್ಪೂವಿನ ಕಾರಸ್ಥಾನದಿಂದ ಹಜ್ ಯಾತ್ರೆಯಿಂದ ವಂಚಿತರಾದ ಯಾತ್ರಾರ್ಥಿಗಳು ಸಾಲುಗಟ್ಟಿ ಅವರ ವಿರುದ್ಧ ನ್ಯಾಯ ತೀರ್ಮಾನವನ್ನು ಕೇಳಿದಲ್ಲಿ , ಅವರನ್ನು ಅಲ್ಲಾಹನೇ ರಕ್ಷಿಸಬೇಕು. ಅಬ್ದುಲ್ ಅಜೀಮ್‌ರವರ ಏಕಾಂಗಿ ಹೋರಾಟಕ್ಕೆ ಹಜ್ ಸಮಿತಿಯ ಇತರೆ ಸದಸ್ಯರು ಯಾಕೆ ಕೈಜೋಡಿಸಲಿಲ್ಲ ಎಂಬುದು ಕೊನೆಗೂ ತಿಳಿಯದ ವಿಷಯ. ಮೌನ ಪ್ರೇಕ್ಷಕರಾಗಿ ಉಳಿದ ಹಜ್ ಸಮಿತಿಯ ಇತರೆ ಸದಸ್ಯರನ್ನು ಕೂಡಾ ಆ ಅಲ್ಲಾಹನೇ ಕಾಪಾಡಬೇಕು.

ಇಡೀ ಪ್ರಪಂಚದ ಮುಸ್ಲಿಮರ ಬದುಕಿನ ತೀವ್ರ ಬಯಕೆಯೆಂದರೆ ಜೀವನದಲ್ಲಿ ಒಮ್ಮೆಯಾದರೂ ಹಜ್ ನಿರ್ವಹಿಸಬೇಕೆಂಬುದು. ಉಳ್ಳವರಿಗೆ ಹಜ್ ಕಡ್ಡಾಯವಾದ ಕ್ರಿಯೆ. ಬಕ್ರೀದ್ ತಿಂಗಳಿನಲ್ಲಿ ಮೆಕ್ಕಾ ಹಾಗೂ ಆ ಪಕ್ಕದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗೆ ಹಜ್ ಎಂತಲೂ ವರ್ಷದ ಇತರ ದಿನಗಳಲ್ಲಿ ಮೆಕ್ಕಾ ಪಟ್ಟಣಕ್ಕೆ ಹೋಗಿ 'ಕಾಬಾ'ದ ಸುತ್ತ ಪ್ರದಕ್ಷಿಣೆ ಮಾಡುವ ಕ್ರಿಯೆಗೆ 'ಉಮ್ರಾ' ಎಂತಲೂ ಕರೆಯುತ್ತಾರೆ.

ಹಜ್ ಧಾರ್ಮಿಕ ಕ್ರಿಯೆಯಾದರೂ ಅದರ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ರಾಜತಾಂತ್ರಿಕ ಪ್ರಕ್ರಿಯೆಗಳು, ಪ್ರಯಾಣ ವ್ಯವಸ್ಥೆ ತಂಗುದಾಣಗಳು, ವಿಮಾನ ಸೇವೆ, ಯಾತ್ರಾರ್ಥಿಗಳ ಆರೋಗ್ಯ ಸಂರಕ್ಷಣೆ- ಈ ಮೊದಲಾದ ಅನೇಕ ವಿಶಿಷ್ಟ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕಾದ ಅವಶ್ಯಕತೆಯಿದೆ. ಅಪಾರ ಆರ್ಥಿಕ ವ್ಯವಹಾರವನ್ನು ಹೊಂದಿರುವ ಈ ಯಾತ್ರೆಯ ನಿರ್ವಹಣೆಯನ್ನು ಭಾರತ ಸರ್ಕಾರವು ಅತ್ಯಂತ ವಿಚಕ್ಷಣೆಯಿಂದ ಪ್ರತಿ ವರ್ಷವೂ ನಡೆಸುತ್ತಿದೆ ಹಾಗೂ ಈ ವ್ಯವಸ್ಥೆಗಾಗಿ ಸೆಂಟ್ರಲ್ ಹಜ್ ಕಮಿಟಿಯೆಂಬ ಒಂದು ಸಮಿತಿಯನ್ನು ನೇಮಿಸಿದೆ.

ಇದೇ ಸ್ವರೂಪದಲ್ಲಿ, ವಿಕೇಂದ್ರಿಕೃತ ವ್ಯವಸ್ಥೆಯ ಅನ್ವಯ, ಎಲ್ಲಾ ರಾಜ್ಯಗಳಲ್ಲೂ ಹಜ್ ಸಮಿತಿಗಳು ಕಾರ್ಯವನ್ನು ನಿರ್ವಹಿಸುತ್ತಿವೆ. ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಹಜ್ ಸಮಿತಿಯು ಅನೇಕ ಮೌಲ್ವಿಗಳು ಹಾಗೂ ಸಾರ್ವಜನಿಕರಿಂದ ಕೂಡಿದ 15 ಮಂದಿ ಸದಸ್ಯರನ್ನು ಒಳಗೊಂಡಿದೆ.

ಹಿಂದಿನ ವರ್ಷದ ಹಜ್‌ನ ವ್ಯವಸ್ಥೆಯನ್ನು ಪರಿಶೀಲಿಸಿ, ಮುಂದಿನ ವರ್ಷದ ಹಜ್ ಸುವ್ಯವಸ್ಥಿತವಾಗಿ ನಡೆಯುವಂತೆ ಶ್ರಮಿಸುವುದು, ಉದ್ದೇಶಿತ ಯಾತ್ರಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಅವುಗಳನ್ನು ಸೆಂಟ್ರಲ್ ಹಜ್ ಕಮಿಟಿಗೆ ರವಾನೆ ಮಾಡುವುದು, ಆಯ್ಕೆಯಾದ ಯಾತ್ರಾರ್ಥಿಗಳ ಪಾಸ್‌ಪೋರ್ಟ್ ಮತ್ತು ವೀಸಾಗಳನ್ನು ಸಿದ್ಧಪಡಿಸುವುದು, ಯಾತ್ರಾರ್ಥಿಗಳ ವಿವರಗಳನ್ನು ಜೆದ್ದಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಗೆ ರವಾನೆ ಮಾಡುವುದು, ವಿಮಾನ ಪ್ರಯಾಣದ ವಿಂಗಡಣೆಯ ಉಸ್ತುವಾರಿ ನಡೆಸುವುದು ಹಾಗೂ ಮೆಕ್ಕಾ ಮತ್ತು ಮದೀನಾದಲ್ಲಿ ಯಾತ್ರಾರ್ಥಿಗಳ ವಸತಿ ವ್ಯವಸ್ಥೆಯನ್ನೂ ಮಾಡುವುದು ಹಾಗೂ ಯಾತ್ರಾರ್ಥಿಗಳ ಪ್ರಯಾಣಕ್ಕೆ ನೆರವು ನೀಡುವುದು ಮೊದಲಾದ ಕರ್ತವ್ಯಗಳನ್ನು ಈ ಹಜ್ ಸಮಿತಿಯು ನಿರ್ವಹಿಸಬೇಕಾಗುತ್ತದೆ.

ಅಷ್ಟೇ ಅಲ್ಲದೆ ಹಜ್ ಯಾತ್ರಾರ್ಥಿಗಳು 'ಅಲ್ಲಾಹನ ಅತಿಥಿ'ಗಳು ಎಂಬ ನಂಬಿಕೆಯಿರುವುದರಿಂದ ಹಾಜಿಗಳ ಸೇವೆ ಮಾಡುವುದು 'ಅಲ್ಲಾಹನ ಅತಿಥಿಗಳ' ಸೇವೆ ಎಂಬ ಭಾವನಾತ್ಮಕವಾದ ನಂಟು ಕೂಡಾ ಈ ನಿಟ್ಟಿನಲ್ಲಿ ಇದೆ. ಹೀಗಾಗಿ ಹಜ್ ಸಮಿತಿ ಎಂಬುದು ಅನೇಕ ಲೌಕಿಕ ಸಂಗತಿಗಳ ಕ್ರೋಢೀಕರಣದ ಸಮಿತಿಯಾದರೂ ಅಲೌಕಿಕವಾದ ಭಾವನಾತ್ಮಕ ಬಾಂಧವ್ಯವೂ ಕೂಡಾ ಈ ಸೇವೆಯಲ್ಲಿ ಶಾಮೀಲಾಗುವುದರಿಂದ ಹಜ್ ಸಮಿತಿಯೆಂಬುದು ಸೇವೆಯನ್ನು ಮುಖ್ಯ ಗುರಿ ಹೊಂದಿರುವ ಆಡಳಿತಾತ್ಮಕ ಸಂಸ್ಥೆಯಾಗಿದೆ.

ಇಷ್ಟೆಲ್ಲಾ ವಿವರಗಳನ್ನು ಈಗ ಯಾಕೆ ಪ್ರಸ್ತಾಪಿಸಬೇಕಾಯಿತೆಂದರೆ ಶ್ರದ್ಧಾಭಕ್ತಿಗಳಿಂದ ನಡೆಸಬೇಕಾದ ಧಾರ್ಮಿಕ ಸ್ವರೂಪದ ಕಾರ್ಯಗಳನ್ನು ಕೂಡ ರಾಜಕೀಯ ವ್ಯಕ್ತಿಗಳು ಹೇಗೆ ಕಲುಷಿತಗೊಳಿಸುತ್ತಾರೆಂಬುದಕ್ಕೆ ತಾಜಾ ನಿದರ್ಶನವೆಂದರೆ ಡಿ.27ರಂದು ಹಜ್ ಸಮಿತಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲ್ಪಟ್ಟ ಜುಲ್ಫಿಕಾರ್ ಅಹ್ಮದ್ ಅಲಿಯಾಸ್ ಟಿಪ್ಪೂವಿನ ವೃತ್ತಾಂತ. ರಾಜ್ಯ ಸರ್ಕಾರದ ಸದರಿ ಆದೇಶದನ್ವಯ ಹಜ್ ಸಮಿತಿಯ ತನ್ನ ಸದಸ್ಯತ್ವವನ್ನು ಕೂಡ ಕಳೆದುಕೊಂಡಿರುವ ಈ ಟಿಪ್ಪೂ ಬೆಂಗಳೂರಿನ ಚಾಮರಾಜಪೇಟೆಯ ವಿಧಾನಸಭಾ ಸದಸ್ಯರಾದ ಜಮೀರ್ ಅಹ್ಮದ್‌ರವರ ಆಪ್ತ ಈ ಅರ್ಹತೆಯ ಮೇರೆಗೆ ರಾಜ್ಯದಲ್ಲಿ ಹೆಚ್.ಡಿ.ಕುಮಾರಸ್ವಾಮಿಯುವರ ಆಡಳಿತವಿದ್ದಾಗ 2006ರಲ್ಲಿ ಹಜ್ ಸಮಿತಿಯ ಸದಸ್ಯರಾಗಿ ಮತ್ತು ಆ ಮೂಲಕ ಸಮಿತಿ ಸದಸ್ಯರ ಸರ್ವಾನುಮತದ ಆಯ್ಕೆಯ ಮೇರೆಗೆ ಅಧ್ಯಕ್ಷರಾಗಿ ಅಧಿಕಾರವನ್ನು ನಿರ್ವಹಿಸಿದವರು.

ತನ್ನ ವಿವಾದಾಸ್ಪದ ನಡವಳಿಕೆಗಳನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇಲ್ಲವೆಂಬ ನಂಬಿಕೆಯಡಿಯಲ್ಲಿ ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿದ ಜುಲ್ಫಿಕಾರ್ ಅಹ್ಮದ್‌ಗೆ ಮಗ್ಗುಲ ಮುಳ್ಳಾಗಿ ತೊಡರಿದವರು ಅಬ್ದುಲ್ ಅಜೀಮ್. ಧಾರ್ಮಿಕ ಪಾಂಡಿತ್ಯ ಹೊಂದಿರುವ ಮೌಲ್ವಿಗಳು ಮತ್ತು ಇತರೆ ಸಾಮಾಜಿಕ ಹಿನ್ನಲೆಗಳಿಂದ ಕೂಡಿದ ಉಳಿದ ಸದಸ್ಯರು ಈ ಅಧ್ಯಕ್ಷರ ಅಕ್ರಮಗಳನ್ನು ಕಂಡೂಕಾಣದಂತೆ ಮೌನವಾದರು. ಮೌನದ ರಾಜಕಾರಣವೂ ಅಧರ್ಮಕ್ಕೆ ಮತ್ತು ಅನ್ಯಾಯಕ್ಕೆ ಪುಷ್ಟಿ ನೀಡುತ್ತದೆ ಎಂಬ ಸತ್ಯ ಕಣ್ಣೆದುರಿಗೆ ರಾಚುತ್ತಿದ್ದರೂ ಮೌನವಾದರು.

ಆದರೆ ಅಬ್ದುಲ್ ಅಜೀಮ್‌ನ ಹಿನ್ನೆಲೆ ಆ ರೀತಿಯದ್ದಾಗಿರಲಿಲ್ಲ, ಬೆಂಗಳೂರಿನ ಸಿಟಿ ಕ್ರೈಂ ಬ್ರಾಂಚ್‌ನಲ್ಲಿ ಎಸಿಪಿಯಾಗಿದ್ದ ಅಜೀಮ್ ಸೇವಾವಧಿಗಿಂತ ಮುಂಚೆಯೇ ನಿವೃತ್ತಿಯನ್ನು ಹೊಂದಿದ್ದಲ್ಲದೇ ಸಕ್ರಿಯ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರಾಜಕಾರಣದ ಸರ್ವಭಕ್ಷಣ ಪ್ರವೃತ್ತಿಗಿಂತ ಪೊಲೀಸ್ ಇಲಾಖೆಯ ತನಿಖಾ ಪ್ರವೃತ್ತಿಯೇ ಮೇಲುಗೈಯಾದಾಗ ಹಜ್ ಸಮಿತಿಯ ಅವ್ಯವಹಾರಗಳನ್ನು ಬಯಲಿಗೆಳೆಯಲು ಅಜೀಮ್ ತೀರ್ಮಾನಿಸಿದರು. ಹಾಲಿ ವಿಧಾನ ಸಭಾ ಪರಿಷತ್ ಸದಸ್ಯರಾಗಿರುವ ಅಬ್ದುಲ್ ಅಜೀಮ್ ಏಕಾಂಗಿಯಾಗಿ ಹೋರಾಟ ಮಾಡಲು ನಿರ್ಧರಿಸಿದರು.



ಅಬ್ದುಲ್ ಅಜೀಮ್

ಕರ್ನಾಟಕ ಹಜ್ ಕಮಿಟಿಯು, 2002ರ ಹಜ್ ಆಕ್ಟ್‌ನ ನಿಯಮಾವಳಿಯಡಿಯಲ್ಲಿ ಕೆಲಸ ನಿರ್ವಹಿಸಬೇಕಾಗುತ್ತದೆ. 2006ರ ಆಗಸ್ಟ್‌ನಲ್ಲಿ ರಾಜ್ಯ ಸರ್ಕಾರದಿಂದ ನಾಮಕರಣಗೊಂಡ ಈ ಸಮಿತಿಯ ಅವಧಿ 3 ವರ್ಷಗಳು 13 ಫೆಬ್ರವರಿ 2008ರಂದು ಅಬ್ದುಲ್ ಅಜೀಮ್ ಹಜ್ ಸಮಿತಿಯ ಅಧ್ಯಕ್ಷರ ವಿರುದ್ಧ ಅನೇಕ ಆರೋಪಗಳನ್ನು ಮಾಡಿದ್ದು, ಸದರಿ ಆರೋಪಗಳ ಬಗ್ಗೆ ತನಿಖೆ ಕೈಗೊಳ್ಳಬೇಕೆಂದು ಕೋರಿ ರಾಜ್ಯಪಾಲರಾದ ರಾಮೇಶ್ವರ್ ಠಾಕೂರ್‌ರವರಿಗೆ ಅರ್ಜಿಯೊಂದನ್ನು ಸಲ್ಲಿಸಿದರು. ಈ ಆರೋಪಗಳಲ್ಲಿ ಪ್ರಮುಖವಾದದ್ದೆಂದರೆ,

ಕೇಂದ್ರ ಹಜ್ ಕಮಿಟಿಯು 2007ರ ಹಜ್‌ನ ಸಂದರ್ಭದಲ್ಲಿ ಕರ್ನಾಟಕದಿಂದ 6405 ಯಾತ್ರಾರ್ಥಿಗಳೆಂದು ಕೋಟಾವನ್ನು ನಿಗದಿಗೊಳಿಸಿತ್ತು ಹಾಗೂ ಕರ್ನಾಟಕದ 29 ಜಿಲ್ಲೆಗಳಲ್ಲಿ ಅಲ್ಲಿನ ಮುಸ್ಲಿಮರ ಜನಸಂಖ್ಯೆಯ ಅನುಪಾತದ ಮೇರೆಗೆ ಯಾತ್ರಾರ್ಥಿಗಳ ಸಂಖ್ಯೆಯನ್ನು ನಿಗದಿಗೊಳಿಸಬೇಕೆಂದು ಆದೇಶಿಸಿತ್ತು, ಆದರೆ ಅಧ್ಯಕ್ಷರು ಸದರಿ ಆದೇಶವನ್ನು ಬದಿಗೊತ್ತಿ ಕಳೆದ 3 ವರ್ಷಗಳಲ್ಲಿ ಆಯಾ ಜಿಲ್ಲೆಯ ಯಾತ್ರಾರ್ಥಿಗಳ ಸರಾಸರಿ ಸಂಖ್ಯೆ ಮೇಲೆ, ಆಯಾ ಜಿಲ್ಲೆಯ ಕೋಟಾವನ್ನು ನಿರ್ಧರಿಸಿದರು. ಹೀಗೆ ಮಾಡಲು ಅಧ್ಯಕ್ಷರಿಗೆ ಯಾವ ಅಧಿಕಾರವೂ ಇರಲಿಲ್ಲ, ಈ ಕ್ರಮದ ಮೂಲಕ ನ್ಯಾಯವಾಗಿ ಯಾವ ವ್ಯಕ್ತಿಗಳಿಗೆ ಹಜ್‌ಗೆ ಹೋಗಲು ಅವಕಾಶ ದೊರಕಬೇಕಿತ್ತೋ ಅದನ್ನು ವ್ಯವಸ್ಥಿತವಾಗಿ ದುರುದ್ದೇಶ ಪೂರ್ವಕವಾಗಿ ತಪ್ಪಿಸಿದರು ಹಾಗೂ ಈ ಅವಕಾಶವನ್ನು ತಮ್ಮ ಹಿಂಬಾಲಕರಿಗೆ ನೀಡಿ ಅವರನ್ನು ಸಂಪ್ರೀತಗೊಳಿಸಿದರು.

ಸಾಮಾನ್ಯವಾಗಿ ಪ್ರತಿವರ್ಷವೂ ನಿಗದಿತ ಕೋಟಾಗಿಂತ ಹೆಚ್ಚಿನ ಯಾತ್ರಾರ್ಥಿಗಳ ಅರ್ಜಿಗಳು ಹಜ್ ಸಮಿತಿಗೆ ತಲುಪಿರುತ್ತದೆ. ಹೀಗಾದಾಗ ಲಾಟರಿಯ ಮೂಲಕ ಅರ್ಜಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಬಗ್ಗೆ ದಿನಾಂಕ 23-07-2007ರಂದು ವಿಧಾನಸೌಧದ ಕಾನ್‌ಫರೆನ್ಸ್ ಹಾಲ್‌ನಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿಯವರಿಂದ ಲಾಟರಿ ಎತ್ತಿಸಲಾಗಿತ್ತು, ಆದರೆ ಆ ಲಾಟರಿಯ ಫಲಿತಾಂಶವನ್ನು ಅಧ್ಯಕ್ಷರು ಪ್ರಕಟಿಸಲೇ ಇಲ್ಲ, ಎರಡು ದಿನಗಳ ನಂತರ ಕೇಂದ್ರ ಸಮಿತಿಗೆ ಕಳುಹಿಸಲಾದ ಆ ಲಿಸ್ಟ್‌ನಲ್ಲಿ ಅಧ್ಯಕ್ಷರ ಕೈವಾಡ ಸ್ಪಷ್ಟವಾಗಿತ್ತು, ಲಾಟರಿ ಮೂಲಕ ಆಯ್ಕೆಯಾಗಿದ್ದ ಅನೇಕ ಯಾತ್ರಾರ್ಥಿಗಳು ಅವಕಾಶ ವಂಚಿತರಾಗಿದ್ದರು.

ಈ ಹೇರಾ-ಫೇರಿಯಿಂದ ಕಂಗೆಟ್ಟ ಕೇಂದ್ರ ಸಮಿತಿಯು 355 ಯಾತ್ರಾರ್ಥಿಗಳ ಹೆಸರನ್ನು ಪಟ್ಟಿಯಿಂದ ಕಿತ್ತುಹಾಕಿತ್ತು, 40 ಯಾತ್ರಾರ್ಥಿಗಳು ವೇಟಿಂಗ್ ಲಿಸ್ಟ್‌ನಲ್ಲಿದ್ದರು. ಈ ಎಲ್ಲಾ ಲೋಪಗಳನ್ನು ಸರಿಪಡಿಸಲು ಕೇಂದ್ರ ಸಮಿತಿಯು ಹೆಚ್ಚುವರಿಯಾಗಿ 558 ಯಾತ್ರಾರ್ಥಿಗಳ ಕೋಟಾವನ್ನು ಮಂಜೂರು ಮಾಡಿತ್ತು, ಈ ಕೋಟಾದ ಯಾತ್ರಾರ್ಥಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಬೇಕಿತ್ತು, ಆದರೆ ಇತರೇ ಸದಸ್ಯರ ಅಭಿಪ್ರಾಯವನ್ನು ಪಡೆಯದೇ, ಹಜ್ ಸಮಿತಿಯ ಎಕ್ಸಿಕ್ಯೂಟಿವ್ ಆಫೀಸರ್‌ರವರನ್ನು ಕೂಡಾ ಅಲಕ್ಷಿಸಿ ಅಧ್ಯಕ್ಷರು ಆಯ್ಕೆಯ ವ್ಯಕ್ತಿಗಳನ್ನು ಹಜ್‌ಗೆ ಕಳುಹಿಸಿ ಪುಣ್ಯ ಸಂಪಾದಿಸಿದರು.

ಕೇಂದ್ರ ಹಜ್ ಸಮಿತಿಯು ಯಾತ್ರಾರ್ಥಿಗಳ ಆಯ್ಕೆಯ ಪ್ರಕ್ರಿಯೆಗಾಗಿ ಫ್ರೀ ಸಾಫ್ಟ್‌ವೇರ್ ಅನ್ನು ಹಜ್ ಸಮಿತಿಗೆ ಕಳುಹಿಸಿತ್ತು, ಅದನ್ನು ಮೂಲೆಗೆಸೆದ ಅಧ್ಯಕ್ಷರು ತಮ್ಮ ಸ್ವಂತ ಪಡ್ಡಕನಾದ ಸನಾವುಲ್ಲಾನ ಒಡೆತನದ ಮೆಸರ್ಸ್ ಸಿಸ್ಟೆ ಸಲ್ಯೂಷನ್ಸ್ ಅಂಡ್ ಟೆಕ್ನಾಲಜಿ ಸಂಸ್ಥೆಯಿಂದ ಹೊಸ ಸಾಫ್ಟ್‌ವೇರ್ ಪಡೆದು ಅದಕ್ಕೆ ಲಕ್ಷಾಂತರ ರೂ. ನೀಡಿ ಕೃತಾರ್ಥರಾದರು. ಅಷ್ಟೇ ಅಲ್ಲದೇ ಅಧ್ಯಕ್ಷರು ಆಸೀನರಾಗುವ ಛೇಂಬರ್ ಜೊತೆಲೇ ಅಲಂಕೃತವಾಗಿ[illegible] ಪುನರ್ ನವೀಕರಣಕ್ಕೆ, ಎಂದು [illegible] 24,84,217/- ವೆಚ್ಚ ಮಾಡಿದ್ದು [illegible] ಹಿನ್ನೆಲೆಯಲ್ಲಿ ಟೆಂಡರ್‌ನ ನಿಯಮಾವಳಿಗ[illegible] ಗಾಳಿಗೆ ತೂರಿದ್ದಾರೆ. ಇಷ್ಟಕ್ಕೆ ಮುಗೀ[illegible] ಅಂದರೆ.... ಇಲ್ಲ.... ಇನ್ನೂ ಕರ್ಮಕಾ[illegible] ಆರೋಪಗಳ ಪಟ್ಟಿ ಅಜೀಮ್‌ರವರಿ[illegible] ಮುಂದುವರೆಯುತ್ತದೆ.


ಈ ಎಲ್ಲಾ ಆರೋಪಗಳ ಬಗ್ಗೆ ಸರ್ಕಾ[illegible] ಮಾರ್ಚ್ 20, 2008ರಂದು ಸಂಖ್ಯೆMW[illegible] 02 WHJ 2008ರ ಸುತ್ತೋಲೆ ಮೂ[illegible] ಅಲ್ಪಸಂಖ್ಯಾತ ಇಲಾಖೆಯ ನಿರ್ದೇಶಕರ[illegible] ಎನ್.ಎಂ. ಪನಾಲಿಯವರಿಗೆ ಆದೇಶ ನ[illegible] ತನಿಖೆ ನಡೆಸುವಂತೆ ಕೋರಿತ್ತು, ಎನ್.[illegible] ಪನಾಲಿಯವರು ಸಂಖ್ಯೆ DM/PS/HA[illegible] Com/CR 43/2007-08ರ ಪತ[illegible] ಮೂಲಕ ಏಪ್ರಿಲ್ 8, 2008ರಂದು ತ[illegible] ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ[illegible] ಹಾಗೂ ಅಧ್ಯಕ್ಷರು ಮೇಲ್ನೋಟಕ್ಕೆ ಅವ್ಯವಹ[illegible] ಮಾಡಿರುವುದು ಕಂಡುಬಂದಿದೆಯೆಂದು ಅಭಿಪ್ರಾ[illegible] ಪಟ್ಟರು. ಸರ್ಕಾರವು ಅಧ್ಯಕ್ಷರಿಗೆ ಷೋಕಾಸ್ ನೋಟೀ[illegible] ಅನ್ನು ನೀಡಿದ್ದು ಅಧ್ಯಕ್ಷರು ಜೂನ್ 16, 2008ರಂ[illegible] ಉತ್ತರ ನೀಡಿ ತಮ್ಮ ಮೇಲಿನ ಎಲ್ಲಾ ಆರೋಪಗಳ[illegible] ಅಲ್ಲಗಳೆದರು. ಸತ್ಯಾಸತ್ಯತೆಗಳನ್ನು ಪರಿಶೀಲನೆ ಮಾಡಿ[illegible] ಸರ್ಕಾರವು ತನ್ನ ಸುತ್ತೋಲೆ ಸಂಖ್ಯೆ MWD 0[illegible] WHO 2008ರ ಜೂನ್ 27, 2008ರ ಜುಲ್ಫಿಕ[illegible] ಅಹ್ಮದ್ ಟಿಪ್ಪೂವನ್ನು ಅಧ್ಯಕ್ಷಗಿರಿಯಿಂದ ಹಾಗ[illegible] ಸದಸ್ಯತ್ವದಿಂದ ವಜಾಗೊಳಿಸಿತ್ತು.

ಟಿಪ್ಪೂವಿಗೆ ಇದ್ದಿದ್ದೊಂದೇ ದಾರಿ. ಸೀದಾ ಉ[illegible] ನ್ಯಾಯಾಲಯದ ಬಾಗಿಲು ಬಡಿದು, ರಿಟ್ ಸಂಖ್ಯೆ 935[illegible] 2008ರಲ್ಲಿ ನ್ಯಾಯ ಕೋರಿದರು. ಉಚ್ಚ ನ್ಯಾಯಾಲಯ[illegible] ಟಿಪ್ಪೂವಿಗೆ ತಮ್ಮ ಸಮರ್ಥನೆಗಾಗಿ ಒಂದು ಅವಕಾಶವ[illegible] ಕಲ್ಪಿಸಿಕೊಡಬೇಕೆಂದು ಆದೇಶಿಸಿತು. ಆ ಮೇರೆಗೆ ಮ[illegible] ಅಧ್ಯಕ್ಷಗಿರಿಗೆ ಜೀವದಾನವಾಯಿತು. ಅಷ್ಟರಲ್ಲಿಯೇ ರಾ[illegible] ಸರ್ಕಾರವು ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿಯಾ[illegible] ಸನಾವುಲ್ಲಾರವರಿಗೆ ಪ್ರಕರಣದ ಸುನಾವಣೆಯನ[illegible] ಮಾಡಬೇಕೆಂದು ಆದೇಶಿಸಿತು. ಪ್ರಕರಣದಲ್ಲಿ ಸಾ[illegible] ವಿಚಾರಣೆ, ಕಡತ ಪರಿಶೀಲನೆ, ಎಲ್ಲವನ್ನು ಮಾಡಿ[illegible] ನಂತರ ಹಜ್‌ಗೆ ಆಯ್ಕೆಯಾದವರ ಮೂಲಪ[illegible] ಕಾಣೆಯಾಗಿರುವ ಸಂಗತಿ, ಕೇಂದ್ರ ಸಮಿತಿಯ ಸಾಫ್ಟ್‌ವೇ[illegible] ಬದಲಿಗೆ ಹಣ ನುಂಗಿದ ಸಾಫ್ಟ್‌ವೇರ್ ಬಳಕೆ, ಆಫೀ[illegible] ಪುನರ್ ನವೀಕರಣ ಮೊದಲಾದ ಅನೇಕ ಆರೋಪಗ[illegible] ಸ್ಥಿರವಾದವು. ಎನ್.ಎಂ.ಪನಾಲಿಯವರ ವರದಿಯ ಬ[illegible] ಏನೋ ಒಂದಿಷ್ಟು ಅಪನಂಬಿಕೆ ಇದ್ದಿದ್ದರೂ ಅದೆಲ್ಲವ[illegible] ನಿವಾರಿಸಲ್ಪಟ್ಟು ಸಂಶಯಾತೀತವಾಗಿ ಆರೋಪಗ[illegible] ಸಾಬೀತಾದ್ದರಿಂದ ರಾಜ್ಯ ಸರ್ಕಾರವು ಜುಲ್ಫಿಕರ್ ಅಹ್ಮ[illegible] ಟಿಪ್ಪೂವನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂ[illegible] ವಜಾಗೊಳಿಸುವ ಆದೇಶವನ್ನು 27-12-2008ರಂ[illegible] ಮಾಡಿತು.

ಮುಸ್ಲಿಮರಿಗೆ ಇಹಲೋಕಕ್ಕಿಂತ ಪರಲೋಕ[illegible] ಬದುಕಿನ ಬಗ್ಗೆ ಅಪಾರ ನಂಬಿಕೆ ಮತ್ತು ವಿಶ್ವಾ[illegible] ಇಹಲೋಕದ ತೀರ್ಪೇನೋ ಬಂದಾಯಿತು. ಪರಲೋಕ[illegible] ತೀರ್ಪಿನ ಗತಿಯೇನು? ಜುಲ್ಫಿಕರ್ ಅಹ್ಮದ್ ಟಿಪ್ಪೂವಿ[illegible] ಕಾರಸ್ಥಾನದಿಂದ ಹಜ್ ಯಾತ್ರೆಯಿಂದ ವಂಚಿತರಾ[illegible] ಯಾತ್ರಾರ್ಥಿಗಳು ಸಾಲುಗಟ್ಟಿ ಅವರ ವಿರುದ್ಧ ನ್ಯಾ[illegible] ತೀರ್ಮಾನವನ್ನು ಕೇಳಿದಲ್ಲಿ , ಅವರನ್ನು ಅಲ್ಲಾಹ[illegible] ರಕ್ಷಿಸಬೇಕು. ಅಬ್ದುಲ್ ಅಜೀಮ್‌ರವರ ಏಕಾಂ[illegible] ಹೋರಾಟಕ್ಕೆ ಹಜ್ ಸಮಿತಿಯ ಇತರೆ ಸದಸ್ಯ[illegible] ಯಾಕೆ ಕೈಜೋಡಿಸಲಿಲ್ಲ ಎಂಬುದು ಕೊನೆಗೂ ತಿಳಿಯ[illegible] ವಿಷಯ. ಮೌನ ಪ್ರೇಕ್ಷಕರಾಗಿ ಉಳಿದ ಹಜ[illegible] ಸಮಿತಿಯ ಇತರೆ ಸದಸ್ಯರನ್ನು ಕೂಡಾ ಆ ಅಲ್ಲಾಹ[illegible] ಕಾಪಾಡಬೇಕು.

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು



ಅಕ್ಷರ ರೂಪ: ಅಕ್ಷತಾ ಕೆ.

ಒಂದು ರೂಪಾಯಿ ದುಡ್ಡಿರಲಿಲ್ಲ. ಅಭ್ಯರ್ಥಿ ಕೈಲೂ ದುಡ್ಡಿಲ್ಲ, ಪಾರ್ಟಿಯಲ್ಲಂತೂ ಇಲ್ಲವೇ ಇಲ್ಲ. ಸೋತೆ ಸೋಲ್ತೀವಿ ಅಂತ ಖಡಾಖಂಡಿತವಾಗಿರುವಾಗ 'ಒಂದು ಓಟು ಕೊಡಿ, ಜೊತೆಗೆ ಒಂದು ನೋಟು ಕೊಡಿ' ಎಂದು ಮತದಾರರ ಕೈಲೇ ಓಟಿನ ಜೊತೆ ನೋಟನ್ನು ಬೇಡ ತೊಡಗಿದ್ವಿ. ಒಂದು ನೋಟು ಒಂದು ಓಟು ಎರಡನ್ನೂ ಜನ ಕೊಟ್ಟಿದ್ದರು. ಹತ್ತು ಸಾವಿರದಷ್ಟು ಹಣ ಸಂಗ್ರಹವಾಗಿದ್ದರೆ ಚುನಾವಣೆಯಲ್ಲಿ ಎರಡು ಸಾವಿರದ ಐನೂರಕ್ಕೂ ಹೆಚ್ಚಿನ ಮತದ ಅಂತರದಿಂದ ಲಿಂಗಪ್ಪ ಗೆದ್ದಿದ್ದರು.

ಮಫ್ಲರ್ ಹಿಡಿದು ಗೆದ್ದು ಬಂದ ಕೋಣಂದೂರು ಲಿಂಗಪ್ಪ

ಯಾವಾಗ ಸಮಾಜವಾದಿ ಪಕ್ಷದಿಂದ ಲಿಂಗಪ್ಪನವರಿಗೆ ಟಿಕೆಟ್ ಸಿಕ್ಕಿತು ಅಂತ ತಿಳಿಯಿತೋ ತೀರ್ಥಹಳ್ಳಿಯ ವಿರೋಧ ಪಕ್ಷದ ಪಾಳಯದಲ್ಲಿ ಸಂತೋಷದ ಅಲೆಯೇ ಎದ್ದಿತು. ಹಣ, ಜಾತಿ ಯಾವ ಬೆಂಬಲವೂ ಇಲ್ಲದ ಲಿಂಗಪ್ಪ ಗೆಲ್ಲಲಿಕ್ಕೆ ಸಾಧ್ಯವೇ ಇಲ್ಲ ಎಂಬ ನಿರ್ಧಾರಕ್ಕೆ ಅವರು ಬಂದು ಬಿಟ್ಟಿದ್ದರು. ಅವರಿರಲಿ, ಗೋಪಾಲಗೌಡ್ರ ಜೊತೆಗಾರರಲ್ಲೆ ಈ ಬಗ್ಗೆ ಅಸಮಾಧಾನವಿತ್ತು. 'ಲಿಂಗಪ್ಪನ್ನ ನಿಲ್ಲಿಸಿದೀರಿ, ಸೋತೆ ಸೋಲ್ತೀರಿ. ನೋಡ್ತಾ ಇರಿ' ಎಂದು ನಮ್ಮೆದುರಿಗೆ ಘೋಷಿಸಿದವರಿದ್ದರು. ಎನ್.ಡಿ.ಸುಂದ್ರೇಶ್ ಅಣ್ಣ ಶ್ರೀನಿವಾಸ್ ಮತ್ತು ತೀರ್ಥಹಳ್ಳಿಯ ಜವಳಿ ಅಂಗಡಿ ಓನರ್ ಬಿ.ಎನ್. ಕೃಷ್ಣಮೂರ್ತಿ ಮತ್ತಿತರ ಸಮಾಜ ವಾದಿಗಳು ನಮ್ಮನ್ನು ಕಂಡದ್ದೆ 'ಕಾಂಗ್ರೆಸ್, ಕಮ್ಯುನಿಸ್ಟ್ ನವರು ಒಂದು ರೌಂಡ್ ಪ್ರಚಾರವನ್ನು ಮುಗಿಸಿ ಆಗಿದೆ. ಈಗ ನೀವು ಲಿಂಗಪ್ಪನ್ನ ನಿಲ್ಲಿಸಿಕೊಂಡು ಪ್ರಚಾರ ಪ್ರಾರಂಭಿಸಿದೀರಲ್ಲ, ಇದೇನು ನಾಟಕದ ಕಂಪನಿ ತರ ಅಂದುಕೊಂಡಿದ್ದೀರಾ?' ಎಂದು ಬಾಯಿಗೆ ಬಂದ ಹಾಗೆ ಬಯ್ದಿದ್ದರು. ಅವರಿಗೆಲ್ಲ 'ಹೌದು ಸೋಲಕ್ಕಾಗೆ ನಿಂತಿದೀವಿ ಏನೀಗ?' ಎಂಬ ಒಂದೆ ಸಾಲಿನ ಪ್ರಶ್ನೆಗೆ ಪ್ರಶ್ನೆ ನಮ್ಮಿಂದ ಸಿದ್ಧವಿರುತ್ತಿತ್ತು. ಲಿಂಗಪ್ಪ ಆಗ ಬೆಂಗಳೂರಿನಲ್ಲಿ ಮೇಷ್ಟ್ರಾಗಿದ್ದರಲ್ಲ, ಅವರಿಗೆ ಹೇಳಿಬಿಟ್ಟದ್ದೆ 'ಗೆದ್ದರೆ ಶಾಸಕರಾಗ್ತೀರ, ಅದು ಬೇರೆ ಮಾತು. ಆದರೆ ಒಂದ್ವೇಳೆ ಸೋತರೆ ಅದನ್ನ ಮನಸಿಗೆ ಹಚ್ಚಿಕೊಳ್ಳದೆ ಮತ್ತೆ ವಾಪಾಸ್ ಮೇಷ್ಟ್ರ ಕೆಲಸಕ್ಕೆ ಹೋಗಬೇಕು. ಯಾವುದೇ ಕಾರಣಕ್ಕೂ ಈಗಲೇ ಕೆಲಸಕ್ಕೆ ರಾಜಿನಾಮೆ ಕೊಡಬೇಡಿ' ಎಂದು.

ಬಿ ಫಾರಂ ಸಿಕ್ಕಿದ ಮರುದಿನವೇ ಲಿಂಗಪ್ಪ ಮತ್ತು ನಾವೆಲ್ಲ ಬೆಂಗಳೂರಿಗೆ ಗೋಪಾಲ ಗೌಡ್ರ ಆಶೀರ್ವಾದ ಪಡೆದು ಬರಲು ಹೋದ್ವಿ. ಮಾತಾಡಲೂ ಶಕ್ತಿಯಿಲ್ಲದ ಗೌಡರು ಕಣ್ಣೀರು ಹಾಕುತ್ತಾ ನಮ್ಮನ್ನು ಹರಸಿದರು. ಬರ್ತಾ ಲಿಂಗಪ್ಪ ಇದ್ದವರು ಗೌಡರ ಹಾಸಿಗೆ ಪಕ್ಕದಲ್ಲಿದ್ದ ಅವರ ಮಫ್ಲರ್ ತೆಗೆದುಕೊಂಡು ಬಂದರು. ಹಸಿರು ಬಣ್ಣದ ಈ ಮಫ್ಲರ್ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿತು. ಎಲ್ಲಿ ಹೋದರೂ ಮಫ್ಲರ್ ತೋರಿಸಿ 'ಗೋಪಾಲಗೌಡರು ಆಶೀರ್ವಾದ ಮಾಡಿ ಈ ಮಫ್ಲರ್ ಕೊಟ್ಟು ಕಳಿಸಿದ್ದಾರೆ. ನೀವು ನನಗೆ ಓಟು ಕೊಟ್ಟು ಗೆಲ್ಲಿಸಿದರೆ ಗೌಡರನ್ನೆ ಗೆಲ್ಲಿಸಿದ ಹಾಗೆ. ಅವರು ಓಟು ಕೇಳಲು ಬರೋ ಸ್ಥಿತಿಯಲ್ಲಿ ಇಲ್ಲದೇ ಇರೋದ್ರಿಂದ ತಮ್ಮ ಪರವಾಗಿ ಈ ಮಫ್ಲರ್ ಕಳಿಸಿದ್ದಾರೆ. ಈ ಮಫ್ಲರ್ ನೋಡಿ ಓಟು ಕೊಡಿ' ಎಂದು ಲಿಂಗಪ್ಪ ಭಾಷಣ ಮಾಡುವುದು ಜನರನ್ನು ಭಾವನಾತ್ಮಕವಾಗಿ ಹಿಡಿದಿಟ್ಟಿತು. ಗೌಡ್ರು ಹಾಸಿಗೆ ಹಿಡಿದಿರೋ ಹೊತ್ತಿಗೆ ಅವರನ್ನು ಕೈ ಬಿಡಬಾರದು. ಅವರು ಯಾರಿಗೆ ಹೇಳಿದಾರೋ ಅವರಿಗೆ ನಾವು ಓಟು ಹಾಕಬೇಕು ಎಂಬ ಭಾವನೆ ಜನರಲ್ಲಿ ಬೆಳೆಯಿತು. ಇಷ್ಟಕ್ಕೆಲ್ಲ ಕಾರಣವಾಯಿತು ಗೌಡರ ಈ ಮಫ್ಲರ್.



ಕೋಣಂದೂರು ಲಿಂಗಪ್ಪ

ಆದರೆ ಒಂದೆ ದಿನದಲ್ಲಿ ಈ ಭಾವನೆ ಜನರಲ್ಲಿ ಗಟ್ಟಿಗೊಂಡಿದ್ದೇನು ಅಲ್ಲ. ಇದು ನಿಧಾನಕ್ಕೆ ಆದ ಬೆಳವಣಿಗೆ. ಚುನಾವಣಾ ಕಣಕ್ಕೆ ಲಿಂಗಪ್ಪನ ಇಳಿಸಿ ಪ್ರಚಾರಕ್ಕೆ ಅಂತ ಹೊರಟ್ವಲ್ಲ ಆಗ ಪ್ರಾರಂಭದ ಹಂತದಲ್ಲೇ ಬಹಳ ಭ್ರಮನಿರಸನವನ್ನೆ ಅನುಭವಿಸಿದ್ವಿ. ತೇಜಸ್ವಿ, ನಂಜುಂಡಸ್ವಾಮಿ ಮತ್ತು ನಾನು ಪ್ರಚಾರಕ್ಕೆ ಅಂತ ಮೊದಲಿಗೆ ರಂಜದಕಟ್ಟೆ ಕೈಮರ ಅನ್ನೋ ಊರಿಗೆ ಪಾದಯಾತ್ರೆಯಲ್ಲಿ ಹೋದರೆ ನಮ್ಮ ಭಾಷಣ ಕೇಳಲಿಕ್ಕೆ ಒಂದಾನೊಂದು ನರಪಿಳ್ಳೆಯೂ ಇರಲಿಲ್ಲ. ತೇಜಸ್ವಿ ಅಂತೂ 'ಶಾಮಣ್ಣ ನಾವೇನು ಎದುರುಗಡೆಯ ಟಾರ್ ರಸ್ತೆಗೆ ಭಾಷಣ ಮಾಡೋದೇನ್ರಿ? ನಡೀರಿ ವಾಪಸ್ ಹೋಗೋಣ' ಅಂತ ಕೂತ್ಕಂಬಿಟ್ಟಿದ್ದರು. 'ಈ ಊರುಗಳ ಮೇಲೆ ಕಮ್ಯುನಿಸ್ಟ್ ಪಾರ್ಟಿಯ ಅಪ್ಪಣ್ಣ ಹೆಗ್ಡೆಯವರ ಸ್ಟ್ರಾಂಗ್ ಹೋಲ್ಡ್ ಇದೆ. ಇಲ್ಲಿನ ದೊಡ್ಡ ದೊಡ್ಡ ಭೂಮಾಲೀಕರತ್ರ, ವ್ಯಾಪಾರಸ್ಥರತ್ರ ಸಾಮಾನ್ಯ ಜನ ಸಾಲ ಮಾಡ್ಕಂಬಿಟ್ಟಿರ್ತಾರೆ. ಸಾಲ ಕೊಟ್ಟವರು ಅಪ್ಪಣ್ಣ ಹೆಗ್ಡೆಯವರ ಹಿಂಬಾಲಕರು. ಆದ್ದರಿಂದ ನಮ್ಮ ಸಭೆಗೆ ಬಂದು ಸಾಲ ಕೊಟ್ಟ ದೊಡ್ಡ ಮನುಷ್ಯರನ್ನ ಎದುರಾಕ್ಕಳಕ್ಕೆ ಹೆದರ್ತಾರೆ. ಆದರೆ ಅವರ ಬಗ್ಗೆ ಒಳಗೊಳಗೆ ಒಂದು ನಮೂನಿ ಸಿಟ್ಟಿರತ್ತೆ. ಅದಕ್ಕೆ ಅವರ ಬಗ್ಗೆ ನಾವೇನು ಹೇಳ್ತೀವಿ ಅಂತ ಮನೆ ಒಳಗಿಂದಲೇ ಕಿವಿ ಕೊಟ್ಟು ಕೇಳಿಸ್ಕಂತಿರ್ತಾರೆ. ನೀವು ಮಾತಾಡಿ' ಅಂತ ಪುಸಲಾಯಿಸಿ ಒಪ್ಪಿಸಿದೆ. ತೇಜಸ್ವಿ ಭಾಷಣದಲ್ಲಿ ಅದನ್ನೇ ಹೇಳಿದರು. 'ಇಲ್ಲಿ ನನ್ನ ಮಾತನ್ನು ಕೇಳುವವರು ಇದಾರೆ ಅಂತ ಶಾಮಣ್ಣ ಹೇಳ್ತಾರೆ. ಆದರೆ ನನ್ನ ಕಣ್ಣಿಗಂತೂ ಒಬ್ಬರೂ ಕಾಣ್ತಾ ಇಲ್ಲ, ಎಲ್ಲರು ಮನೆಯ ಕಿಟಕಿಗೆ ಕಿವಿ ಕೊಟ್ಟು ಕೇಳ್ತಾ ಇದಾರೆ ಅನ್ನೋ ವಿಶ್ವಾಸದಲ್ಲಿ ಮಾತಾಡ್ತಿದೀನಿ' ಎಂದು ಕಮ್ಯುನಿಸ್ಟರಿಂದ ಆಗೋ ಅಪಾಯವೇನು, ಕಮ್ಯೂನಿಸ್ಟ್ ಚಳುವಳಿ ಬೇರೆ ದೇಶದಲ್ಲಿ ಯಾವ ರೀತಿ ಅವಘಡ ಮಾಡಿದೆ ಅಂತೆಲ್ಲ ಮನ ಮುಟ್ಟೊ ಹಾಗೆ ಹೇಳಿದ್ರು. ಎಷ್ಟೊ ಊರುಗಳಲ್ಲಿ ನಮ್ಮ ಸಭೆಗೆ ಒಂದು ಚಪ್ಪರ ಹಾಕಿ ಮೂರು ಕುರ್ಚಿ ಇಡಕ್ಕೂ ಕಾರ್ಯಕರ್ತರು ಇರ್ತಿರಲಿಲ್ಲ, ರಂಜದಕಟ್ಟೆಯ ಸಭೆಯಲ್ಲೂ ಅಲ್ಲಿನ ಹೋಟೇಲಿನ ಮಾಲಿಕನ ಹತ್ತಿರ ಬೇಡಿ ಮೂರು ಕುರ್ಚಿ ಪಡೆದು ಸಭೆ ನಡೆಸಿದ್ವಿ. ಎಷ್ಟೋ ಊರುಗಳಲ್ಲಿ ಇಂಥದೇ ಸ್ಥಿತಿ. ಆದರೆ ಒಬ್ಬರು ಬಾರದಿದ್ದರೂ ಪ್ರಚಾರ ಭಾಷಣ ಮಾಡೇ ಮಾಡ್ತಿದ್ವಿ. ಹಂಗೆ ವಾಪಾಸ್ ಬರ್ತಿರಲಿಲ್ಲ. ಕೋಣಂದೂರು ಲಿಂಗಪ್ಪ ಒಳ್ಳೆ ಭಾಷಣಕಾರರು. ಜನಕ್ಕೆ ಅಪೀಲ್ ಆಗೋ ಹಂಗೆ ಮಾತಾಡೋ ಕಲೆಯಲ್ಲಿ ನುರಿತಿದ್ದವರು. ಅವರಿಗಂತೂ ಕಟ್ಟುನಿಟ್ಟಾಗಿ ಹೇಳಿಬಿಟ್ಟಿದ್ವಿ: ತೀರ್ಥಹಳ್ಳಿ ಪೇಟೆಗೆ ಕೊನೆಯ ಎರಡು ದಿನ ಇರ್ತಾನೆ ಬರಬೇಕು, ಅಲ್ಲಿತನಕ ಪೇಟೆಗೆ ಕಾಲಿಡಬಾರದು, ಒಂದು ಹಳ್ಳಿಯನ್ನೂ ಬಿಡದ ಹಾಗೆ ಮನೆಮನೆಗೆ ಹೋಗಿ ಓಟು ಕೇಳಬೇಕು ಅಂತ.

ಒಂದು ರೂಪಾಯಿ ದುಡ್ಡಿರಲಿಲ್ಲ, ಅಭ್ಯರ್ಥಿ ಕೈಲೂ ದುಡ್ಡಿಲ್ಲ, ಪಾರ್ಟಿಯಲ್ಲಂತೂ ಇಲ್ಲವೇ ಇಲ್ಲ, ನಮಗೆ ದುಡ್ಡು ಕೊಡೋ ಶ್ರೀಮಂತರು ಮೊದಲೇ ಇಲ್ಲ, ಗೌಡರಿಗಾದರೂ ಸಾಲ ಕೊಡುವವರು ಇದ್ದರು, ನಮಗ್ಯಾರು ಕೊಡ್ತಾರೆ, ಸೋತೆ ಸೋಲ್ತೀವಿ ಅಂತ ಖಡಾಖಂಡಿತವಾಗಿರುವಾಗ 'ಒಂದು ಓಟು ಕೊಡಿ, ಜೊತೆಗೆ ಒಂದು ನೋಟು ಕೊಡಿ' ಎಂದು ಮತದಾರರ ಕೈಲೇ ಓಟಿನ ಜೊತೆ ನೋಟನ್ನು ಬೇಡ ತೊಡಗಿದ್ವಿ. ಈಗಿನಷ್ಟು ಅಲ್ಲದಿದ್ದರೂ ಆಗಲೂ ಮತದಾರರಿಗೆ ಹಣ, ಹೆಂಡದ ಆಮಿಷ ತೋರಿಸಿ ಓಟು ಪಡೆಯುತ್ತಿದ್ದುದು ಸಾಮಾನ್ಯವಾಗಿತ್ತು, ಆದರೆ ನಾವು ಮತದಾರರ ಹತ್ತಿರ ಧನಸಹಾಯವನ್ನು ಯಾಚಿಸತೊಡಗಿದ್ದೆವು. ಈ ರೀತಿಯಲ್ಲೂ ನಿಜವಾದ ಸಮಾಜವಾದದ ಪ್ರಜ್ಞೆ ಕೆಲಸ ಮಾಡತೊಡಗಿತ್ತು. ಜನರಿಗಾಗಿ ಜನರಿಂದ ಆಯ್ಕೆಯಾಗುವ ಜನಪ್ರತಿನಿಧಿಗೆ ಚುನಾವಣೆಯ ಸಂದರ್ಭದಲ್ಲಾಗುವ ಖರ್ಚು ವೆಚ್ಚವನ್ನು ಜನರೇ ನೋಡಿಕೊಳ್ಳಬೇಕು. ಸಾರ್ವಜನಿಕರ ಹಣವಾದ್ದರಿಂದ ಪ್ರತಿ ಪೈಸೆಗೂ ಲೆಕ್ಕವಿಟ್ಟಿರಬೇಕು ಮತ್ತು ಮಿತವ್ಯಯದಿಂದ ಖರ್ಚು ಮಾಡಬೇಕು ಎಂಬ ತತ್ವ ಅನುಸರಿಸತೊಡಗಿದೆವು. ಎರಡೇ ಎರಡು ಕಾರುಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದು ಬಿಟ್ಟರೆ ಮತ್ತೊಂದು ವಾಹನ ಅಂತ ಇರಲಿಲ್ಲ, ಅಭ್ಯರ್ಥಿಗೆ ಒಂದು ಕಾರು ಕೊಟ್ಟಿದ್ವಿ, ಮತ್ತೊಂದು ಕಾರು ನರಸಿಂಹನದು. ಆತ ಗೋಪಾಲಗೌಡ್ರ ಕಾಲದಿಂದ ಸಮಾಜವಾದಿ ಪಕ್ಷದ ಸಕ್ರಿಯ ಕಾರ್ಯಕರ್ತ. ಪ್ರಚಾರಸಭೆಗೆ ಅತಿಥಿಗಳನ್ನು ಕರೆದುಕೊಂಡು ಹೋಗ್ತಿದ್ದವನು ಸಭೆ ಮುಗಿಯುವುದರೊಳಗೆ ಅವನು ಎರಡ್ಮೂರು ಹಳ್ಳಿಗಳಿಗೆ ಹೋಗಿ ಪಕ್ಷದ ಪರವಾಗಿ ಪ್ರಚಾರ ಮಾಡೋನು. ನಮ್ಮತ್ರ ಹ್ಯಾಂಡ್ ಬಿಲ್ ಮಾಡಿಸಕ್ಕೂ ದುಡ್ಡಿರಲಿಲ್ಲ, ಹಳ್ಳಿಹಳ್ಳಿಗೆ ಹೋಗಿ ಬಸ್ ಸ್ಟ್ಯಾಂಡ್ ಇದ್ದರೆ ಅದರ ಗೋಡೆ ಮೇಲೆ ಇಲ್ಲಾ ಅಂದರೆ ಬಾವಿಕಟ್ಟೆ, ಮನೆಗಳ ಗೋಡೆ ಮೇಲೆ ಸೀಮೆಸುಣ್ಣ ಸುಣ್ಣ ಎಲ್ಲ ತೆಗೆದುಕೊಂಡು ಬರೆದು ತಿಳಿಸ್ತಿದ್ವಿ. ನಮ್ಮ ಖಜಾಂಚಿ ಸುರೇಂದ್ರ ದುಡ್ಡು ಕಾಸಿನ ವಿಷಯದಲ್ಲಿ ತುಂಬಾ ಕಟ್ಟುನಿಟ್ಟು. ಹಾಗಿರದಿದ್ದರೆ ಆಗ್ತಾನೂ ಇರಲಿಲ್ಲ, ಒಂದು ಸರ್ತಿ ನಾನು ಎಂಟ್ಹತ್ತು ಜನರನ್ನ ಪಾರ್ಟಿ ಆಫೀಸ್ನಲ್ಲಿ ಒಟ್ಟು ಹಾಕಿಕೊಂಡು ಹರಟೆ ಹೊಡೀತಾ ಕಾಲಕಳೆದು ಅವರಿಗೆಲ್ಲ ಮಧ್ಯಾಹ್ನ ಊಟ ಹಾಕಿಸಿ ಐವತ್ತು ರೂಪಾಯಿ ಬಿಲ್ ಮಾಡಿದ್ದಕ್ಕೆ ಸುರೇಂದ್ರ ನನ್ನ ಮೇಲೆ ಕೂಗಾಡಿ ನಾಳೆಯಿಂದ ಯಾರೂ ಆಫೀಸ್‌ನಲ್ಲಿ ಇರಂಗಿಲ್ಲ ಎಂದು ಕಟ್ಟುನಿಟ್ಟು ಮಾಡಿದ್ದರು. ಆಯಾ ಗ್ರಾಮದ ಕಾರ್ಯಕರ್ತರು ಅವರವರ ಗ್ರಾಮದಲ್ಲೆ ಚುನಾವಣಾ ಪ್ರಚಾರ ಮಾಡಬೇಕು, ತಾಲ್ಲೂಕು ಕೇಂದ್ರಕ್ಕೆ ಬರುವ ಅವಶ್ಯಕತೆಯಿಲ್ಲ ಎಂದು ಕಡ್ಡಾಯ ಮಾಡಿದೆವು.



ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಾರ್ಟಿಗಳು ನಮ್ಮ ಎದುರಾಳಿಗಳು. ಕಾಂಗ್ರೆಸ್‌ನಿಂದ ಶ್ರೀಮಂತ ಕುಟುಂಬದ ಹಿನ್ನಲೆಯ ಕೆ.ಟಿ.ದಾನಮ್ಮ ಮತ್ತು ಕಮ್ಯುನಿಸ್ಟ್ ಪಕ್ಷದಿಂದ ವಕೀಲರಾದ ಅಪ್ಪಣ್ಣ ಹೆಗ್ಡೆಯವರು ಸ್ಪರ್ಧಿಸಿದ್ದರು. ಇಬ್ಬರೂ ಘಟಾನುಘಟಿಗಳು ಮತ್ತು ಇಬ್ಬರೂ ತಾಲ್ಲೂಕಿನಲ್ಲಿ ಬಹುಸಂಖ್ಯಾತರಾದ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಇಬ್ಬರೂ ನಮ್ಮ ನೆಂಟರು. ಇವರಿಬ್ಬರನ್ನು ಬಿಟ್ಟು ನಾನು ಲಿಂಗಪ್ಪನವರ ಪರ ನಿಂತಿರುವುದು ಎರಡು ಪಕ್ಷದವರಿಗೂ ಸಿಟ್ಟು ತರಿಸಿತ್ತು, ಚುನಾವಣಾ ಸಂದರ್ಭದಲ್ಲಿ ಹದಿನೈದು ದಿನ ಭಗವತಿಕೆರೆಗೆ ತಲೆನೇ ಹಾಕದೇ ಕಡಿದಾಳಿನಲ್ಲಿದ್ದು ಇಲ್ಲಿಂದಲೇ ಚುನಾವಣಾ ಪ್ರಚಾರಕ್ಕೆ ಹೋಗುತ್ತಿದ್ದೆ. ಒಂದು ದಿನ ದಾನಮ್ಮ ಮನೆಗೆ ಬಂದರು. 'ನಮ್ಮ ಬಂಧುವಾಗಿದ್ದುಕೊಂಡು ಲಿಂಗಪ್ಪನ ಜೊತೆಗೆ ಹೋಗುವುದು ಅಂದ್ರೆ ಏನು? ಕಾಂಗ್ರೆಸ್‌ಗೆ ಪಕ್ಷಾಂತರ ಆಗು' ಎಂದೆಲ್ಲ ಒತ್ತಾಯ ತಂದರು. ನಮ್ಮ ಅಪ್ಪಯ್ಯನೂ ಕಾಂಗ್ರೆಸ್ ಪರವಾಗಿದ್ದವರೇ. ಆವತ್ತಿಂದ ಚುನಾವಣೆ ಮುಗಿಯೋತನಕ ಕಡಿದಾಳ್ ಮನೆಗೂ ಹೋಗಲಿಲ್ಲ, ಎಲ್ಲಿ ಪ್ರಚಾರಕ್ಕೆ ಹೋಗ್ತಿದ್ನೋ ಆ ಊರಲ್ಲೆ ಉಳಿದು ರಾತ್ರಿ ಬೆಳಗು ಮಾಡ್ತಿದ್ದೆ. ಅಪ್ಪಣ್ಣ ಹೆಗ್ಡೆ ಶ್ರೀದೇವಿಯ ಸೋದರಮಾವ. ಲಿಂಗಪ್ಪನ ಪರ ನಿಂತು ಅಪ್ಪಣ್ಣ ಹೆಗ್ಡೆಯವರ ಸೋಲಿಗೆ ಕಾರಣನಾದ ನನ್ನ ಮೇಲೆ ಮುನಿಸಿಕೊಂಡು ಅವರು ಚುನಾವಣೆ ನಡೆದು ವರ್ಷಾನುಗಟ್ಟಲೆ ಆದ ಮೇಲೂ ಭಗವತಿಕೆರೆಗೆ ಬಂದ್ರೂ ನಮ್ಮ ಮನೆಗೆ ಬರ್ತಿರಲಿಲ್ಲ.

ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಕಾಲ ಇದು. ಭೂಸುಧಾರಣೆ ಆಗಿನ್ನೂ ಜಾರಿಗೆ ಬಂದಿರಲಿಲ್ಲ. ಗೋಪಾಲಗೌಡ್ರು ಇದಕ್ಕಾಗಿ ಶತಾಯ ಗತಾಯ ಹೋರಾಟ ಮಾಡಿದ್ದರು. ತೀರ್ಥಹಳ್ಳಿಯಲ್ಲೂ ಭೂಹೀನ ಗೇಣಿದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸಮಾಜವಾದಿ ಪಕ್ಷ ಮೊದಲಿನಿಂದಲೂ ಭೂಸುಧಾರಣೆ ಕಾನೂನಿನ ಪರವಾಗಿದ್ದರಿಂದ ಈ ಗೇಣಿದಾರರ ಸಂಪೂರ್ಣ ಬೆಂಬಲ ನಮಗೆ ಸಿಕ್ಕಿತು. ಲಿಂಗಪ್ಪನ ತಂದೆ ರಾಮಣ್ಣ ತೀರ್ಥಹಳ್ಳಿ ಬಸ್ ಸ್ಟ್ಯಾಂಡ್‌ನಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದರು. ಲಿಂಗಪ್ಪನ ಮಾವ ಟಂಕಣ್ಣ ಟಂಕರಿಂಗ್ ಅಂದ್ರೆ ಕೊಡೆ ರಿಪೇರಿ, ಗ್ಯಾಸ್ ಲೈಟ್ ರಿಪೇರಿ, ಬೆಸುಗೆ ಹಾಕದು ಇಂತ ಕೆಲಸ ಮಾಡೋರು. ಅವರಿಬ್ಬರು ತಮ್ಮ ತಮ್ಮ ಕೆಲಸ ಮಾಡ್ತಾ ಮಾಡ್ತಾನೆ ಲಿಂಗಪ್ಪನ ಪರವಾಗಿ ಓಟು ಕೇಳೋಕೆ ಶುರು ಮಾಡಿದ್ರು. ಇದೆಲ್ಲ ತುಂಬಾ ಪ್ರಭಾವ ಬೀರಿತು. ಚುನಾವಣೆಗೆ ನಾಲ್ಕೈದು ದಿನ ಇರುವಾಗ ನಮ್ಮ ಪ್ರಚಾರ ಸಭೆಯ ಚಿತ್ರಣವೇ ಬದಲಾಯಿತು. ಜನಬೆಂಬಲ ಸಿಗತೊಡಗಿತು. ನಮಗೂ ಗೆದ್ದೆ ಗೆಲ್ತೀವಿ ಅನ್ನೋ ವಿಶ್ವಾಸವಿಲ್ಲದಿದ್ದರೂ ಸೋತರೂ ಅಂತಹ ಅವಮಾನಕಾರಿ ಸೋಲೇನು ಅನುಭವಿಸಲ್ಲ ಅಂತ ವಿಶ್ವಾಸ ಬಂದಿತು.

ಒಂದು ನೋಟು ಒಂದು ಓಟು ಎರಡನ್ನೂ ಜನ ಕೊಟ್ಟಿದ್ದರು. ಹತ್ತು ಸಾವಿರದಷ್ಟು ಹಣ ಸಂಗ್ರಹವಾಗಿದ್ದರೆ ಚುನಾವಣೆಯಲ್ಲಿ ಎರಡು ಸಾವಿರದ ಐನೂರಕ್ಕೂ ಹೆಚ್ಚಿನ ಮತದ ಅಂತರದಿಂದ ಲಿಂಗಪ್ಪ ಗೆದ್ದಿದ್ದರು. ಮೊದಲಿಗೆ ಪ್ರಚಾರ ಸಭೆಗೆ ಹೋದಾಗ ಒಬ್ಬರೂ ಇರಲಿಲ್ವಲ್ಲ, ಕಮ್ಯುನಿಸ್ಟರ ಸ್ಟ್ರಾಂಗ್ ಹೋಲ್ಡ್ ಅಂತೆಲ್ಲ ಅಂದುಕೊಂಡಿದ್ವಲ್ಲ ರಂಜದಕಟ್ಟೆ, ಹೆಗ್ಗೋಡು, ಕೈಮರ, ಈ ಭಾಗದ ಎಲ್ಲ ಊರುಗಳಲ್ಲೂ ನಮ್ಮ ಅಭ್ಯರ್ಥಿಗೆ ಹೆಚ್ಚಿನ ಓಟು ಬಿದ್ದಿತ್ತು. ಭೂ ಸುಧಾರಣೆಯ ಆಶಯ, ಗೋಪಾಲಗೌಡರ ಬಗೆಗಿನ ಅಭಿಮಾನ ಮತ್ತು ನಮ್ಮೆಲ್ಲರ ಸಂಘಟಿತ ಹೋರಾಟ ಚುನಾವಣಾ ಗೆಲುವಿಗೆ ಕಾರಣವಾಯಿತು. ಜನರಿಂದ ಸಂಗ್ರಹವಾಗಿದ್ದ ಹಣದಲ್ಲಿ 8200 ರೂ. ಖರ್ಚಾಗಿತ್ತು, ಹಿಂದಿನ ಚುನಾವಣೆ ಕಾಲಕ್ಕೆ ಗೋಪಾಲಗೌಡ್ರು ಪೆಟ್ರೋಲ್ ಬಿಲ್ ಬಾಕಿ ಉಳಿಸಿಕೊಂಡಿದ್ರು. ಆ ಸಾಲವನ್ನು ತೀರಿಸಿದ್ವಿ. ಗೆದ್ದ ನಂತರ ಗೌಡರನ್ನು ನೋಡಿಕೊಂಡು ಬರಲು ಲಿಂಗಪ್ಪ ನಾನು, ಸುರೇಂದ್ರ ಎಲ್ಲ ಹೋಗಿದ್ವಿ. ಆಗ ಮತ್ತೂ ಉಳಿದಿದ್ದ ಹಣವನ್ನು ಕೈಯಲ್ಲಿ ಕೊಟ್ರೆ ಗೌಡರು ಅಂತ ಸ್ಥಿತಿಯಲ್ಲೂ ಅದನ್ನ ತೆಗೆದುಕೊಳ್ಳಲು ನಿರಾಕರಿಸುತ್ತಾರೆ ಎಂದು ಅವರ ಹಾಸಿಗೆ ಅಡಿ ಇಟ್ಟು ಬಂದ್ವಿ.

ಚುನಾವಣೆ ನಡೆದು ಸ್ವಲ್ಪವೇ ದಿನಕ್ಕೆ ಗೋಪಾಲಗೌಡ್ರು ತೀರ್ಕಂಡ್ರು. ಮುಖ್ಯಮಂತ್ರಿ ದೇವರಾಜ ಅರಸು ಭೂ ಸುಧಾರಣಾ ಕಾನೂನನ್ನು ಜಾರಿಗೆ ತಂದರು. ಭೂ ಸುಧಾರಣೆ ಬಂದ್ಮೇಲೆ ಸಮಾಜವಾದಿ ಚಳವಳಿಯ ಮಹತ್ವವೂ ಕುಗ್ಗುತ್ತಾ ಹೋಯಿತು. ಕಾಗೋಡು ತಿಮ್ಮಪ್ಪ ಕಾಂಗ್ರೆಸ್ ಸೇರಿ ಕೋಣಂದೂರು ಲಿಂಗಪ್ಪನನ್ನೂ ಆ ಕಡೆಗೆ ಎಳೆದುಕೊಂಡ್ರು. ನಂತರದ ಈ ಬೆಳವಣಿಗೆಗಳೇನೆ ಇದ್ದರೂ ಈ ಚುನಾವಣೆಯಲ್ಲಿ ನಾವು ನಡೆಸಿದ್ದು ಮಾದರಿ ಹೋರಾಟ. ಇವತ್ತಿಗೂ ಈ ರೀತಿ ಹೋರಾಟ ಮಾಡಿ ಚುನಾವಣೆ ಗೆಲ್ಲಕ್ಕೆ ಸಾಧ್ಯವಿದೆಯಾ ಎಂದರೆ 'ಯಾಕಾಗಲ್ಲ? ಖಂಡಿತಾ ಸಾಧ್ಯ ಇದೆ' ಎಂದು ಹೇಳುವಷ್ಟು ಆಶಾವಾದಿ ನಾನು.

(ಮುಂದುವರೆಯುವುದು)

ಜಾತಿ ರಾಜಕಾರಣಕ್ಕಿಂತ ಕುಟುಂಬ ರಾಜಕಾರಣ ಡೈನ್ ಜರ್‍ರಂ

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಉಗ್ಗಿ ಬರುವುದನ್ನೆ ಕಾದಂತಿದ್ದ ಸೀರ,

"ಇದೇನ್ಲ ಇಂತ ಸುದ್ದಿ ಕೇಳ್ದೆ ನಿಜವೆ?" ಎಂದ.

"ಯಾವುದಪ್ಪ ಅದು ಅಂತ ಸುದ್ದಿ?"

"ತಿರಿಸ್ಯಾವೆ ಅಣ್ಣಯ್ಯ ಬಜೆಪಿಗೋದನಂತೆ ನಿಜವೆನ್ಲ? ಯಲ್ಲ ಅಂಗಂತ ಮಾತಾಡ್ತರಪ್ಪ" ಎಂದ ಸೀರ.

"ಅದ್ಯಾಕೋದನಲ್ಲಿಗೇ?" ಎಂದ ಕಾಳಮಾವ.

"ಬಜೆಪಿಲಿ ಯಂಭತ್ತೂರು ವರುಸುದ ಮುದುಕ ಯಾರೂ ಇಲವಂತೆ. ಅಂಥದ್ದೊಂದು ಜಾಗ ಖಾಲಿ ಬಿದ್ದದಂತೆ. ಅದ್ಕೆ ಹೋಯ್ತಾಯಿರಬವುದು" ಎಂದು ಉಗ್ರಿ ನಕ್ಕ.

''ಅಡ್ವಾನಿ, ವಾಜ್‌ಪೈಯಿ ಅವರೂ ಮುದುಕರಲವೇನ್ಲ?"

"ಅವುರು ಕೇಂದ್ರುದ ಲೀಡ್ರು ಕಣಮಾವ, ನಮ್ಮ ಕರ್ನಾಟಕದಲ್ಲಿ ಯಾವ ಹಿರಿ ತಲೆನೂ ಇಲವಂತೆ. ಅದ್ಕೆ ಅಣ್ಣಯ್ಯಾರು ವಂಟರಬವುದು."

"ಏನೇ ಆಗ್ಲಿ ಅವುನ ತೀರಮಾನ ಒಪ್ಪದಲ್ಲ ಬುಡು" ಎಂದ ಕಾಳಮಾವ.

"ಯಾರೂ ಯಾರ ತೀರ್ಮಾನಕೂ ಕಾಯ್ತಾಯಿಲ್ಲ ಕಣ ಮಾವ. ಜನ ಅವುರಿಗೆ ತಿಳದಂಗೆ ಮಾಡ್ತ ಕುಂತವುರೆ. ಅಂಗೆ ಅಣ್ಣಯ್ಯನೂ ಅವುನಿಗೆ ತಿಳದಂಗೆ ಮಾಡಕ್ಕೆ ವಂಟರಬವುದು."

"ಅಲ್ಲಾ ಕಾಲಾದಿಂದ ಕಾಂಗ್ರೆಸ್ಸು ಅಂತ ಅಧಿಕಾರ ಅನುಭವುಸಿ, ಬೇಕಾದೋಟು ಆಸ್ತಿ ಮಾಡಿಕಂಡು, ಇವತ್ತು ಕಾಂಗ್ರೆಸ್ಸು ಅರ್ಪಿ ಬದ್ದದೆ ಅಂತ ಹಿಂಗ್ಯಂಟ್ರೆ ಯಂಗೇ ಅಂತ?" ಎಂದು ಸೀರ ಕಾಂಗ್ರೆ ಮುಖಂಡನಂತೆ ಮಾತನಾಡಿದ.

"ಕಾಂಗ್ರೆಸ್ಸು ಕಾಂಗ್ರೆಸ್ಸಿನೋರಿಂದ್ಲೆ ಅರ್ಪಿಬದ್ದದೆ ಕಣವಮಾವ. ಅದ ಎತ್ತಿ ನಿಲ್ಸುಸಬೇಕಾದ್ರೆ ಜನತಾದಳದೋರಿಂದ ಮಾತ್ರ ಸಾಧ್ಯ" ಎಂದ ಉಗ್ರಿ.

"ಇದೇನ್ಲ ಹಿಂಗಂತಿ? ದಳದೋರು ಬಂದು ಸರಿಮಾಡಕ್ಯಾದತೆ?" ಎಂದು ಜುಮ್ಮಿ ಅಚ್ಚರಿ ಕಣ್ಣುಬಿಟ್ಟಳು.

"ಊ ಕಣೆ. ಕಾಂಗ್ರೆಸ್ ಲೀಡ್ರುಗಳಿಗೆ ವಯಿಸಾಗ್ಯದೆ. ಕೆಲುವು ಲಡ್ಡಿದ್ದು ಹೋಗ್ಯವೆ. ಅದ್ಕೆ ದಳದ ದೇಶಪಾಂಡೆ, ಪ್ರಕಾಶ, ಸೋಮಣ್ಣ, ಸಿದ್ದರಾಮಯ್ಯ ಸಾಧ್ಯವಾದ್ರೆ ಸಿಂಧ್ಯಾ, ಮಾದೇವಪ್ಪ, ಇಬ್ರಾಹಿಂ ಇವುರ್ಕಲ್ಲ ಸೇರಿ ಅದ ಕಟ್ಟಬವುದು. ಇಲ್ಲ ಅಂದ್ರೆ ವಸಿಜನ ಬಿಜೆಪಿಗೋಯ್ತವೆ, ಇನ್ನೂಸಿ ಜನ ದಳದ ಬಾಗಲ ತಟ್ಟತವೆ. ಆಗ ಕಾಂಗ್ರೆಸ್ ಹಾಳಾಗದ ಯಾರೂ ತಡಿಯಕ್ಯಾಗದಿಲ್ಲ."

"ಶ್ರೀಕಂಠಯ್ಯನಂಥೋನು ಈ ವಯುಸಿನಲ್ಲಿ ಬಿಜೆಪಿ ಸೇರಿ ಏನು ಮಾಡಂಗಿದ್ದನೂ?" ಎಂದ ಕಾಳಮಾವ.


"ಏನು ಮಾಡಕ್ಯಾಗದೆಯಿದ್ರು, ಮಾದೇಗೌಡರಂಗೆ ಗೂಸಾ ತಿನ್ನಬವುದು."

"ಹಾಸನದಲ್ಲಿ ಅಣ್ಣಯ್ಯನ ಮುಟ್ಟೋರ್‍ಯಾರಿದ್ದರ್ಲ?" ಎಂದ ಸೀರ.

"ಮಂಡೇವುದಲ್ಲಿ ಮಾದೇಗೌಡನ್ನ ಮುಟ್ಟೋರು ಯಾರವುರೆ ಅಂತಿದ್ದವಪ್ಪ, ಗಾಂಧಿ ಜಪ ಮಾಡಿಕಂಡು ಕುಂದ್ರಿದ್ದೋನ ಅಂಗಿ ಹರುದು ಪಂಚೆ ಕಿತ್ತು ಹೋಗ್ಯವುರೆ, ಇದಕೇನೇಳ್ತೀ?"

"ನೋಡುಮತ್ತೆ ಇನ್ಯಂಥಾ ಬ್ಯರ್ಕೆ ಬದ್ದೆತ್ತವು" ಎಂದ ಸೀರ.

"ಅಂತವು ಹಾಸನ ಜಿಲ್ಲೆಲಿಲ್ಲ ಅಂತ ಯಂಗೇಳ್ತೀ? ಶ್ರೀಕಂಠಯ್ಯ ಪಾರ್ಟಿ ಕ್ಯಲಸ ಮಾಡದೆ ಬರೀ ಮಜಮಾಡ್ತನೆ ಅಂತ ಯಾವಾರ ಪೋಲಿ ಬದ್ದೆತ್ತವು ಹಿಡಕಂಡು ನೇದರೆ



ಏನು ಮಾಡಂಗಿದ್ದನು ಇವುನೂ?" ಎಂದ ಉಗ್ರಿ.

"ಅದು ನಿಜವೇ ಬುಡು."

"ಬದುಕಿ ಬಾಳಿದ ಮನೆ ಬುಟ್ಟು ಈ ವಯುಸಲ್ಲಿ ಬಜೆಪಿ ಮನಿಗೋಯ್ತನಿ ಅಂದ್ರೆ ಏನೇಳನಾ?"

"ಕಾಂಗ್ರೆಸ್ನಲ್ಲಿ ಅಂಗಾಗಿರಬವುದು ಕಂಡ್ಯ."

"ಏನೂ ಆಗಿಲ್ಲ ಕಣಮಾವ. ಕಾಂಗ್ರೆಸ್ಸಿನಲ್ಲಿರೋರ್ಕಲ್ಲ ಆ ಪಾರ್ಟಿ ಅಧಿಕಾರದಲ್ಲಿ ಇದ್ದಾಗ ತಿಂದು ತೇಗಿ ಬಾಚಿ ಬಳಕಂಡು ಗುಡ್ಸೆ ಹಾಯ್ಕಂಡು ಮಲತೋಗ್ಯವುರೆ. ಪಾರ್ಟಿ ಈಗ ಬಜೆಪಿ, ಜೆಡಿಎಸ್ ಎದುರಿಗೆ ಹೋ… ಕೆಚ್ಚನ್ನೇ ಕಳಕಂಡದೆ. ಅದ್ಕೆ ತಿಂದಿರದ ದಕ್ಸಿಗಳ್ಕೆ ಯ… ಆಡಳತ ಮಾಡ್ತಯಿರೋ ಪಾರ್ಟಿ ನೋಡ್ತ … ಅವುರಲ್ಲಿ ಇವನೂ ಒಬ್ಬ ಅಷ್ಟೆ."

"ಕಾಂಗ್ರೆಸ್ಸಿನೋರೇನೊ ತಿಂದು ತೇಗಿದ್ರು ಸರಿ… ಬಜೆಪಿಗಳು, ಜೆಡಿಎಸ್‌ನೋರೇನು ಸಾಬಸ್ಥರೆ?"

"ಅಯ್ಯೋ, ಇವುರಿಗ್ಯಲ್ಲ ಹೋ… ಕಾಂಗ್ರೆಸ್ಸಿನೋರೇ ಉತ್ತಮ ಕಣಮಾ… ಮುಂಡೆವು ಐವತ್ತೊರಸದಲ್ಲಿ ತಿಂ… ಇವರು ಐದೇ ವರ್ಸದಲ್ಲಿ ತಿಂದಾ… ಇವತ್ತು ಬಜೆಪಿ ಲೀಡ್ರುಗಳು ನೂ… ಕೋಟಿಗಿದ್ದರಂತೆ. ಆ ರೆಡ್ಡಿಗಳ… ಸಾವುರಾರು ಕೋಟಿಗವುರೆ, ಗೊತ್ತೆ…

''ಲ್ಯಕ್ಕ, ಹಾಕಂ, ಇಸ… ತಿಂದಿರಬವುದು."

"ಯಾರೇನು ತಿಂದ್ರು ಅಂತ … ಹೇಳ್ರಪ್ಪ" ಎಂದು ಪಾಟಿಸ್ಸೆ ಬಂದ.

"ಕಾಂಗ್ರೆಸಿನೋರು ಐವತ್ತು … ತಿಂದಿರದ ಬಜೆಪಿ, ಜೆಡಿಎಸ್‌ನೋರು … ವರ್ಸಕ್ಕೆ ತಿಂದಿದ್ದರಂತೆ."

"ಅಷ್ಟೇ ಅಲ್ಲ, ಇನ್ನು ತಿಂತಾ ಅವುರೆ."

"ಅದ್ಯಾಕಂಗೆ ತಿಂದರ್ಲ?" ಎಂದಳು ಜುಮ್ಮಿ…

"ಅದ್ಯಾಕಂಗೆ ತಿಂದರ್ಲ ಅಂತ ಕೇಳ್ತಿಯಲ್ಲಕ್ಕ, … ನೀನು ತಿಂತಿ. ಯಾಕಂದ್ರೆ ನೀನು ರಾಜಕಾರಣಿ. … ರಾಜಕಾರಣಿಗಳು ಕಡೇವರಿಗೂ ರಾಜಕಾರಣ ಮಾಡಬೇ… ತಿನ್ನಲೇಬೇಕಂತೆ. ಪರೆಗ್‌ಜಾಂಪಲ್, ನಮ್ಮ ಹಳೆ … ಬಂಗಾರ ಟು ಇಯರ್ಸ್ ಕಂಟಿನೆಸ್ಸಾಗಿ ತಿನ್ನೋವತ್ತಿಗೆ, … ಯರಡು ವರ್ಸ ತಿಂದಿದ್ಕೆ ಈ ಯರಡ ದಶಕ ಮೆಲಕಾ…

ಕೀಟ್ಲೆ ಕೆಂಪನ ಕಾಮಾಟಿಪುರ

ಹಾಳಾದ ಅನ್ಬುಮಣಿ ರಾಮದಾಸ್ ಕಾಟ ಸಾಕುಬೇಕಾಗಿ ಹೋಗಿದೆ. ಸಂತೋಷ ನೀಡುವ ಎಲ್ಲ ವಸ್ತುಗಳನ್ನು ಮನುಷ್ಯ ಎಂಬ ಪ್ರಾಣಿ ಬೇಗ ಈ ಪ್ರಪಂಚ ಖಾಲಿ ಮಾಡಲಿ ಅಂತಾನೇ ಕಂಡುಹಿಡಿದಿರಬೇಕು ಅನ್ನುವ ಭ್ರಮೆ ಕಾಡುತ್ತಿರುವಂತಿದೆ. ಸಿಗರೇಟು ಸೇದುವುದು ಆರೋಗ್ಯಕ್ಕೆ ಹಾನಿಕಾರ ಅಂತ ಹೇಳಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಜಾರಿಗೆ ತಂದ. (ಹಾದಿಬೀದಿ ಅಂದರೆ ಸಾರ್ವಜನಿಕ ಸ್ಥಳ ಅಲ್ಲ ಅಂತಾನೋ ಏನೋ ಅಲ್ಲಿ ಆರಾಮವಾಗಿ ದಂ ಹೊಡೀತಾ ಹೋಗಬಹುದು!) ಕುಡಿತ ಆರೋಗ್ಯಕ್ಕೆ ಒಳ್ಳೆಯದಲ್ಲ ಅನ್ನೊ ನೆಪದಲ್ಲಿ ಅದನ್ನ ನಿಷೇಧಿಸ್ತೀನಿ ಅಂತಿದಾನೆ. ಸರ್ಕಾರಗಳು ನಡೀತಿರೋದೆ ಅಬಕಾರಿ ಆದಾಯದ ಮೇಲೆ. ಇಂತಹ ಅಪಾಯದ ಮುನ್ಸೂಚನೆ ಯಾವುದೂ ಇಲ್ಲದೇ ಇದ್ದರೂ ಕೇಡುಗಾಲಕ್ಕೆ ನಾಯಿಮೊಟ್ಟೆ ಇಕ್ಕಿದ್ದಂತೆ ಇವ್ನು ಯಾವಾಗ ತಂದೇ ಬಿಡ್ತಾನೋ ಅನ್ನೋ ಆತಂಕವಂತೂ ಇದ್ದೇ ಇದೆ. ಇಂತಹವಕ್ಕೆಲ್ಲ ನಿಷೇಧ ಹೇರುವುದಕ್ಕೆ ಮೊದಲೇ ಅದರ ಸುಖಾನುಭವ ಪಡೀಬೇಕು ಅಂತ ಗೆಳೆಯರಿಬ್ಬರು ಬಾರಿಗೆ ಹೋದರು. ಒಂದು ಪೆಗ್ಗು ಒಳಕ್ಕೆ ಹೋಗಿ–ಎರಡನೆಯದ್ದು ಟೇಬಲ್ ಮೇಲೆ ಕುಂತಿತ್ತು, ಮೈ ಎಲ್ಲ ಬಿಸಿ ಆದಂತಾಗಿ ಇದರ ಜೊತೆಗೆ ಏನೇನೋ ಬೇಕು ಅನ್ನಿಸುವ ಹೊತ್ತು ಇದಲ್ಲವಾ. 'ಇಲ್ಲೇ ಆದೆ ನಡೀಲಾ ಓಗುವ' ಅಂದ ಒಬ್ಬ

ಎಲ್ಲಿಗೆ ಅಂತ ವಿವರಿಸಬೇಕಾಗಿರಲಿಲ್ಲ, ಅವನೂ ಅನುಭವಸ್ಥನೇ. ಇಂತಹ ಸಂಬಂಧ ಏಡ್ಸ್‌ಗೆ ರಹದಾರಿ ಎಂದು ನಿತ್ಯ ಸುಮಂಗಲಿಯರು ಇಲ್ಲದಂಗೆ ಮಾಡ್ತಾನು, ಸಿಗಾಕೊಂಡರೆ ಮರಣವೇ ಮಹಾನವಮಿ ಅಂತಾನೆ ಕಾನೂನು ಮಾಡಿಬಿಡ್ತಾನೋ ಏನೋ ಆ ಪುಣ್ಯಾತ್ಮ, ಈಗಲೇ ಅದನ್ನು ಅನುಭವಿಸಬೇಕು ಅನ್ನೋದು ಸಹಜವೇ ಆಗಿತ್ತು. ಆದರೆ ಮನೆಯಲ್ಲಿ ಹೆಂಡತಿ ಇದ್ದಾಳೆ.....


'ಬ್ಯಾಡಕನಯ್ಯಾ'

'ಯಾಕ್ಲಾ?'

'ಹೆಂಡ್ರು ಬಂದವ್ಳೆ'

'ಬಂದಿದ್ರೇನಂತೆ... ಅವಳಿಗೆಂಗೆ ಗೊತ್ತಾಯ್ತದೆ?'

'ಹೂಂ ನೀನೂ ಸರ್‍ಯಾಗೇಳ್ದೆ. ಸೆಂಟಿನ ವಾಸನೇಲೆ ಹಿಡಿದುಡ್ತಾಳೆ'



'ಹಂಗಾ... ನನಗೇನೂ ಆ ಭಯ ಇಲ್ಲಕಲಾ'

'ಯಾಕೆ ಹೆಂಡ್ರಿಲ್ವ?'

'ಅವ್ಳೆ..... ಆದ್ರೆ... 'ಅವುಳ್ಗೆ ಸೂಳೇರ ಮನೆಸೆಂಟ್ ವಾಸನೆ ಹೆಂಗಿರ್ತದೆ ಅಂತ ಗೊತ್ತಿಲ್ಲ' ಅಂದ ಅವ್ನು!

ಗೆಳೆಯ ಸ್ವಲ್ಪ ಟ್ಯೂಬ್‌ಲೈಟು. ಸೂಳೆ ಮನೇಲಿದ್ರೆ ಅಲ್ಲಿನ ಸೆಂಟ್ ವಾಸನೆ ಗೊತ್ತಿರೋದು... ಅಂದ್ರೆ ನಿನ್ನೆಂಡ್ರು ಅಲ್ಲಿದ್ಳು ಅಂತ ತಾನೆ....

ಈ ವಿಷಯ ಯಾಕೆ ಪ್ರಸ್ತಾಪಿಸಬೇಕಾಯ್ತು ಅಂದ್ರೆ ಭಾರತೀಯ ವಿಚಾರವಂತರ ವೇದಿಕೆ ಅಂತ ಸೃಷ್ಟಿಯಾಗಿದೆಯಲ್ಲ, (ಕರ್ನಾಟಕಕ್ಕೆ ಸೀಮಿತವಾಗಿದ್ದ ಇಂತಹ ವೇದಿಕೆಗಳು ರಾಷ್ಟ್ರಮಟ್ಟಕ್ಕೆ ಏರಿವೆ. ಅಂತರರಾಷ್ಟ್ರ ಮಟ್ಟವನ್ನೂ ತಲುಪಬಹುದು!) ಅದರ ವತಿಯಿಂದ 'ಮತಾಂತರ; ಸತ್ಯದ ಮೇಲೆ ಹಲ್ಲೆ' ಪುಸ್ತಕ ಬಿಡುಗಡೆ ಸಮಾರಂಭ. ಅಲ್ಲಿ ಶತಾವಧಾನಿ ಆರ್. ಗಣೇಶ್ ಅನ್ನುವ ಹೆಸರಿನ ಮಹಾಶಯರು ಬುದ್ಧಿಜೀವಿಗಳ ಮೇಲೆ ಹಲ್ಲೆ ಮಾಡಿದರು. ಅಂದರೆ ದೊಣ್ಣೆ ಚಾಕುಚೂರಿ ಹಿಡ್ಕೊಂಡು ಹೋಗಿದ್ರಾ ಈ ಅವಧಾನಿಗಳು ಎಂದು ಅನುಮಾನ ಬರುವುದು ಸಹಜ. ಹಾಗೇನೂ ಇಲ್ಲ, ಅವರಲ್ಲಿ ಒಂದು ಸಿಸ್ಟಂ ಇದೆ. ಲಾಟಪಾಟ ಇಂತಹವನ್ನೆಲ್ಲ ಕೆಳವರ್ಗದ ಜನರಿಗೆ ಮೀಸಲಿಟ್ಟಿದ್ದಾರೆ. ಶೂದ್ರ ಮುಂಡೇವಕ್ಕೆ 'ಮಾತಿನ ಹಲ್ಲೆ' ಮಾಡಲು ಬರುವುದಿಲ್ಲ ಎಂದು ಅಂತಹವಕ್ಕೆಲ್ಲ ಅವರೇ ಬರ್‍ತಾರೆ. ಈ ಮಹಾನುಭಾವರು ನಾಲಿಗೆ ಝಳಪಿಸುತ್ತಾ ಮತಾಂತರ ಪರ ಇರುವವರೆಲ್ಲರ ಜನ್ಮ ಜಾಲಾಡಿದರು. 'ಬುದ್ಧಿಜೀವಿಗಳ ಬಾಯಲ್ಲಿ ಕಾಮಾಟಿಪುರದ ವಾಸನೆ ಬರುತ್ತಿದೆ' ಎಂದು ಚಂದಿ ಉಡಾಯಿಸಿದರು.

ಶತಾವಧಾನಿಗಳ ಪೂರ್ವಿಕರಂತೆ ಈ ಶೂದ್ರ ಮುಂಡೇವಕ್ಕೆ ವಿದ್ಯೆಯಿಂದ ವಂಚಿಸಿದ್ದರೆ ಹೇಳಿದ್ದನ್ನೆಲ್ಲ ಕೇಳ್ಕೊಂಡು ಬದ್ದಿರ್ತಿದ್ವೊ. ಆದರೆ ಆ ಬಿಳಿ ಕೋತಿಗಳು ಬರಲಾಗಿ ವಿದ್ಯೆ ಬಾಗಿಲು ಇಂತಹವರಿಗೂ ತೆರೀತು. ವಿದ್ಯೆ ಕಲಿತ ಈ ಮುಂಡೇವು ಶತಾವಧಾನಿಯವರಂತಹವರ ಮಾತನ್ನೇ ಪ್ರಶ್ನಿಸುತ್ತಾ ಕುಂತವೆ!

ಈ ಮಾತು ಇದೆಯಲ್ಲ ಅದೇ 'ಕಾಮಾಟಪುರ' ಅನ್ನೋದು ಅದು ಕನ್ನಡದ ಕೀಟ್ಲೆ ಕೆಂಪ ಚಂಪಾ ಕೈಗೆ ಸಿಕ್ಕು ನೋಡಿ. ಅವರಿಗೆ ಪರಮಾನಂದ ಆಗಿರಬೇಕು. ಈ ಗಣೇಶ್ ಆ ವಿಘ್ನೇಶ್ವರನ ತರಹಾನೆ ಬ್ರಹ್ಮಚ… ಇಂತಹ ಗಣೇಶನಿಗೂ ಕಾಮಾಟಿಪುರಕ್ಕೂ ಎತ್ತಣಿಂದ… ಸಂಬಂಧವಯ್ಯಾ ಅಂತ ಕುಟುಕ್ತಾರೆ ಚಂಪಾ. … ಅವರಿಗೆ ತವರಲ್ಲ, ಶತಾವಧಾನಿಗಳು ಬೊಂಬಾ… ಹೋಗಿರುತ್ತಾರೆ. ಕಾಮಾಟಿಪುರಕ್ಕೆ ಕುತೂಹಲಕ್ಕೋ ಅ… ಹಿಂದೂ ಧರ್ಮದಿಂದಾಗಿ ಈ ಪಾಪಕೂಪಕ್ಕೆ ತಳ್ಳಲ್ಪ… ಉದ್ಧಾರ ಮಾಡಲೆಂದೋ ಹೋಗಿರಬಹುದು. … ಅಲ್ಲಿ ಟೆಂಪರರಿಯಾಗಿ ಬ್ರಹ್ಮಚಾರಿತ್ವಕ್ಕೆ ಕ್ಯಾಶುಯ… ಲೀವ್ ನೀಡಿ ಆದ ಅನುಭವದಿಂದ ಬೇದಗೊ… ರಜ ಕ್ಯಾನ್ಸಲ್ ಮಾಡಿ ಮತ್ತೆ ಬ್ರಹ್ಮಚಾರಿಯಾಗಿರಬಹು… ಅದು ಅವರ ವೈಯಕ್ತಿಕ ವಿಷಯ. ಇಷ್ಟಕ್ಕೇ 'ಶತಾವ… ಗಣೇಶ'ರನ್ನು 'ಕಾಮಾಟಿಪುರ ಗಣೇಶ' ಎಂ… ಕಿಚಾಯಿಸುವುದು ಅನ್ಯಾಯದ ಪರಮಾವಧಿ!

ಅಣಕ

ಎಚ್.ಎಲ್. ಕೇಶವಮೂ…

ಇಷ್ಟಕ್ಕೆ ನಿಂತಿಲ್ಲ ಚಂಪಾ ಹಾವಳಿ. ಭಾರತೀ… ವಿಚಾರವಂತರ ವೇದಿಕೆ ಅಂತ ಕನ್ನಡದಲ್ಲಿ … ಇಂಗ್ಲಿಷ್‌ನಲ್ಲಿ Platform for Indian Intelle… ಅಂತ ಬರೆಸಿದ್ದರಂತೆ. ಭಾರತದ ಉದ್ಧ… ಹರಡಬೇಕಾಗಿರುವುದರಿಂದ ಎರಡೂ ಭಾಷೆಯಲ್ಲಿ ಇದ್ದ… ಸರಿ. ಭಾಷೆಯ ಬಗ್ಗೆ ಚಂಪಾ ತಕರಾರಿಲ್ಲ, ಭಾಷಾಂತ… ಬಗ್ಗೆ ಅವರ ಆಕ್ಷೇಪ. ಅಲ್ಲ ಎಂತೆಂತಹ ಮಹಾನುಭಾ… ಇದ್ದರು. ಗಾಂಧಿವಾದಿ ಎನ್ನಿಸಿಕೊಂಡಿರುವ ಹಾರನ… ರಾಮಸ್ವಾಮಿ ಇದ್ದರು. ಸಂಶೋಧಕರೆಂದು ಹೆಸರ… ಚಿದಾನಂದಮೂರ್ತಿಯವರಿದ್ದರು. ಶ್ರೇಷ್ಠ ಕಾದಂಬರಿ… ಪಟ್ಟ ಕಟ್ಟಿಸಿಕೊಂಡಿರುವ ಎಸ್.ಎಲ್. ಭೈರಪ್ಪ ಇದ್ದ… ಇಂತಹ ಘಟಾನುಘಟಿಗಳೇ ಇದ್ದರೂ ಅವರ್‍ಯಾರಿ… ಇಂಗ್ಲಿಷೇ ಗೊತ್ತಿಲ್ಲ ಅನ್ನೋ ತರಹದ ತಲೆಹ… ಮಾಡಬಹುದಾ ಚಂಪಾ. ಅದೇನೋ ಹೇಳ್ತಾರಲ್ಲ … ಹೆತ್ತೋದಳ್ಗೆ ಮೂರು ಹೆತ್ತೋಳು ಬುದ್ಧಿ ಹೇಳ್ದಂಗೆ ಅಂ… ಹಂಗಾಯ್ತು. ಶತಾವಧಾನಿಗಳ ಮಾತೇ ಸತ್ಯ ಆಗಿ… ಬುದ್ಧಿಜೀವಿಗಳೇ ಒಂದು ಜಾತಿ, ವಿಚಾರವಂತರೇ … ಗುಂಪು ತಾನೆ. ಇದರಲ್ಲೂ ಒಂದು ಅಪಾಯ ಇದೆಯ… ಬುದ್ಧಿಜೀವಿಗಳು ವಿಚಾರಾಧೀನರಂತೆ. ಹಾಗಿ… ವಿಚಾರವಂತರು? ಬುದ್ಧಿಗೇಡಿಗಳು! ಇದು ಚಂ… ವಿವರಣೆ. ಎಲ್ಲಾದ್ರೂ ಉಂಟೇನ್ರಿ ಮಹಾನುಭಾವ… ಹೀಗೆ ಅವಮಾನ ಮಾಡುವುದೂ....

ದ್ರೆ ಮೂಲಿಗೆ ಬಿದ್ದು ಹೋಗೋನು ಗೊತ್ತಾ?"
ವಾಟಿಸ್ಸೆ.
ಗೇನೊ ಅವುನು ಕಾಂಗ್ರೆಸ್ಸಿಗೆ ಬಂದನಂತಲ್ಲಾ?"
ರಕ್ಕೆ ರಡಿ ಅವುನೆ ಸರಿ ಕಣಕ್ಕ. ಬಂದುಮ್ಯಾಲೆ
ಇರಬೇಕು ಅಂತ ಕಂಡಿಷನ್ ಹಾಕ್ತಾಯಿದ್ದರಂತೆ
ನೋರು."
ದ್ಯಾಕಂತ ಕಂಡಿಸನ್ನೂ?"
ಒದ್ದೆ ಬಂಗಾರಿ ಐಲುಪೈಲು. ಅವುನ ಮನಸು
ಗೆ ಏನೂ ಅಂತ ಹೇಳಕ್ಕೆ ಬರದಿಲ್ಲ, ಬಂದಮ್ಯಾಲೆ
ವಿ ಜನವ ಗುಂಪು ಮಾಡಿಕಂಡು ತಿರಗ ಯತ್ತಗಾರ
ಏನೇಸಗಳದು ಅವುನ್ಗಾ ಅಂತ ಯೋಚನೆ
ಮಿದ್ದರಂತೇ."
ಲ್ಲಾ, ಅವುನು ಕಾಂಗ್ರೆಸ್ಸಿಗೆ ಬರಕ್ಕೆ ಓಡಾದ್ತ ಅವುನೆ
ಸ್ತ್ರೀಕಂಠಯ್ಯ ಬಿಜೆಪಿಗ್ಬಂಟವುನೆ ಅಂತಿರಿ.
ಯ್ಯ ಜರತಗಂಡು ಕುಂತವುನೆ ಅಂತಿರಿ. ಏನ್ಲ
ರಣ ಹಿಂಗಾಗ್ಯದೆ?" ಎಂದ ಕಾಳಮಾವ.
ದಿರದೆ ಅಂಗಲವೆ ದ್ವಡಪ್ಪ? ನೋಡು
ಮಯ್ಯ ಕಾಂಗ್ರೆಸ್ ಬುಡತನೇ ಅಂದೇಟಿಗೆ
ಗೌಡ್ರಾಗಲೆ ಕುರುಬರ ಮನೆ ಹುಡಿಕ್ಕಂಡು
ರೆ" ಎಂದ ವಾಟಿಸ್ಸೆ.
ವುನ್ಯಾಕ್ ಕುರುಬರ ಮನೆ ಹುಡಿಕ್ಕಂಡೋದನ್ನ?"
ಬಗರಲ್ಲೆ ಇದ್ದೊನು ಅಂತಿಯಾ?"
ದದಲ್ಲ ಕಂಡ್ಯ. ಅವುನು ರಾಜಕಾರಣಿ, ರಾಜಕಾರಣ
ಅವುನೆ. ಮಾಡಬೇಕಾದ್ರೆ ಯಲ್ಲಾ ಜನಗಳ
ನೂ ಬೇಕು. ಅಂಗೆ ಯಲ್ಲಾ ಜಾತಿ ಜನಗಳ
ಮ್ಯಾಲೂ ಕೈ ಮಡಗಿರತನೆ. ಅಂಗೆ ಕುರುಬರ
ಅಕ್ಕರೆ ಮೂಡಿರಬವುದು."
ವುನು ಕುರುಬರ ಕಂಡು ಅಕ್ಕರೆ ಮಾಡ್ತನೆ ಅಂದ್ರೆ
ರಿಗೇ ಏನೊ ಕೇಡುಗಾಲ ದ್ವಡಪ್ಪ"
ಮುಗ್ಯಾಕ್ಲ ಕೇಡಗಾಲ?" ಎಂದ ಚಿಕ್ಕಯ್ಯ.
ನೋಡು, ನಮ್ಮ ಚಿಕ್ಕಣ್ಣ ಕುರುಬರ ಮ್ಯಾಟ್ರು

ತಗದಾಗ್ಲೆ ಬಾಯಿಬುಡದು. ಇಲ್ದೆಯಿದ್ರೆ ಸಿದರಾಮಯ್ಯನಂಗೆ ಸುಮ್ಮನಿರತನೆ, ಅಲವೇನೊ?"

"ನಾನ್ಯಾಕಂಗಿರ್ಲಿ? ಅದಲ್ಲ ಕಣೊ ವಾಟಿಸ್ಸೆ ಕುರುಬರಿಗೆ ಕೇಡುಗಾಲ ಅಂದಲ್ಲ, ಯಾಕೆ ಅಂತ ಕೇಳಿದ್ದು."

"ಯಾಕೆ ಅಂದ್ರೆ ದ್ಯಾವೇಗೌಡ್ರು ಡಿವೈಡ್ ಮಾಡಕ್ಕೆ ವಂಟವುರೆ. ಅಷ್ಟೆ ಅಲ್ಲ ದ್ವಡಪ್ಪ ಇಡೀ ಕರ್ನಾಟಕದ ಸಾಯಿತಿಗಳು, ಕಲಾವಿದರನ್ನೆಲ್ಲ ಕರದು ಯಂಗಪ್ಪ ಪಾರ್ಟಿ ಕಟ್ಟದು ಅಂತ ಸಲಹೆ ಕೇಳ್ಯವುರೆ."

"ಅವುನಂತ ಅನುಭವಸ್ಥ ಸಾಯಿತಿಗಳ ಕರದು ಸಲಹೆ ಕೇಳ್ತನೆ ಅಂದ್ರೆ ಲ್ಯಕ್ಕ ಹಾಕು. ಇನ್ನಂಥಾ ಇವುನಿದ್ದನವುನು" ಎಂದು ಉಗ್ರಿ ಅಚ್ಚರಿಗೊಂಡ.

"ಅವತ್ತು ನಾನೂ ಹೋಗಬೇಕಾಗಿತ್ತು ಕಣೊ. ಒಂಚೂರ್ರಲ್ಲಿ ಮಿಸ್ಸಾಯ್ತು."

"ಅಂಗರೆ ನಿನ್ನ ಕರದಿದ್ರೇನ್ನ?" ಎಂದಳು ಜುಮ್ಮಿ.

"ನಮ್ಮಂಥೋರನ ಯಾರು ಕರಿತರಕ್ಕ? ಇದ್ದದ್ದ ಇದ್ದಂಗೆ ಹೇಲಿ ಬುಡತಿವಿ. ಸಾವುರಾರು ಜನ ಸೇರಿರೋ ಸಭೆಲೆ ಹೇಳಿ ಬುಡತಿವಿ. ಅದ್ಕೆ ರಾಜಕಾರಣಿಗಳು ನಮ್ಮಂಥೋರ, ಅದರಲ್ಲೂ ನನ್ನನ್ನ ಯಾವ ಮೀಟಿಂಗಿಗೂ ಕರಿಯದಿಲ್ಲ, ಅದರಲ್ಲೂ ದ್ಯಾವೇಗೌಡ ನನ್ನನ್ನ ಏನಾರ ಕರದಿದ್ರೆ ನಾನು ಒಂದೇ ಪ್ರಶ್ನೆ ಕೇಳತಿದ್ದ."

"ಏನು ಕೇಳತಿದ್ದೇ?"

"ಏನೂಯಿಲ್ಲ ಕಣಕ್ಕ, ದೆಮಾಕ್ರಸಿಲಿ ಜಾತಿ ರಾಜಕಾರಣ ಕೆಟ್ಟದ್ದು ಅಂದ್ರೆ ದ್ಯೆಂಜರು. ಅದ್ಕೇ ಕುಟುಂಬ ರಾಜಕಾರಣ ಇನ್ನೂ ಕೆಟ್ಟದ್ದು. ಇಂತ ರಾಜಕಾರಣ ಮಾಡಿ ಕೆಟ್ಟು ಕೆರ ಹಿಡಿದಿರೊ ನೀವು ರೇವಣ್ಣನ ಹೆಂಡ್ತಿಗೆ ಯಾವ ಕ್ಷೇತ್ರ ಹುಡುಕಿದ್ದಿರಿ ಅಂತ ಕೇಳತಿದ್ದೆ ಕಣಕ್ಕ."

"ಕೇಳಿದ್ರೆ ನಿನ್ನ ಕತ್ತಿದದು ವರಿಕೆ ನೂಕರು."

"ಸುಳ್ಳು. ದೇವೇಗೌಡ್ರು, ಅದಕೆ ಅವುಕಾಸ ಕೊಡ್ತಿರಲಿಲ್ಲ."

"ಅಂಗಂತಿಯಾ?"

"ಹೂ ಮತ್ತೆ, ದಟೀಸ್ ದೇವೇಗೌಡ."

" !?" ■

ಜಾ ಒಂದು ಕಡೆಯಿಂದ ಜಾಡಿಸುತ್ತಿದ್ದರೆ ಕೆ.
ದ್ದಪ್ಪ ಮತ್ತೊಂದು ಕಡೆಯಿಂದ ಕಲ್ಲು ಎಸೀತಿದಾರೆ.
ಶದಲ್ಲಿ ಸಾವಿರಾರು ಜಾತಿ, ಪಂಗಡಗಳಿವೆ.
ನ್ನ ಹಿಂದೂ ಧರ್ಮದ ಚೌಕಟ್ಟಿಗೆ ಸೇರಿಸಲು
ಆಧಾರಗಳೂ ಇಲ್ಲ, ಆತ್ಮಗೌರವ ಸಮಾನತೆಯ
ದಲ್ಲಿ ಹಿಂದೂ ಧರ್ಮವನ್ನು ಪುನರ್
ಕಾಗಿದೆ. ಇದೆಲ್ಲವನ್ನೂ ಬಿಟ್ಟು ಮತಾಂತರದ
ಬೊಬ್ಬೆ ಹಾಕುವುದು ಯಥಾಸ್ಥಿತಿವಾದಿಗಳ
ಗಿದೆ ಎಂದು ಹಿಂದೂ ಧರ್ಮದ ಹೆಸರಿನಲ್ಲೇ
ಕುತ್ತಿರುವ ಮಹಾನುಭಾವರನ್ನು ಹೀಯಾಳಿಸಿದ್ದಾರೆ.
ಲ್ಲ 'ಬುದ್ಧಿಜೀವಿಗಳ ಬಾಯಲ್ಲಿ ಕಾಮಾಟಿಪುರದ
ಬರುತ್ತಿದೆ' ಎಂಬ ಕೀಳುಮಟ್ಟದ ವ್ಯಕ್ತಿಂದೆಗೆ
ದುವವರೊಡನೆ ಸಂವಾದ ಅಸಾಧ್ಯ ಎಂದಿದ್ದಾರಲ್ಲ,
ುತಹ ಮಹಾನುಭಾವರ ಬಾಯಿಂದ ಉದುರಿದ
ವಾಕ್ಯಗಳನ್ನೇ ಹೀಗೆಂದರೆ ಹೇಗೆ. ಅಷ್ಟಕ್ಕೂ
ಸಂವಾದಕ್ಕೆ ಬಾ ಅಂತ ಕರೆದಿರುವುದಾದರೂ
ಸಂವಾದ ಯಾವಾಗ ಮಾಡಬೇಕು? ಗೊಂದಲ
ಇಲ್ಲಿ ಏನೂ ಅಂತಹದ್ದಿಲ್ಲವಲ್ಲಾ...
ಷ್ಟಕ್ಕೂ ವೇದಿಕೆಯಲ್ಲಿದ್ದವರು ಯಾರು?
ದಿಯಲ್ಲಿರುವ ಪುಂಡು ಪೋಕರಿಗಳಲ್ಲ, ಮತಾಂತರ
ಲು ಹಣ ತೊಟ್ಟವರು! ಹಿಂದೂ ಧರ್ಮವನ್ನು
ಕುಡಿದಿರುವವರು! ಬಹುಭಾಷಾ ಪ್ರವೀಣರು!
ಪಂಡಿತ ವೃಂದಕ್ಕೇ ಬರಗೂರು ರಾಮಚಂದ್ರಪ್ಪ
ುನುಷ್ಯ ತಾವು ನಂಬದ ಧರ್ಮಕ್ಕೇ ವಿರುದ್ಧವಾದ
ನ್ನು ಬಳಸಬಾರದೆಂಬ ವಿವೇಕ ಇಲ್ಲ ಎನ್ನಬಹುದೆ!
ಅಲ್ಲದೆ ಕಾಮಾಟಿಪುರದಲ್ಲಿರುವ ಬಹುಪಾಲು
ಮಹಿಳೆಯರನ್ನು ಈ ಪಾಪಕೂಪಕ್ಕೆ ತಳ್ಳಿದ್ದು
ಧರ್ಮವೇ ಅಂತಾರಲ್ಲಾ... ಇಂತಹ
ಂಪಟರಿಗೇನೆನ್ನಬೇಕು.
ಬಗೆಲ್ಲ ಕಾದಿದೆ ರೌರವ ನರಕ!
ಚ್ಚರ! ಎಚ್ಚರ!!
ಬಿನವ ಅಂಬೇಡ್ಕರ್!
ರು? ಯಾರು ಈ ಮಹಾತ್ಮಾ?
ರಬೇಡಿ. ಸ್ವಲ್ಪ ನಿಧಾನಿಸಿ.
ಮೊಗ್ಗದಲ್ಲಿ ಛಲವಾದಿ ಸಮೂಹ ಸಮಾವೇಶ.
ಾವಣೆಗಳು ಹತ್ತಿರಕ್ಕೆ ಬರುತ್ತಿವೆ. ಇಂತಹ ಜಾತಿ
ಶಗಳನ್ನು ಮಾಡುವುದು ಅನಿವಾರ್ಯ.
ದತೀಯ ಜನತಾಪಕ್ಷ ಜನವರಿ 16 ರಿಂದ ಫೆಬ್ರವರಿ

16 ರವರೆವಿಗೆ ಜನಾಂದೋಲನ ನಡೆಸುತ್ತಿದೆ.

ಯಾಕೆ ಈ ಆಂದೋಲನ?

ಲೋಕಸಭಾ ಚುನಾವಣೆ ಹತ್ತಿರಕ್ಕೆ ಬರುತ್ತಿವೆ!

ಯಾವ ಸಂದೇಶ ಹೊತ್ತು ಸಾಗುತ್ತಿದೆ?

ಸಂದೇಶ ಇಲ್ಲ, ಅಭಿನಂದನೆ ಇದೆ.

ಎಲ್ಲಿದೆಯೂ ಅಭಿನಂದನೆಗೆ ಅರ್ಹ ವ್ಯಕ್ತಿಗಳು ಇದ್ದಾರೆಯೇ?

ಇದ್ದಾರೆ! ಅವರೇ ನವ ಮತದಾರರು!

ಏನು ಅವರ ಸಾಧನೆ?

ಹೊಸದಾಗಿ ಮತದಾರರಾದದ್ದು!

ಈ ಸನ್ಮಾನದಿಂದ ಪುಳಕಿತರಾಗುವ ನವ ಮತದಾರರು ತಮ್ಮ ಪಕ್ಷಕ್ಕೆ ಮತ ನೀಡುತ್ತಾರೆ ಎಂಬ ಭ್ರಮೆ!

ಇದರಂತೆಯೇ ಜಾತಿಗಳ ಸಮಾವೇಶ. ಇಲ್ಲಿ ಹೊರಬಂದದ್ದು ಇದು.

ಯಡ್ಯೂರಪ್ಪ ಯಾರು?

ಯಾರು ಅಂದರೆ ಮುಖ್ಯಮಂತ್ರಿ.

ಇದು ಒಂದು. ಬೇರೆ?

ಡಾಕ್ಟರ್ ಯಡ್ಯೂರಪ್ಪ!

ಇನ್ನೂ ಒಂದು ಇದೆ. ಅದೇ 'ಆಧುನಿಕ ಅಂಬೇಡ್ಕರ್ ಯಡ್ಯೂರಪ್ಪ'

ಈ ಪ್ರಶಸ್ತಿ ಪ್ರದಾನ ಮಾಡಿದ್ದು ಛಲವಾದಿ ಸಮೂಹ ಸಮಾವೇಶದಲ್ಲಿ ಸಿನಿಮಾ ನಟ ಕಂ ಐಎಎಸ್ ಅಧಿಕಾರಿ ಕೆ. ಶಿವರಾಂ!

ಅವರ ಅಮೃತವಾಣಿ ಕೇಳಿ: ನಮಗೆ ಯಾರು ಸಹಾಯ ಮಾಡುತ್ತಾರೋ ಅವರೇ ಅಂಬೇಡ್ಕರ್. ಯಡ್ಯೂರಪ್ಪ ಇದನ್ನು ಮಾಡುತ್ತಿದ್ದಾರೆ. ಆದ್ದರಿಂದ ಅವರೇ ಅಂಬೇಡ್ಕರ್!

ಸಹಾಯ ಅಂದರೆ ಏನು? ತಮ್ಮ ಮೇಲಿನ ಭ್ರಷ್ಟಾಚಾರ ಆಪಾದನೆಗಳನ್ನೆಲ್ಲ ವಜಾ ಮಾಡುವುದಾ ಮಾನ್ಯ ಶಿವರಾಂ ಅವರೆ?

ಇದ್ದರೂ ಇರಬಹುದು. ಯಾಕೆಂದರೆ ಯಡ್ಯೂರಪ್ಪಗೆ ಇಂತಹದರಲ್ಲಿ ಅನುಭವ ಸಾಕಷ್ಟು ಇದೆ. ಬಾಬಾ ಬುಡನ್‌ಗಿರಿ ವಿವಾದದಲ್ಲಿ ಗೂಂಡಾಗಿರಿ ಮಾಡಿದ ಭಜರಂಗಿಗಳ ವಿರುದ್ಧ ಇದ್ದ ಮೊಕದ್ದಮೆಗಳನ್ನೆಲ್ಲ ಹಿಂಪಡೆಯಲಿಲ್ಲವಾ. ಹಾಗೇನೆ ಇದನ್ನೂ ಮಾಡಬಹುದು! ■

ಚೇಲಾಗಿರಿ ಅಂದ್ರೆ ಇದು!

ಗೋಪಾಲ್, ಚೆನ್ನಯ್ಯ

ಮರೆಯುವ ಮುನ್ನ



■ ಪಿ. ಲಂಕೇಶ್ —ಏಪ್ರಿಲ್ 7, 1991

ಗೋಪಾಲಗೌಡರು ತೀರಿಕೊಂಡು ಹತ್ತೊಂಭತ್ತು ವರ್ಷವಾಯಿತು. ಇದು ಅವರು ಸತ್ತ ಅಥವಾ ಹುಟ್ಟಿದ ವಾರ್ಷಿಕ ಎಂಬ ಕಾರಣಕ್ಕೆ ಬರೆಯುತ್ತಿಲ್ಲ, ಅವರು ಹುಟ್ಟಿದ್ದು ಮಾರ್ಚ್ ತಿಂಗಳಲ್ಲಿ, 1923 ನೇ ಇಸ್ವಿಯಲ್ಲಿ, ಆದ್ದರಿಂದ ಇದನ್ನು ಅವರು ಹುಟ್ಟಿದ ನೆನಪಿಗಾಗಿ ಬರೆದ ಪುಟ್ಟ ಟಿಪ್ಪಣಿ ಎಂದು ಬೇಕಾದರೆ ತಿಳಿದುಕೊಳ್ಳಬಹುದು.

ಗೋಪಾಲಗೌಡರನ್ನು ಕುರಿತ ಎರಡು ಪುಸ್ತಕಗಳು ನನ್ನೆದುರಿವೆ. ಅವುಗಳಲ್ಲಿ ಒಂದು ಡಾ. ಎಚ್.ಪಿ. ವಿಷ್ಣುಮೂರ್ತಿ ಬರೆದದ್ದು, ಇನ್ನೊಂದು ವೆಂಕಪ್ಪಗೌಡ ಬರೆದದ್ದು. 'ಗೋಪಾಲಗೌಡ ಶಾಂತವೇರಿ' ಎಂಬ ವಿಷ್ಣುಮೂರ್ತಿಯವರ ಪುಸ್ತಕ ಮತ್ತು 'ಜೀವಂತ ಜ್ವಾಲೆ' ಎಂಬ ವೆಂಕಪ್ಪಗೌಡರ ಪುಸ್ತಕ ಎರಡೂ ಭಟ್ಟಂಗಿಗಳ, ಸೋಮಾರಿಗಳ ಪುಸ್ತಕಗಳು. ವಿಷ್ಣುಮೂರ್ತಿಯಂತೂ ಎಂಥ ಅದಕ್ಷ, ಸೋಮಾರಿ ಮತ್ತು ಮೂರ್ಖನೆಂದರೆ ಈ ಪುಸ್ತಕದಲ್ಲಿ ಯಾವ ಘಟನೆ ಎಂದು ನಡೆಯಿತು, ಗೋಪಾಲಗೌಡರು ಹುಟ್ಟಿದ್ದೆಂದು, ಸತ್ತದ್ದೆಂದು ಎಂಬ ಪ್ರಾಥಮಿಕ ವಿಷಯಗಳು ಕೂಡ ಅದರಲ್ಲಿ ಸಿಕ್ಕುವುದಿಲ್ಲ. ಗೋಪಾಲಗೌಡರಿಗಿಂತಲೂ ತಮ್ಮ ಬಗ್ಗೆ, ತಮ್ಮ ಕುಟುಂಬದ ಮತ್ತು ತಮ್ಮ 'ಗೋಪಾಲಸೇವೆ'ಯ ಬಗ್ಗೆಯೇ ಹೆಚ್ಚು ಬರೆದಿರುವ ಈ ಪುಸ್ತಕ ಜೀವನಚರಿತ್ರೆಯನ್ನು ಹೇಗೆ ಬರೆಯಬಾರದು ಎಂಬುದಕ್ಕೆ ಉದಾಹರಣೆಯಂತಿದೆ. ವೆಂಕಪ್ಪಗೌಡರು ಗೋಪಾಲಗೌಡರನ್ನು ಬಲ್ಲವರಿಂದ ಲೇಖನ ಬರೆಸಿದ್ದಾರೆ; ತಾವು ಕೂಡ ಅವರ ಪುಟ್ಟ ಜೀವನ ಚರಿತ್ರೆಯೊಂದನ್ನು ಬರೆದಿದ್ದಾರೆ. ಅದರಲ್ಲಿ ಗೋಪಾಲ್ ಬಗ್ಗೆ ಕನಿಷ್ಠ ಮಾಹಿತಿಗಳಾದರೂ ದೊರೆಯುತ್ತವೆ. ಮೇಲಿನ ಹುಟ್ಟು, ಸಾವು, ದಾಖಲೆ ಅಲ್ಲಿಯದೇ.


ಗೋಪಾಲಗೌಡರ ಆದರ್ಶ, ಕನಸುಗಳೆಲ್ಲ ಕಮರಿಹೋದದ್ದು, ಅವರ ಆರೋಗ್ಯ ಕೂಡ ಕೆಟ್ಟುಹೋದದ್ದು, ಅವರು ತಮ್ಮ 49 ನೇ ವಯಸ್ಸಿನಲ್ಲಿಯೇ ತೀರಿಕೊಂಡದ್ದು-ಇವತ್ತು ಹಿನ್ನೋಟಕ್ಕೆ, ಮರುವಿಮರ್ಶೆಗೆ ತಕ್ಕುದಾಗಿದೆ ಅನ್ನಿಸುತ್ತದೆ. ಗೋಪಾಲಗೌಡರ ಸಮಾಜವಾದಿ ಪಕ್ಷ ಒಂದು ರೀತಿಯಲ್ಲಿ ಗೆಳೆಯರ, ಸ್ನೇಹಜೀವಿಗಳ, ಹುಂಬರ ಗುಂಪಾಗಿತ್ತು. ತಮ್ಮ ಪಕ್ಷಕ್ಕೆ ಅಧಿಕಾರ ದೊರೆಯುವುದು ಸಾಧ್ಯವೇ ಇಲ್ಲ ಎಂದು ನಿಶ್ಚಯಿಸಿ ಹೊರಟವರಂತೆ ಇವರೆಲ್ಲ ಕಾಣುತ್ತಿದ್ದರು. ಆದ್ದರಿಂದ ಈ ಪಕ್ಷದಿಂದ ಕೆಲವರು ಶಾಸಕರಾಗಿ ಗೆದ್ದಾಗಲೂ ಅವರು ಆಕಸ್ಮಾತ್ತಾಗಿ ಗೆದ್ದಂತೆ, ಪಕ್ಷೇತರರ ಗೆಲುವೆಂಬಂತೆ ಕಾಣುತ್ತಿತ್ತು. ಇದನ್ನು ಬಹಳ ಯೋಚಿಸಿ ಹೇಳುತ್ತಿದ್ದೇನೆ. ಸೋಷಲಿಸ್ಟ್ ಪಕ್ಷದಿಂದ ಮೂರು ಜನ ಅಥವಾ ಐದು ಜನ ಗೆದ್ದಿದ್ದಾಗ ಕೂಡ ಇವರಿಂದ ಸಂಘಟನೆ ಮಾಡಲಾಗಲಿಲ್ಲ; ಪಕ್ಷದ ಕನಿಷ್ಠ ವೆಚ್ಚಕ್ಕಾಗಿ ನಿಧಿ ಸಂಗ್ರಹಿಸಲಾಗಲಿಲ್ಲ, ಈ ಪಕ್ಷದ ಅಧ್ಯಕ್ಷ ಕೂಡ ಬಸ್ಸಿನಲ್ಲಿ ಹೋಗಲು ಕೂಡ ಕಾಸಿಲ್ಲದೆ, ವಾಸಿಸಲು ಮನೆ ಇಲ್ಲದೆ ಇರುತ್ತಿದ್ದರು. ಇದೊಂದು ಅದಕ್ಷತೆ, ನಿರ್ಲಕ್ಷ್ಯ, ಭ್ರಮೆ ಮತ್ತು ಮೋಜಿನ ಕತೆ. ಇವತ್ತಿನ ಬಂಗಾರಪ್ಪ ಪಟೇಲ್, ಮಹೇಶ್ವರಪ್ಪ, ಕಾಗೋಡು ತಿಮ್ಮಪ್ಪ-ಇಂಥವರನ್ನು ನೋಡಿದರೇ ಈ ಪತನದ ಕಲ್ಪನೆ ನಿಮಗೆ ಬರುತ್ತದೆ.



ಗೋಪಾಲಗೌಡರ ಪ್ರತಿಮೆ

ಇದನ್ನು ಗೋಪಾಲಗೌಡರನ್ನು ಟೀಕಿಸಲು ಹೇಳುತ್ತಿಲ್ಲ; ಅವರ ಹುಮ್ಮಸ್ಸೆಲ್ಲ ಹೇಗೆ ಕರಗಿಹೋಯಿತೆಂದು ಸೂಚಿಸಲು ಮಾತ್ರ ಹೇಳುತ್ತಿದ್ದೇನೆ. ವಿಷ್ಣುಮೂರ್ತಿಯವರ ಕೆಟ್ಟ ಪುಸ್ತಕದಲ್ಲಿ ಒಂದು ಕುತೂಹಲಕರ ಸಂಗತಿ ಇದೆ. ಗೋಪಾಲಗೌಡರು ಆಗ ಸುಸ್ತಾಗಿದ್ದರು; ಕ್ರಮೇಣ ಭ್ರಮನಿರಸನಗೊಳ್ಳತೊಡಗಿದ್ದರು. ಆಗ ಹನುಮಂತಯ್ಯನವರೊಂದಿಗೆ ಸದಾ ಜಗಳವಾಡುತ್ತಿದ್ದ ಸಾಹುಕಾರ್ ಚೆನ್ನಯ್ಯ ಕಾಂಗ್ರೆಸ್ಸಿನಲ್ಲಿ ಬಂಡೆದ್ದು ಭಿನ್ನಮತೀಯರಾಗಿ ಹೊರಬಂದರು; ಜನತಾ ಪಕ್ಷ ಎಂಬ ಪಕ್ಷವನ್ನು ಕಟ್ಟಿದರು. ಬಹುಪಾಲು ನಿರಕ್ಷರಕುಕ್ಷಿಯಾಗಿದ್ದ, ವೃತ್ತಪತ್ರಿಕೆಗಳ ಗೇಲಿಗೆ ಗುರಿಯಾಗುತ್ತಿದ್ದ, ಮೈಸೂರಿನ ಕನ್ನೇಗೌಡನ ಕೊಪ್ಪಲ ಕುಸ್ತಿಪಟುಗಳ 'ಹೀರೋ' ಎಂದು ಮಾತ್ರ ಹೆಸರಿಸಿಕೊಳ್ಳುತ್ತಿದ್ದ ಸಾಹುಕಾರ್ ಚೆನ್ನಯ್ಯ ಚುನಾವಣೆಗಳಿಗೆ ತಮ್ಮ ಜನರನ್ನು ಸಿದ್ಧಗೊಳಿಸಿ ಜನತಾಪಕ್ಷ ಎಂಬ ಪಕ್ಷ ಕಟ್ಟಿ ಇಪ್ಪತ್ತು ಸ್ಥಾನ ಗೆದ್ದರು. ಇದನ್ನು ಕಂಡ ಗೋಪಾಲಗೌಡರು ಬೆರಗಾದರು. ಹತ್ತಾರು ವರ್ಷ ಸೋಷಲಿಸ್ಟ್ ಪಕ್ಷ ಕಟ್ಟಲು ಪ್ರಯತ್ನಿಸಿ ಕುಗ್ಗಿಹೋಗಿದ್ದ ಗೋಪಾಲಗೌಡರು ಸಾಹುಕಾರ್ ಚೆನ್ನಯ್ಯನವರ ಬಗ್ಗೆ ಇದ್ದ ಅಪಚಾರವನ್ನು ಭೇದಿಸಿ ನೋಡಿದರು. ಅವರಿಗೆ ಆತ ಮಣ್ಣಿನ ಮಗನಂತೆ, ಬಡವರಿಗಾಗಿ ಹೋರಾಡುವವನಂತೆ, ಕರ್ನಾಟಕದ ಏಕೀಕರಣಕ್ಕಾಗಿ ದುಡಿದವನಂತೆ, ಅಕ್ಷರಸ್ಥ ರಾಜಕಾರಣಿಗಳ ಗಿಲೀಟು, ಪ್ರದರ್ಶನವಿಲ್ಲದ ದಿಟ್ಟ ಮನುಷ್ಯನಂತೆ ಕಂಡರು. ನಮ್ಮ ಪತ್ರಿಕಾರಂಗ ಮತ್ತು ಸುಶಿಕ್ಷಿತ ವರ್ಗ ಸಾಹುಕಾರ್ ಚೆನ್ನಯ್ಯನವರಂಥವರಿಗೆ ಅನ್ಯಾಯ ಮಾಡಿರುವುದು ಗೊತ್ತಾಯಿತು. ಇದನ್ನು ತಿಳಿದುಕೊಂಡ ಗೋಪಾಲಗೌಡರು ಪತ್ರಕರ್ತನೊಬ್ಬನಿಗೆ ಚೆನ್ನಯ್ಯನವರ ಬಗ್ಗೆ ವಿಷಯ ಸಂಗ್ರಹಿಸಿ ಪುಸ್ತಕ ಬರೆಯಲು ಹೇಳಿದರು. ಆ ಪತ್ರಕರ್ತ ಬರೆಯಲಿಲ್ಲ; ಅದು ಕೂಡ ಇನ್ನೊಂದು ಪತನದ ಕತೆ. ■

ತೊಂಭತ್ತರ ಕಲಿ: ಪ್ರೊ. ಎಲ್‌ಬಿ



ಇಡಗೂರು ಭೀಮೇಶ್ವರನ
ಕಾರುಣ್ಯ ಶಿಶು
ಹೆಸರು ಬಸವರಸ
ಕವಿದಿತ್ತು ಕತ್ತಲೆ ಬಾಲ್ಯದಂಗಳ ತುಂಬ
ಬೆಳೆವ ಛಲವಿತ್ತು ದಾರಿದೀಪ
ಸಿದ್ಧಗಂಗೆಯ ಕೃಪೆಗೆ
ಕರೆತಂದು ನಿಲಿಸಿತ್ತು ತಾಯ ಕರುಳು

ಬುದ್ಧ ಬಸವ ಏಸು
ಜಿನತೀರ್ಥಂಕರರ ಗರಡಿಯಲ್ಲಿ
ನಡೆದ ಅವಿರತ ಸಾಧನೆ
ಒಳ ಹೊರಗೆ ಏಕತ್ರ
ಸಾಮ್ರಾಜ್ಯ ವಿಸ್ತರಣೆ

ಶತಮಾನದುದ್ದಕ್ಕೂ
ಅನುಸಂಧಾನ ಕಾಯಕ
ಅಳೆಯಲಾಗದ ಸುಗ್ಗಿ ಮಾಡಿಯೂ
ದಣಿವರಿಯದ ಧೀರ
ಬಯಸಿ ಬಂದರೂ
ಲಕ್ಷ್ಮೀ ಸರಸ್ವತಿ ಕೀರ್ತಿ
ಮುಂಬಾಗಿಲನ್ನಷ್ಟೇ ತೆರೆದ ಶೂರ

ಮಾತಿನಬ್ಬರದಲ್ಲಿ ಮುಳುಗಿರಲು ಜಂಗುಳಿ
ಕೃತಿಯಿಂದ ಉತ್ತರಿಸಿ ತೃಪ್ತಿಗೊಂಡವರು
ಕಛೇರಿ ಪರಿಚಾರಕರ ಪಂಚಮರ
ಬೀದಿ ಬದಿಯ ಅಮಾಯಕರ
ಎತ್ತಿ ಆನಂದಿಸಿದವರು

ಕಿತ್ತೊಗೆದು ನೂರೆಂಟು ಮಡಿ ಮೈಲಿಗೆ
ಹೊಸ ಕಳೆ ಕೊಟ್ಟು 'ಕುಸುಮ ಬಾಲೆ'ಗೆ
ಅಪ್ರಮೇಯರಾದವರು

ನೂರೊಂದು ವಸಂತದ ಐಸಿರಿಯ ಹರಸಿ
ಭಟ್ಟಿಯಲ್ಲಿ ಅರಳಿದೆ ಈ ಕಾವ್ಯಕುಸುಮ
ಅರ್ಪಿತವಿದೊ ನಮ್ಮ ನುಡಿನಮನ

■ ಡಾ. ನೀಲಗಿರಿ ತಳವಾರ

ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟಲಿ

ಹೊಗಳಿಕೆ

ಮಾನವನಿಗೆ ಅನೇಕ ದಾಹಗಳಿವೆ. ಅದರಲ್ಲಿ ಯುದ್ಧ ದಾಹವೂ ಒಂದು. ಯುದ್ಧ ಎನ್ನುವುದು ಆಧುನಿಕ ಯುಗದಲ್ಲಿ ಯಾವ ಸ್ವರೂಪದಲ್ಲಿರುತ್ತವೆ ಎಂಬುದನ್ನು ಊಹಿಸಿದರೆ 'ಅದರಿಂದ ಸರ್ವನಾಶವಾಗುತ್ತದೆ' ಎಂಬುದು ಅರ್ಥವಾಗುತ್ತದೆ. ಆದರೆ ಇವತ್ತೂ ಕತ್ತಿ, ಗುರಾಣಿ ಹಿಡಿದು ಹೋರಾಡಿ ಮಡಿದ ಮಹಾಭಾರತದ ಯುದ್ಧಗಳಂತೆ ಆಧುನಿಕ ಯುದ್ಧ ಕೂಡ ಸೀಮಿತ ಕ್ಷೇತ್ರಗಳಲ್ಲಿ ಮಾತ್ರ ಪರಿಣಾಮ ಬೀರುತ್ತದೆ ಎಂದು ಕೆಲವು ಕಮಂಗಿಗಳು ಭಾವಿಸಿರುವಂತಿದೆ. ಶೀತವಿದೆಯೆಂದು ಮೂಗು ಕೊಯ್ದುಕೊಳ್ಳಬಾರದೆಂದು ಸೂಕ್ತ ಎಚ್ಚರಿಕೆ ನೀಡಿದ ಪತ್ರಿಕೆಯ ಕಾಳಜಿಯು ಎರಡೂ ದೇಶಗಳ ಜವಾಬ್ದಾರಿ ಸ್ಥಾನದಲ್ಲಿದ್ದವರಿಗೆ ಇದ್ದರೆ ಸಾಕು.

ಜನರಿಗೆ ತಿನ್ನಲು ಅನ್ನ, ದುಡಿಯಲು ಉದ್ಯೋಗ ನೀಡುವಲ್ಲಿ ವಿಫಲವಾಗುತ್ತಿರುವ ಎರಡೂ ದೇಶಗಳು ಯುದ್ಧಕ್ಕಾಗಿ ಮಾತ್ರ ಸಾಕಷ್ಟು ಸನ್ನದ್ಧರಾಗುತ್ತಿರುವುದು ಬೇಸರದ ಸಂಗತಿ. ಬಾಯಿಬಟ್ಟರೆ ಬಾಂಬ್, ಕ್ಷಿಪಣಿ ಎನ್ನುವ ದೇಶಗಳೆರಡಕ್ಕೂ ತಮ್ಮ ಪ್ರಜೆಗಳು ಕನಿಷ್ಠ ಮಟ್ಟದ ಸೌಲಭ್ಯಗಳೂ ಇಲ್ಲದೆ ಬದುಕುತ್ತಿರುವುದು ಗಮನಕ್ಕೆ ಬರುವುದೇ ಇಲ್ಲವೇ? ಅಪಾರವಾದ ಮಾನವ ಸಂಪನ್ಮೂಲವನ್ನು ಉತ್ಪಾದನಾ ವಲಯಕ್ಕೆ ತೊಡಗಿಸಿ ಆ ಮೂಲಕ ಮಾನವ ಕಲ್ಯಾಣಕ್ಕೆ ಶ್ರಮಿಸಬೇಕಾದ ಯುವಶಕ್ತಿಯನ್ನು ಮನುಕುಲದ ನಾಶಕ್ಕೆ ಬಳಸುತ್ತಿರುವುದು ಪಾಕಿಸ್ತಾನಕ್ಕೆ ಶೋಭೆ ತರಲಾರದು.

ಎಲ್ಲರಿಗೂ ದೊಡ್ಡಣ್ಣನಂತೆ ಗೋಚರಿಸುತ್ತಲೇ ತನ್ನ ಸಣ್ಣತನದಿಂದ ಇಂದು ಅಂತರರಾಷ್ಟ್ರೀಯವಾಗಿ ಅವಮಾನಕ್ಕೊಳಗಾಗುತ್ತಿರುವ ಅಮೆರಿಕ ಒಂದೇ ಕಲ್ಲಿನಲ್ಲಿ ಹಲವು ಹಕ್ಕಿಗಳನ್ನು ಹೊಡೆಯಲು ಅಣಿಯಾಗುತ್ತಿರುವುದನ್ನು ಜನತೆಗೆ ತಿಳಿಸಿದ್ದಕ್ಕೆ ಧನ್ಯವಾದಗಳು. ಅಮೆರಿಕ ಮೇಲಾದ ದಾಳಿಯ ನೆಪವೊಡ್ಡಿ ಅಫಘಾನಿಸ್ತಾನದ ಮೇಲೆ ಹಿಡಿತ ಸಾಧಿಸಿ, ಭಾರತ ಪಡೆಯಬಹುದಾದ ಅನಿಲ ಮತ್ತು ತೈಲೋತ್ಪನ್ನ ಮಾರ್ಗಕ್ಕೆ ತಡೆಯೊಡ್ಡಿ, ಭಾರತವನ್ನು ಸ್ವಾವಲಂಬಿಯಾಗಿ ಬೆಳೆಯಲು ಬಿಡದೆ ತನ್ನಲ್ಲಿರುವ 'ಅಣ್ವಸ್ತ್ರ' ಖರೀದಿಸುವಂತೆ ಒತ್ತಡ ಹೇರಿದ್ದಲ್ಲದೇ ಆರ್ಥಿಕವಾಗಿ, ವೈಜ್ಞಾನಿಕವಾಗಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಚೀನಾಕ್ಕೆ ಅಡ್ಡಗಾಲು ಹಾಕಿದ್ದು, ಭಾರತ ಮತ್ತು ಪಾಕ್‌ಗಳನ್ನು ಯುದ್ಧ ತಾಣಗಳನ್ನಾಗಿ ಮಾಡಿಕೊಳ್ಳುವ ಹುನ್ನಾರದಿಂದ ಎರಡು ದೇಶಗಳ ಮಧ್ಯಸ್ಥಿಕೆ ವಹಿಸುತ್ತಿರುವುದು ಮತ್ತು ಕುಟಿಲಗಿತ್ತಿಯಂತೆ ಕೆಲಸ ಮಾಡುತ್ತಿರುವುದನ್ನು ಜನತೆಗೆ ತಿಳಿಸಿದ್ದೀರಿ.

ಹೊಸವರ್ಷದ ಹೊಸ್ತಿಲಲ್ಲಿ ಎರಡು ದೇಶಗಳ ಸೈನಿಕರ ಪ್ರಾಣ ಮತ್ತವರ ಕುಟುಂಬದವರ ನೆಮ್ಮದಿ ಉಳಿದರೆ ಸಾಕು. ನಾಡಿಗಾಗಿ ಸತ್ತರೆ ವೀರ ಸ್ವರ್ಗ, ಧರ್ಮಕ್ಕಾಗಿ ಸತ್ತರೆ ಅಲ್ಲಾಹು ಪಾದ ಎಂಬ ಬೊಗಳೆಯನ್ನು ಬಿಟ್ಟು ಉಣ್ಣುವ ಬಾಯಿಗೆ ಅನ್ನ ಕೊಟ್ಟು, ದುಡಿಯುವ ಕೈಗೆ ಉದ್ಯೋಗ ನೀಡಿ, ಶಿಕ್ಷಣ, ಆರೋಗ್ಯ, ರಸ್ತೆ ಇವುಗಳ ಉದ್ಧಾರಕ್ಕಾಗಿ ಧನವಿನಿಯೋಗಿಸಿ ಸಮೃದ್ಧಿಯೆಡೆ ಸಾಗೋಣ. 'ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟಲಿ' ಎಂಬ ಕವಿವಾಣಿಯನ್ನು ನಿಜಗೊಳಿಸೋಣ. ಪತ್ರಿಕೆಯ ಮನುಕುಲದ ಕಾಳಜಿಗೆ ಮತ್ತು ಬದ್ಧತೆಗೆ ಧನ್ಯವಾದಗಳು.

ಹೊಸವರ್ಷದ ಶುಭಾಷಯಗಳೊಂದಿಗೆ

-ಮಂಜಣ್ಣ ಸೊರಬ

ವಿರೋಧ


ಜೀವನ ಚಿತ್ರ

ಬಿದಲಾವಣೆಯ ಆಶಯಗಳನ್ನು ಹೊಂದಿದ್ದ ವ್ಯಕ್ತಿಯೊಬ್ಬ ತನ್ನ ಮೇಲೆ ಟೀಕಾಕಾರರು ನಡೆಸಿದ್ದ ದಾಳಿಯಿಂದ ಕಂಗಾಲಾಗಿ ಗುರುಗಳನ್ನು ಮಾತನಾಡಿಸಲು ಬಂದ.

ಗುರುಗಳು ಆತನಿಗೆ ಎರಡು ಉಪದೇಶಗಳನ್ನು ನೀಡಿದರು.

ಒಂದು: "ನಿನ್ನ ಟೀಕಾಕಾರರ ಮಾತುಗಳನ್ನು ಸರಿಯಾಗಿ ಆಲಿಸು. ಏಕೆಂದರೆ ನಿನ್ನ ಸ್ನೇಹಿತರು ನಿನ್ನಿಂದ ಬಚ್ಚಿಟ್ಟಿರುವುದನ್ನು ಅವರು ಹೇಳುತ್ತಾರೆ."

ಎರಡು: "ಆದರೆ ಟೀಕಾಕಾರರ ಮಾತುಗಳಿಂದ ನೀನು ಜರ್ಝರಿತನಾಗಬೇಡ. ಏಕೆಂದರೆ ಟೀಕಾಕಾರರಿಗೆಂದೂ ಪ್ರತಿಮೆಗಳನ್ನು ಸ್ಥಾಪಿಸುವುದಿಲ್ಲ. ಬದಲಾಗಿ ಟೀಕೆಗೆ ಒಳಗಾದವರ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತದೆ."



ವಿಚಾರಣಾ ಆಯೋಗಗಳು ಹಾಗೂ ಅಲ್ಪಸಂಖ್ಯಾತರು

ದೇಶದ ಹಿಂದುಳಿದವರ, ದಲಿತರ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ಸರಕಾರ ಆಯೋಗಗಳನ್ನು ನೇಮಕ ಮಾಡುತ್ತದೆ. ಅವುಗಳಿಗೆಂದು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ವರದಿಗಳನ್ನು ಪಡೆವ ಸರ್ಕಾರ ಆನಂತರ ಅವುಗಳನ್ನು ಭದ್ರವಾಗಿ ಪತ್ರಾಗಾರಗಳಲ್ಲಿ ಧೂಳು ಹಿಡಿಯಲು ಇಡಲಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಚುನಾವಣೆಗಳು ಸಮೀಪಿಸುತ್ತಿರುವಂತೆ ಇಂತಹ ಆಯೋಗಗಳ ಶಿಫಾರಸುಗಳನ್ನು ಎಲ್ಲರ ಗಮನಕ್ಕೆ ಬರುವಂತೆ ಪ್ರಚಾರ ನೀಡಿ ಅವುಗಳನ್ನು ಜಾರಿ ಮಾಡುವ ಭರವಸೆ ನೀಡಿ ಅಧಿಕಾರಕ್ಕೆ ಬರುತ್ತವೆ.

ಅಭಿವೃದ್ಧಿಗೆ ಮಾತ್ರವಲ್ಲ, ಕೋಮು ಗಲಭೆ, ಹತ್ಯಾಕಾಂಡ, ಮತಾಂತರ, ಸಾರಾಯಿ ದುರಂತಗಳು ಘಟಿಸಿದ ಕೂಡಲೇ ಪದ್ಧತಿಯಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ನಿವೃತ್ತ ನ್ಯಾಯಮೂರ್ತಿಗಳನ್ನು 'ವಿಚಾರಣಾ ಆಯೋಗ ಕಾಯಿದೆ 1952'ರ ಅನ್ವಯ ನೇಮಕ ಮಾಡಿ ವರದಿ ಬರುವವರೆಗೆ ನೆಮ್ಮದಿಯಾಗಿ ಅಧಿಕಾರಾವಧಿಯನ್ನು ಮುಗಿಸುತ್ತದೆ. ಇದನ್ನು ನೋಡಿ ಮುಸ್ಲಿಮರಲ್ಲಿ ಒಂದು ವ್ಯಂಗ್ಯೋಕ್ತಿ ಇದೆ: "ಮೀಸಲಾತಿ ವರದಿಗಳು ಬಂದ ನಂತರ ದೇಶದ ಹಿಂದೂ ಅಲ್ಪಸಂಖ್ಯಾತರು, ಹಿಂದುಳಿದವರು ಮೀಸಲಾತಿ ಹೆಸರಿನಲ್ಲಿ ಸೌಲಭ್ಯ, ನೌಕರಿ ಪಡೆಯುತ್ತಾರೆ. ಆದರೆ ಅಲ್ಪಸಂಖ್ಯಾತರ ಪಟ್ಟಿಯ ಮೇಲುಗಡೆಯಲ್ಲಿ ಬರುವುದರಿಂದ ಮುಸ್ಲಿಮರಿಗೆ ಯಾವ ಸೌಲಭ್ಯಗಳೂ ಸಿಗುವುದಿಲ್ಲ, ಪ್ರಶ್ನಿಸಿದರೆ ಮತ್ತೊಂದು ಆಯೋಗವನ್ನು ಮಾತ್ರ ಖಂಡಿತ ಪಡೆಯುತ್ತಾರೆ."

ಬಾಬರಿ ಮಸೀದಿಯ ಪತನಾನಂತರ ನಡೆದ ಘಟನೆಗಳನ್ನು ನೋಡಿ. 1992-93ರಲ್ಲಿ ಮುಂಬಯಿಯಲ್ಲಿ ನಡೆದ ವ್ಯಾಪಕ ಕೋಮುಗಲಭೆಯಲ್ಲಿ ಅಪಾರವಾದ ಜೀವಹಾನಿ, ಆಸ್ತಿಪಾಸ್ತಿ ಹಾನಿ ನಡೆದವು. ಆಗ ಸರಕಾರ ಜಸ್ಟೀಸ್ ಕೃಷ್ಣ ಆಯೋಗವನ್ನು ನೇಮಕ ಮಾಡಿತು. ಇನ್ನು ಕೆಲವೇ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್-ಎನ್‌ಸಿಪಿ ಸರಕಾರ ತನ್ನ ಎರಡನೇ ಅಧಿಕಾರಾವಧಿಯನ್ನು ಮುಗಿಸುತ್ತಿದೆ. ಆದರೆ ಈಗಲೂ ಮುಂಬೈ ಗಲಭೆಗಳ ಆರೋಪಿಗಳಿಗಾಗಿ ಪೊಲೀಸರು ಹುಡುಕುತ್ತಿದ್ದಾರೆ!

ಓದುಗರ ಪತ್ರ

ಗುಜರಾತಿ ಗೋಧ್ರಾ ದುರಂತದ ಬೆನ್ನಿಗೆ ನಡೆದ ಅತ್ಯಂತ ಅಮಾನವೀಯ ಘಟನೆಗಳ ನಂತರ ಜಸ್ಟೀಸ್ ಬ್ಯಾನರ್ಜಿ ಹಾಗೂ ನಾನಾವತಿಯವರು ನೀಡಿರುವ ತದ್ವಿರುದ್ಧ ವರದಿಗಳು ನಮ್ಮ ಮುಂದಿವೆ. ಈ ಮಧ್ಯೆ ಮಾನವ ಹಕ್ಕುಗಳ ಆಯೋಗದ ಮುಖ್ಯಸ್ಥ ಹಾಗೂ ನಿವೃತ್ತ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶ ಜೆ.ಎಸ್.ವರ್ಮಾ ಮತ್ತವರ ತಂಡದ ಸದಸ್ಯರಾದ ನಾಲ್ಕು ಜನ ಮಾಜಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಗುಜರಾತಿಗೆ ತೆರಳಿ ಅಧ್ಯಯನ ಮಾಡಿ, ಜನರನ್ನು ಸಂದರ್ಶಿಸಿ ಸಲ್ಲಿಸಿದ ವರದಿ ಕೇಂದ್ರ ಸರಕಾರದ ಮುಂದಿದೆ. ವರದಿಯಲ್ಲಿ ಗುಜರಾತ್ ಸರಕಾರದ ವೈಫಲ್ಯಗಳನ್ನು ಆಯೋಗ ಅತ್ಯಂತ ಕಟುಶಬ್ದಗಳಲ್ಲಿ ಟೀಕಿಸಿದೆ.

ಸುಪ್ರೀಂಕೋರ್ಟ್‌ನ ಹೆಸರಾಂತ ನಿವೃತ್ತ ನ್ಯಾಯಮೂರ್ತಿ ಹಾಗೂ ವಿಚಾರವಾದಿ ವಿ.ಆರ್. ಕೃಷ್ಣ ಅಯ್ಯರ್ ಮತ್ತವರ ಸಹೋದ್ಯೋಗಿ ನಿವೃತ್ತ ನ್ಯಾಯಮೂರ್ತಿಗಳು ಸ್ವತಂತ್ರವಾಗಿ, ಕಾಳಜಿಯುಳ್ಳ ಪ್ರಜೆಗಳಾಗಿ ಗುಜರಾತ್ ಗಲಭೆಗಳ ಕುರಿತು ನೀಡಿದ ವರದಿ ಬಹಳಷ್ಟು ಪತ್ರಿಕೆಗಳಲ್ಲಿ ಬೆಳಕು ಕಾಣಲೇ ಇಲ್ಲ, ವಿ.ಆರ್. ಕೃಷ್ಣ ಅಯ್ಯರ್‌ರವರು ಸರಕಾರವೇ ಸುಳ್ಳನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡಿತು ಎಂದು ವರದಿಯಲ್ಲಿ ಆರೋಪಿಸಿದ್ದಾರೆ. ಯಾವುದೇ ಅಡೆತಡೆ ಇಲ್ಲದೆ ಪ್ರಾರ್ಥನಾ ಮಂದಿರ, ದರ್ಗಾ, ವಾಸಸ್ಥಳಗಳನ್ನು ನೆಲಸಮ ಮಾ[...] ಯಿತು ಇಲ್ಲವೇ ದೇವಸ್ಥಾನಗಳಾಗಿ ಪರಿವರ್ತಿಸಲಾಯಿ[...] ಎಂದಿರುವ ಆ ವರದಿ ಸುಮಾರು 2000 ಮುಸ್ಲಿಮ[...] ಹತ್ಯೆಗಿಡಾದರು; ಕೊಲೆ, ಸುಲಿಗೆ, ಬೆಂಕಿ, ಅತ್ಯಾ[...] ಬಹಿರಂಗವಾಗಿ ನಡೆದವು ಎಂದೂ ಹೇಳಿದೆ.

ಇದೆಲ್ಲದರ ಅರ್ಥ: ಇಲ್ಲಿಯವರೆಗೆ [...] ಸಂಖ್ಯಾತರಿಗೆ ಸಿಕ್ಕಿರುವ ಪರಿಹ[...] ಆಯೋಗಗಳ ರಚನೆ ಮಾತ್ರ. ಯ[...] ಆಯೋಗಗಳ ಶಿಫಾರಸ್ಸುಗಳ[...] ಸರ್ಕಾರ ಜಾರಿಗೆ ತಂದಿಲ್ಲ, [...] ಪರಿಸ್ಥಿತಿ ಸುಧಾರಿಸುವಂತೆ ಕಾ[...] ತ್ತಿಲ್ಲ, ಆದ್ದರಿಂದ ಮುಸ್ಲಿಮ[...] ಯಾರನ್ನೂ ನಂಬದೆ, ನೆಚ್ಚದೆ ದಿನ[...] ಯುತ್ತಿದ್ದಾರೆ.

ಕರ್ನಾಟಕದಲ್ಲಿ 1992-93ರಲ್ಲಿ ಸ[...] ವಿಸಿದ ಭಟ್ಕಳದ ಕೋಮು ಗಲಭೆಗಳ [...] ವಿಚಾರಣೆ ನಡೆಸಲು ಜಸ್ಟೀಸ್ ಕೆ.ಜಗನ್ನಾಥಶೆಟ್ಟಿ ಆಯೋ[...] ಗವನ್ನು ರಚಿಸಲಾಗಿತ್ತು, ಸದರಿ ಪ್ರಕರಣದಲ್ಲಿ ಸುಮಾ[...] 16 ಜನರು ಮರಣ ಹೊಂದಿದ್ದರು.

ಜಸ್ಟೀಸ್ ಎ.ಜೆ. ಸದಾಶಿವ ಆಯೋಗ ಡಿಸೆಂಬ[...] 1998ರಲ್ಲಿ 128 ಜನ ಮಾರಣಾಂತಿಕ ಹಲ್ಲೆಗೆ ಒಳಗಾ[...] ಭಟ್ಕಳ ಕೋಮುಗಲಭೆಗಳ ಬಗ್ಗೆ ನೀಡಿದ ವರದಿಯ[...] ಬಿಜೆಪಿ-ಜೆಡಿಎಸ್ ಸರಕಾರ ಮಾನ್ಯ ಮಾಡಲಿಲ್ಲ, ಸಾರ್ವಜ[...] ರಿಗೆ ವರದಿಯ ಅಂಶಗಳನ್ನು ಬಹಿರಂಗಪಡಿಸಲೂ ಇ[...] ಈಗ ಯಡಿಯೂರಪ್ಪನವರು ಚರ್ಚ್‌ಗಳ ಮೇಲೆ ನಡ[...] ದಾಳಿಯ ಕುರಿತು ವಿಚಾರಣಾ ಆಯೋಗ ನೇಮ[...] ಮಾಡಿದ್ದಾರೆ. ಆದರೆ ಈ ಆಯೋಗದ ವರದಿ ಹೊರಬಂ[...] ನೊಂದವರಿಗೆ ನ್ಯಾಯ ಸಿಗುವುದೇ?

ದೇಶದ ತುಂಬಾ ಪ್ರಚಾರ ಪಡೆದ ಜಸ್ಟೀಸ್ ರಾಜೇಂ[...] ಸಾಚಾರ್‌ರವರು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ವರ[...] ಇವತ್ತು ತೆಪ್ಪಗೆ ಧೂಳು ತಿನ್ನುತ್ತಾ ಕೂತಿದೆ. ಯಾವು[...] ಪತ್ರಿಕೆ, ವಿದ್ಯುತ್ ಮಾಧ್ಯಮಗಳು ಸಾಚಾರ್ ವರದಿ[...] ಶಿಫಾರಸುಗಳ ಬಗ್ಗೆ, ಅವುಗಳ ಅನು[...] ನದ ಅಗತ್ಯದ ಬಗ್ಗೆ ಮಾತನಾಡುತ್ತಿ[...] ಮುಸ್ಲಿಮರ ಅಥವಾ ಅಲ್ಪಸಂಖ್ಯಾತ[...] ಸಮಾಧಾನಕ್ಕಾಗಿ ಸರ್ಕಾರ ಎಷ್ಟೇ ಆಯೋ[...] ಗಳನ್ನು ರಚಿಸಿದರೂ ವಾಸ್ತವವಾಗಿ ಮು[...] ಮರು ಹಾಗೂ ಇತರೆ ಅಲ್ಪಸಂಖ್ಯಾತ[...] ಶಿಕ್ಷಣ, ಆರೋಗ್ಯ ಉದ್ಯೋಗ ಮುಂತಾ[...] ಕ್ಷೇತ್ರಗಳಲ್ಲಿ ಕೆಳಹಂತದಲ್ಲೇ ಇದ್ದಾರೆ. ಪ್[...] ಊರು-ನಗರಗಳಲ್ಲಿ ಮುಸ್ಲಿಮರು ಪ್ರತ್ಯೇಕವಾ[...] ವಾಸಿಸುತ್ತಿರುವುದು ಅಲ್ಪಸಂಖ್ಯಾತರಿಗೆ ಇರುವ ಜೀವಭಯ[...] ಸುರಕ್ಷತೆ ಕುರಿತ ಆತಂಕವನ್ನು ಎತ್ತಿ ತೋರಿಸುತ್ತದೆ. ಇಂತ[...] ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳು ಕನಿಷ್ಠ ದರ್ಜೆಯ[...] ಇಂತಹ ಕಾಲೋನಿಗಳು ದ್ವೀಪಗಳಾಗಿ ಮೂಲಭೂ[...] ವಾದಿಗಳಿಗೆ ಆಸರೆಯಾಗುತ್ತವೆ.

ಆದ್ದರಿಂದ ಆಯೋಗಗಳು ನೀಡುವ ಶಿಫಾರಸ್ಸುಗಳನ[...] ಸರಕಾರ ಬಹಿರಂಗಪಡಿಸಬೇಕು. ವರದಿ ನೀಡಲು ಕಾಲಮಿ[...] ನಿರ್ಧರಿಸಬೇಕು. ಸಾರ್ವಜನಿಕವಾಗಿ ಚರ್ಚೆಯಾಗಲು ಮು[...] ಅವಕಾಶ ನೀಡಬೇಕು. ಜನತೆಯ ಹಿತದೃಷ್ಟಿಯಿಂ[...] ಯೋಗ್ಯವಾದ ಶಿಫಾರಸ್ಸುಗಳನ್ನು ಏಕತೆ, ಸಮಗ್ರತೆ ಹಾಗ[...] ಸಮೃದ್ಧಿಯ ಆಶಯಗಳೊಂದಿಗೆ ಅನುಷ್ಠಾನಗೊಳಿಸಬೇಕು[...]

ದ್ವೇಷ, ಧ್ವಂಸಗಳ ಪ್ರತಿಪಾದಿಸುವ ತತ್ವ
ಧರ್ಮವಲ್ಲ ಸೈತಾನನ ಗ್ರಂಥ
ಮಾನವೀಯತೆ, ಪ್ರೀತಿ, ಅನುಕಂಪ
ಮನುಷ್ಯನ ನಿಜವಾದ ಪಂಥ

-ಎಂ. ಇಕ್ಬಾಲ್ ಹುಸೇನ್[...]
ಹರಿಹ[...]

SMS ಜೋಕ್ಸ್‌ಗಳು



ಹೊಸ ಶಿಶು ಗೀತೆ
Raju Raju ?
Yes Papa
Eating Profit?
No Papa
Cheating, Cheating?
No Papa
Telling lies?
No Papa
Open your balance sheet
Ha, ha, ha

* * * * *

ಹುಡುಗ : ನನಗೆ ಕೈಕೊಟ್ಟ ನನ್ನ ಗರ್ಲ್‌ಫ್ರೆಂಡ್ ಈಗ ಹೊಸಬನೊಂದಿಗೆ ಓಡಾಡುತ್ತಿದ್ದಾಳೆ. ಮೊನ್ನೆ ನನ್ನ ಹೊಟ್ಟೆ ಉರಿಸಲು ಆತನೊಂದಿಗಿರುವ ಫೋಟೋಗಳನ್ನು ಕಳುಹಿಸಿದಳು.

ಗೆಳೆಯ : ಛೆ, ಆಕೆ ಹೀಗೆ ಮಾಡಬಾರದಿತ್ತು,

ಹುಡುಗ : ಪರವಾಗಿಲ್ಲ ಬಿಡು, ಆ ಫೋಟೋಗಳನ್ನು ಅವಳ ಅಪ್ಪನಿಗೆ ಕೊಟ್ಟೆ!

ನೀತಿ : ಹೊಸತನ್ನು ಮಾಡು!

* * * * *

ಆನೆಗಳ ಗುಂಪೊಂದು ರಸ್ತೆ ಬದಿ ನಿಂತಿತ್ತು, ಆಗ ಸೆಕ್ಸಿಯಾಗಿದ್ದ ಹುಡುಗಿ ಆನೆಯೊಂದು ಹಾದು ಹೋದಾಗ ಲೋಫರ್ ಆನೆ ಏನಂತು ಗೊತ್ತಾ?

"ಸಖತ್ತಾಗಿದೆ ಮಗಾ ಈ 360-240-360!"

* * * * *

ಗುಂಡ : ನಾನು ಸತ್ತಾಗ ನನ್ನ ಶವದ ಮೇಲೆ ಒಂದು ಬಾಟ್ಲ ವಿಸ್ಕಿ ಸುರಿಯುವುದನ್ನು ಮರೆಯಬೇಡ.

ಪುಂಡ : ಮರೆಯಲ್ಲ ಗುರು, ಆದರೆ ಆ ವಿಸ್ಕಿನ ಮುಂಚೆನೇ ನಾನು ನನ್ನ ಕಿಡ್ನಿಗಳ ಮೂಲಕ ಫಿಲ್ಟರ್ ಮಾಡಿದ್ರೆ ಪರವಾಗಿಲ್ವಾ?!

* * * * *

ಗಾಂಧಿ, ಸಲ್ಮಾನ್ ಖಾನ್ ಮತ್ತು ಮಲ್ಲಿಕಾ ಅರೋರ ನಡುವಿನ ಸಾಮ್ಯತೆ ಏನು?

ಮೂವರೂ ಬಟ್ಟೆಯನ್ನು ತ್ಯಜಿಸಿದ್ದರು.

ಮೊದಲನೆಯವರು ದೇಶಕ್ಕಾಗಿ

ಎರಡನೆಯವನು ಐಶ್‌ಗಾಗಿ

ಮೂರನೆಯವಳು ಕ್ಯಾಶ್‌ಗಾಗಿ

* * * * *

ರಾವಣ : ಅಮ್ಮಾ ತಾಯಿ ಭಿಕ್ಷೆ ಕೊಡಮ್ಮ

ಆಕೆ : ತಗೊಳ್ಳಿ

ರಾವಣ : ಲೈನ್ ದಾಟಿ ಬಾರಮ್ಮ (ಆಕೆ ಬರುವಳು)

ರಾವಣ : ಹಾ, ಹಾ, ನಾನು ಸ್ವಾಮಿ ಅಲ್ಲ, ರಾವಣ.

ಆಕೆ : ಹಾ, ಹಾ, ನಾನು ಸೀತೆ ಅಲ್ಲ, ಮನೆ ಕೆಲಸದ ಕೆಂಚಮ್ಮ.

* * * * *

ಡಾಕ್ಟರ್ : ನೀವು ಪ್ರೇಮಿಸುವಾಗ ನಿಮ್ಮ ಗಂಡನ ಮುಖವನ್ನು ನೋಡುತ್ತೀರಾ?

ಆಕೆ : ಒಮ್ಮೆ ನೋಡಿದಾಗ ಆತ ತುಂಬಾ ಕೋಪಗೊಂಡಿದ್ದರು.

ಡಾಕ್ಟರ್ : ಏಕೆ?

ಆಕೆ : ಏಕೆಂದರೆ ಅವರು ಕಿಟಕಿ ಆಚೆಯಿಂದ ನೋಡುತ್ತಿದ್ದರು.

ತ್ರಕರ್ತರ ಗ್ರಹಗತಿಯೂ....
ನಾರಾಯಣನ 'ಸಾಚಾ'ತನವೂ...



ಯಾಕೋ ಏನೋ? 2009ರಲ್ಲಿ ಸಿನಿಮಾ ಪತ್ರಕರ್ತರ ಗ್ರಹಗತಿ ನೆಟ್ಟಗಿಲ್ಲದಂತೆ ಸುತ್ತದೆ.

ಇನ್ನು ಮುಂದೆ ಸಾಯಂಕಾಲ 6ರ ನಂತರ ಯಾವುದೇ ಪತ್ರಿಕಾ ಗೋಷ್ಠಿಯನ್ನು ದಬಾರದೆಂದು ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್. ಚಂದ್ರು ಫರ್ಮಾನು ರಡಿಸಿದ್ದಾರೆ. ಅದರ ಬೆನ್ನಲ್ಲೆ ಮೊನ್ನೆ ಶುಕ್ರವಾರ ಬಿಡುಗಡೆಗೊಂಡಿರುವ 'ಚಿಕ್ಕಪೇಟೆಯ ಾಗಳು' ಚಿತ್ರವನ್ನು ಪತ್ರಕರ್ತರಿಗೆ ತೋರಿಸುವುದಿಲ್ಲ ಎಂದು ನಿರ್ಮಾಪಕ .ನಾರಾಯಣ್ ಹೇಳಿದ್ದಾರೆ.


ಇದಕ್ಕೆ ಕಾರಣ ಅವರ ಸುಪುತ್ರ ಪಂಕಜ್ ನಟಿಸಿದ್ದ 'ಚೈತ್ರದ ಚಂದ್ರಮ' ವನ್ನು ವಿಮರ್ಶಕರು ಯದ್ವಾತದ್ವಾ ಬೈದಿದ್ದು. ಪುತ್ರ ವಾತ್ಸಲ್ಯದಿಂದ ಬಿತುಳುಕುತ್ತಿರುವ ನಾರಾಯಣ್ ಅವರ ಮನಸ್ಸಿಗೆ ಆ ವಿಮರ್ಶೆಗಳಿಂದ ಜಿಯಾಗಿದ್ದು ಅವರು ತಮ್ಮ ಹೊಸ ಚಿತ್ರದ ಸ್ಟಿಲ್ ಮತ್ತು ಸುದ್ದಿಗಳನ್ನು ಕೆಗಳಿಗೆ ಕೊಟ್ಟಿಲ್ಲ, ಪತ್ರಕರ್ತರ ಸಹವಾಸವೇ ಬೇಡ ಎಂಬ ತೀರ್ಮಾನಕ್ಕೆ ರು ಬಂದಿದ್ದಾರೆ.

ಆದರೇನಂತೆ, ಅನೇಕ ಪತ್ರಕರ್ತರು 'ಸಾಚಾಗಳು' ಚಿತ್ರವನ್ನು ಮೊದಲ ದಿನವೇ ಯೇಟರ್‌ನಲ್ಲಿ ನೋಡಿ ಬಂದಿದ್ದಾರೆ. ಎಂದಿನಂತೆ ಈ ಚಿತ್ರದಲ್ಲೂ ಟಾಯ್ಲೆಟ್ ಜೋಕ್ಸ್‌ಗಳು ಮತ್ತು ವಾಂತಿ ವಂತಹ ತಮಾಷೆ ದೃಶ್ಯಗಳೇ ತುಂಬಿದೆ. ಹೀಗಾಗಿ ಈ ಚಿತ್ರವನ್ನು ನೋಡದಿರುವುದೇ ವಾಸಿ ಎಂದು ಪ್ರಚಾರ ಡುತ್ತಿದ್ದಾರೆ.

ಒಂದೆಡೆ ಹಿರಿಯ ನಿರ್ದೇಶಕ ಎಸ್. ನಾರಾಯಣ್ ಈ ರೀತಿ ಪತ್ರಕರ್ತರ ಮೇಲೆ ಕತ್ತಿ ಮಸೆಯುತ್ತಿದ್ದರೆ, ನ್ನೊಂದೆಡೆ ಚಿತ್ರರಂಗಕ್ಕೆ ಅಂಬೆಗಾಲಿಡುತ್ತಿರುವ ಪ್ರಜ್ವಲ್ ದೇವರಾಜ್ "ಈ ಸಿನಿಮಾ ಪತ್ರಕರ್ತರಿಗೆ ದಯ-ದಾಕ್ಷಿಣ್ಯ ವೇ ಇಲ್ಲ; ಇವರೆಲ್ಲ ಕ್ರೂರಿಗಳು. ಭಯಂಕರ ವಿಮರ್ಶೆ ಮಾಡಿ ಸಿನಿಮಾ ಕಿಲ್ ಮಾಡ್ತಾರೆ...." ಎಂಬಿತ್ಯಾದಿ ಅರ್ಥ ಬರುವ ರೀತಿಯಲ್ಲಿ ಇಂಗ್ಲಿಷ್ ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿದ್ದಾರೆ. ಇನ್ನೂ ಡಿಗ್ರಿಯನ್ನೇ ಕಂಪ್ಲೀಟ್ ಮಾಡದ ಈ ಚಿಗುರು ಮೀಸೆಯ ಹುಡುಗನಿಂದ ಪತ್ರಿಕೋದ್ಯಮದ ಪಾಠವನ್ನು ಸಿನಿ ಪತ್ರಕರ್ತರು ಕಲಿಯಬೇಕಾಗಿದೆ!



ಈ ಮಧ್ಯೆ ನಿರ್ದೇಶಕ ಪ್ರೇಮ್ ತನ್ನ 'ರಾಜ್' ಚಿತ್ರದ ಚಿತ್ರೀಕರಣಕ್ಕೆ ಬರೀ ಇಬ್ಬರು ಛಾಯಾಗ್ರಾಹಕರನ್ನು ಮಾತ್ರ ಕರೆಸಿದ್ದಾರೆ. ಇದರಿಂದ ಸಹಜವಾಗಿ ಬೇರೆ ಪತ್ರಕರ್ತರಿಗೂ, ಚಾನೆಲ್‌ನವರಿಗೂ ಬೇಸರವಾಗಿದೆ. ಕನ್ನಡ ಚಿತ್ರರಂಗ ತನ್ನ ಅಮೃತ ಮಹೋತ್ಸವಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಉದ್ಯಮ ಮತ್ತು ಪತ್ರಕರ್ತರ ನಡುವಿನ ಸಂಬಂಧ ದಿನದಿಂದ ದಿನಕ್ಕೆ ಹಳಸುತ್ತಿದೆ. ■



ಆದಿತ್ಯನ ಮತ್ತೊಂದು ಯತ್ನ

ಆದಿತ್ಯಬಾಬು ಎಂಬ ತೆಲುಗು ನಟ ಕಂ ನಿರ್ಮಾಪಕ ಮತ್ತೆ ಸುದ್ದಿಯಲ್ಲಿದ್ದಾರೆ. 'ಅಂತೂ ಇಂತೂ ಪ್ರೀತಿ ಬಂತು' ಎಂಬ ಚಿತ್ರದಲ್ಲಿ ನಾಯಕಿ ರಮ್ಯಾ ಜೊತೆ ನಾಯಕನಾಗಿ ಕಾಣಿಸಿಕೊಂಡು ಕನ್ನಡಕ್ಕೆ ಕಾಲಿಟ್ಟ ಈ ಬಾಬು ಈ ಚಿತ್ರದಲ್ಲಿ ಕೋಟಿ ಕೋಟಿ ಕಳೆದುಕೊಂಡರು. ಅನಂತರ ನಟನೆಯ ಸಹವಾಸವೇ ಸಾಕು ಎಂದು ಚಿತ್ರವೊಂದನ್ನು ನಿರ್ಮಿಸಿದರು. ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿದ ಆ ಚಿತ್ರದ ಹೆಸರು 'ಪರಮೇಶಿ ಪಾನ್‌ವಾಲಾ'. ಇಲ್ಲೂ ಕೂಡ ಈ ಬಾಬು ಒಂದೆರಡು ಕೋಟಿಗಳನ್ನು ಕಳೆದುಕೊಂಡರು. ಈಗ ಛಲ ಬಿಡದ ಮಲ್ಲನಂತೆ ಈ ಬಾಬು ಮತ್ತೊಂದು ಚಿತ್ರ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. 'ಗಜ' ಚಿತ್ರದ ನಿರ್ದೇಶಕ ಮಾದೇಶ ನಿರ್ದೇಶಿಸಲಿರುವ ಈ ರಿಮೇಕ್ ಚಿತ್ರದಲ್ಲಿ ಪವರ್‌ಸ್ಟಾರ್ ೇತ್ ನಟಿಸುವುದು ಖಚಿತವಾಗಿದೆ.

ಮೊದಲ ಎರಡು ಪ್ರಯತ್ನಗಳಲ್ಲಿ ಕೈ ಸುಟ್ಟುಕೊಂಡ ಆದಿತ್ಯಬಾಬು ಮೂರನೆಯ ಪ್ರಯತ್ನದಲ್ಲಾದರೂ 'ಮುಕ್ತಿ' ಯುತ್ತಾರೋ ನೋಡೋಣ.

"ರಾಜ್' ಗಿಮಿಕ್!



ಗಿಮಿಕ್ ರಾಜ ನಿರ್ದೇಶಕ ಪ್ರೇಮ್ ಮತ್ತೆ ತನ್ನ ಾಕತನವನ್ನು ಪ್ರದರ್ಶಿಸಿದ್ದಾರೆ.

ಮೊನ್ನೆ 'ರಾಜ್' ಚಿತ್ರದ ಹಾಡಿನ ದೃಶ್ಯವೊಂದಕ್ಕಾಗಿ ್ ಹೊಸ ಗಿಮಿಕ್‌ಅನ್ನು ಕಂಡುಹಿಡಿದರು. ಡಾ.ರಾಜ್ ತೆ ನಟಿಸಿದ ನಾಯಕಿಯರು ರಾಜ್ ಪುತ್ರ ಪುನೀತ್ ನರ್ತಿಸಿದರೆ ಹೇಗಿರುತ್ತೆ? ಎಂಬ ಆಲೋಚನೆ ುತ್ತಂತೆ. ಅಷ್ಟಕ್ಕೆ ಅದೇ ತರಹ ಅರ್ಥ ಬರುವ ತ್ಯವನ್ನು ಬರೆಸಿ ಒಂದು ನೃತ್ಯವನ್ನು ಪ್ಲಾನ್ ಿದರು.

ಅದರಂತೆ ಮೊನ್ನೆ ಪುನೀತ್ ರಾಜ್‌ಕುಮಾರ್ ಜತೆ ಂತಿ, ಭಾರತಿ, ಊರ್ವಶಿ, ಜಯಪ್ರದ, ಜಯಮಾಲ ಈ ಐವರು ನೃತ್ಯ ಮಾಡಿದರು. ಡಾ. ರಾಜ್ ಜತೆ ನಟಿಸಿದ ಈ ುಕಿಯರು ಅವರ ಪುತ್ರ ಪುನೀತ್ ಜತೆ ನಟಿಸುವಾಗ ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಕುಟುಂಬದವರೆಲ್ಲರೂ ಜರಿದ್ದರು.

ಅದಕ್ಕಿಂತಲೂ ಮುಖ್ಯ ವಿಷಯವೆಂದರೆ 'ರಾಜ್'ಗಾಗಿ ಈ ಐದು ಜನ ಮಾಜಿ ಸುಂದರಿಯರು ತಮ್ಮೆಲ್ಲ ಹಮ್ಮು-ಬಿಮ್ಮುಗಳನ್ನು ಗಿಟ್ಟು ಒಟ್ಟು ಸೇರಿದ್ದು ಮೆಚ್ಚಬೇಕಾದದ್ದು. ಈ ಪಂಚತಾರೆಯರಿಗೆ ಅಭಿನಂದನೆಗಳು.



ಭಾರ್ಗವ ಅವರ ಶಿಷ್ಯರಾದ ನಿರ್ದೇಶಕದ ಯೋಗೇಶ್ ಹುಣಸೂರು ಮೂರು-ನಾಲ್ಕು ವರ್ಷಕ್ಕೊಮ್ಮೆ ಚಿತ್ರ ಮಾಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಅದರಂತೆ ಜನವರಿ ಕೊನೆವಾರದಲ್ಲಿ ಅವರ ಹೊಸ ಚಿತ್ರ ಸೆಟ್ಟೇರಲಿದೆ. ಚಿತ್ರದ ಹೆಸರು 'ರಾವಣ'. ಇದು ಕೂಡ ತೆಲುಗು ಚಿತ್ರವೊಂದರ ಭಟ್ಟಿ ಇಳಿಸುವಿಕೆ.

ಯೋಗೇಶ್ ನಿರ್ದೇಶನದ 'ರಾವಣ' ಚಿತ್ರದ ನಾಯಕ ಲೂಸ್ ಮಾದ ಖ್ಯಾತಿಯ ಯೋಗೇಶ್. ಇಬ್ಬರೂ ಯೋಗೇಶ್‌ಗಳು ಸೇರಿ ನಿರ್ಮಾಪಕರ ಯೋಗವನ್ನು ಬದಲಾಯಿಸುತ್ತಾರೋ ಏನೋ?

ಸಿನಿ Bits

■ ಅರುಣ್.ಜಿ

ಬೇಜಾರಾದರಂತೆ ಭಾರತಿ!

ರಾಜ್‌ಕುಮಾರ್ ಅವರೊಂದಿಗೆ ನಟಿಸಿದ್ದ ಐವರು ನಾಯಕಿಯರನ್ನು ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜ್' ಚಿತ್ರದ ಹಾಡೊಂದರಲ್ಲಿ ಕುಣಿಸುತ್ತಿರುವ ನಿರ್ದೇಶಕ ಪ್ರೇಮ್ ತಮ್ಮ ಗಿಮಿಕ್ ಬುದ್ಧಿಯನ್ನು ಮತ್ತೆ ಪ್ರಕಟಿಸಿದ್ದಾರೆ.


ಆದರೆ ಈ ಗಿಮ್ಮಿಕ್ಕಿನ ಬೆನ್ನಿಗೇ ವೈಮನಸ್ಯ ಒಂದು ಭುಗಿಲೆದ್ದಿದೆ.



'ರಾಜ್' ಚಿತ್ರದ ಚಿತ್ರೀಕರಣದಲ್ಲಿ ಪ್ರೇಮ್‌ನ ವರ್ತನೆಯಿಂದ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಬಹಳ ನೊಂದುಕೊಂಡಿದ್ದಾರೆ.

ಮೊನ್ನೆ ಜನವರಿ ಒಂಭತ್ತನೇ ತಾರೀಖು ಉತ್ತರಹಳ್ಳಿಯಲ್ಲಿ ನಡೆಯುತ್ತಿದ್ದ ಚಿತ್ರೀಕರಣಕ್ಕೆ ಬೆಳಿಗ್ಗೆ ಎಂಟೂವರೆ ಗಂಟೆಗೆ ಭಾರತಿಯವರನ್ನು ಕರೆಸಿ ಮೇಕಪ್ ಬಳಿದು ಕೂರಿಸಿದ್ದರಂತೆ. ಆದರೆ ಮಧ್ಯಾಹ್ನ ಹನ್ನೆರಡೂವರೆ ಆಗಿ ಯೂನಿಟ್‌ನ ಹುಡುಗರೆಲ್ಲಾ ಲಂಚ್ ಬ್ರೇಕ್‌ಗಾಗಿ ರೆಡಿಯಾಗುವ ಹೊತ್ತಿಗೆ 'ಶಾಟ್ ರೆಡಿ' ಎಂದಿದ್ದಾರೆ ಪ್ರೇಮ್. ಹೀಗೆ ಎಕ್ಸ್‌ಟ್ರಾ ನಟಿಯರ ಬಳಿ ವರ್ತಿಸಿದ ಹಾಗೆ ಭಾರತಿಯವರನ್ನು ಟ್ರೀಟ್ ಮಾಡಿರುವುದರಿಂದ ಮೇಡಂ ಸಖತ್ ಫೀಲ್ ಮಾಡಿಕೊಂಡಿದ್ದಾರೆ ಅನ್ನೋದು ಪತ್ರಿಕೆಗೆ ಬಂದ ಹಾಟ್ ನ್ಯೂಸ್!

ದೋಸ್ತಿ ಢಮಾರ್!



ತಮಿಳು ಚಿತ್ರವನ್ನು ನಿರ್ದೇಶಿಸಲು ಚೆನ್ನೈ ಕಡೆ ಹೊರಟಿದ್ದ ಗ್ರೇಟ್ ಡೈರೆಕ್ಟರ್ ಓಂ ಪ್ರಕಾಶ್ ಆಸೆ ಢಮಾರ್ ಎಂದಿದೆ!


ಓಂ ಪ್ರಕಾಶ್ ನಿರ್ದೇಶನದ ತಮಿಳು ಚಿತ್ರದಲ್ಲಿ ಅಲ್ಲಿನ ಖ್ಯಾತ ನಟ ಶರತ್ ಕುಮಾರ್ ನಟಿಸಬೇಕಿತ್ತು. ನಾಯಕಿಯಾಗಿ ಸ್ನೇಹಾ ಆಯ್ಕೆಗೊಂಡಿದ್ದಳು. ಇನ್ನು ಈ ಚಿತ್ರವನ್ನು ಕನ್ನಡದ ನಿರ್ಮಾಪಕ ಶಂಕರ್‌ಗೌಡರು ನಿರ್ಮಿಸಬೇಕಿತ್ತು.



ಹಾಗೆಂದು ಆ ಸಿನಿಮಾ ಮಾತ್ರ ನಿಂತುಹೋಗಿಲ್ಲ. ಇದೇ ತಿಂಗಳು 19ನೇ ತಾರೀಖು ಆ ಸಿನಿಮಾ ಚೆನ್ನೈನಲ್ಲಿ ಸೆಟ್ಟೇರುತ್ತಿದೆ. ಆದರೆ ಬದಲಾಗಿರುವುದು ನಿರ್ದೇಶಕ ಮಾತ್ರ. ತನ್ನ ಜಿಗರಿ ದೋಸ್ತಿಯಾಗಿದ್ದ ಓಂ ಪ್ರಕಾಶ್‌ರ ವರ್ಕಿಂಗ್ ಸ್ಟೈಲ್‌ಗೆ ಹೆದರಿದ ನಿರ್ಮಾಪಕ ಶಂಕರ್‌ಗೌಡ ನಿರ್ದೇಶನದ ಜವಾಬ್ದಾರಿಯನ್ನು ಅಲ್ಲಿನ ಹುಡುಗ ರೂಬನ್ ಎಂಬಾತನಿಗೆ ನೀಡಿದ್ದಾರೆ.

ಇದರಿಂದ ಸಖತ್ ಡಿಸ್ಟರ್ಬ್ ಆಗಿರುವ ಓಂ ಪ್ರಕಾಶ್ ಮಾತ್ರ ತನ್ನ ಮೂತಿಯನ್ನು 'ಕೋತಿ'ಯಂತೆ ಊದಿಸಿಕೊಂಡು ಗುರ್ರ್ ಎನ್ನುತ್ತಿದ್ದಾರೆ.

ತಿಮ್ಮಪ್ಪನ ಪ್ರಸಾದದಲ್ಲಿ ಮೋಸ!




ತನ್ನ ನಿರ್ದೇಶನದ ಚಿತ್ರಗಳ ಪರವಾಗಿ ಸದಾ ಒಂದಿಲ್ಲೊಂದು ಗಿಮಿಕ್ ಮಾಡುವುದು ರಮೇಶ್ ಅರವಿಂದ್ ಅವರ ಹಾಬಿ!

ತಾನೇ ನಿರ್ದೇಶಿಸಿ ನಟಿಸುತ್ತಿರುವ 'ಸಂಕಟ ಇನ್ ವೆಂಕಟ' ಚಿತ್ರದ ಪರವಾಗಿ ಮೊನ್ನೆ ಎಲ್ಲ ಪತ್ರಿಕಾ ಕಚೇರಿಗಳಿಗೆ ಚಿತ್ರದ ಜಾಹೀರಾತು ಹೊಂದಿದ ಒಂದು ಡಬ್ಬಿಯಲ್ಲಿ 'ತಿರುಪತಿ ಲಡ್ಡು' ಕೊಟ್ಟುಕಳುಹಿಸಿದ್ದರು. ಆ ಲಡ್ಡುವನ್ನು ಬಹಳಷ್ಟು ಪತ್ರಿಕೆಯ ಸಿಬ್ಬಂದಿ ಕಣ್ಣಿಗೆ ಒತ್ತಿಕೊಂಡು ತಿರುಪತಿ ತಿಮ್ಮಪ್ಪನನ್ನು ಭಕ್ತಿಯಿಂದ ನೆನೆದು ಬಾಯಿಗಿಟ್ಟುಕೊಂಡಿದ್ದರು.

ಆದರೆ ಈಗ ಬಂದಿರುವ ಸುದ್ದಿಯೆಂದರೆ; ಆ ಪ್ರಸಾದ ತಯಾರಾಗಿ ಪ್ಯಾಕ್ ಆಗಿದ್ದು ತಿರುಪತಿಯಲ್ಲಲ್ಲ, ಬದಲಾಗಿ ಬೆಂಗಳೂರಿನಲ್ಲೇ ಇರುವ ಆನಂದ್ ಭವನ್ ಎಂಬ ಸ್ವೀಟ್‌ಸ್ಟಾಲ್‌ನಲ್ಲಿ ಅನ್ನೋದು!

ಸದ್ಯ 'ವೆಂಕಟ'ನ ಪ್ರಸಾದ ತಿಂದವರ ಪರಿಸ್ಥಿತಿಯಲ್ಲಿ ಇನ್ನೂ ಯಾವುದೇ 'ಸಂಕಟ' ಕಾಣಿಸಿಲ್ಲದಿರುವುದೇ ಗುಡ್ ನ್ಯೂಸ್!

ರಾಕ್‌ಲೈನ್ ಸೈಲೆಂಟ್ ಸಿನಿಮಾ



ಸದ್ದುಗದ್ದಲವಿಲ್ಲದೇ ತನ್ನ ಮಾಮೂಲಿ ಶೈಲಿಯಲ್ಲಿ ರಾಕ್‌ಲೈನ್ ವೆಂಕಟೇಶ್ ಇನ್ನೂ ಹೆಸರಿಡದ ಹೊಸ ಚಿತ್ರವೊಂದನ್ನು ಆರಂಭಿಸಿ ಐವತ್ತು ಪರ್ಸೆಂಟ್ ಚಿತ್ರೀಕರಣವನ್ನೂ ಮುಗಿಸಿದ್ದಾರೆ. ದರ್ಶನ್ ಮತ್ತು ನಿಖಿತಾ ಜೋಡಿಯ ಈ ಬಿಗ್ ಬಜೆಟ್ ಚಿತ್ರವನ್ನು ಓಂಪ್ರಕಾಶ್ ನಿರ್ದೇಶಿಸುತ್ತಿದ್ದಾರಂತೆ.

ಓಂ ಪ್ರಕಾಶ್ ನಿರ್ದೇಶನದ 'ಈಶ್ವರ್', 'ಪುಟ್ಟಿ' ಸೇರಿದಂತೆ ಇನ್ನೂ ಎರಡು ಮೂರು ಚಿತ್ರಗಳು ಸಂಪೂರ್ಣಗೊಂಡಿದ್ದರೂ ಅವು ಬಿಡುಗಡೆಯ ಭಾಗ್ಯ ಕಾಣದೇ ಇನ್ನೂ ಡಬ್ಬಿಯಲ್ಲೇ ಕುಳಿತಿರುವುದರಿಂದ ತಮ್ಮ ಹೊಸ ಚಿತ್ರಕ್ಕೆ ಮೊದಲೇ ಪಬ್ಲಿಸಿಟಿ ಕೊಟ್ಟರೆ ಅದು ನೆಗೆಟೀವ್ ಆಗಬಹುದು ಎಂಬ ಕಾರಣಕ್ಕೆ ರಾಕ್‌ಲೈನ್ ಸದ್ದಿಲ್ಲದೇ ಚಿತ್ರ ಮುಗಿಸಿ ಬಿಡುಗಡೆಗೊಳಿಸುವ ಐಡಿಯಾದಲ್ಲಿದ್ದಾರಂತೆ. ■

R B P LANKESH, Kannada Weekly Price Rs. 12/- 21-01-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lo

ಗೊಂದಲಗಳ ಗೂಡಾದ ರಾಜ್ಯ ಪ್ರಶಸ್ತಿಗಳು




2008 ನೇ ಸಾಲಿನ ರಾಜ್ಯ ಪ್ರಶಸ್ತಿ ವಿಜೇತ ಚಿತ್ರಗಳ ಪಟ್ಟಿ ಬಿಡುಗಡೆಗೊಳ್ಳುತ್ತಿದ್ದಂತೆ ಅದರ ವಿರುದ್ಧ ಅಪಸ್ವರಗಳು ಕೇಳಿಬರುತ್ತಿವೆ. ತನಗೆ ಆ ಪ್ರಶಸ್ತಿ ಬೇಕಿತ್ತೆಂದೂ, ತಮ್ಮವರಿಗೆ ಈ ಪ್ರಶಸ್ತಿ ಸಿಗಬೇಕಿತ್ತೆಂದೂ ಕೆಲವರು ತಕರಾರೆತ್ತಲು ಅಣಿಯಾಗಿದ್ದಾರೆ.

ಅದೇನೆ ಇರಲಿ, ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಗುಲಾಬಿ ಟಾಕೀಸ್' ಚಿತ್ರಕ್ಕೆ ಮೊದಲನೆ ಪ್ರಶಸ್ತಿ ಮತ್ತು ಅದರಲ್ಲಿ ನಟಿಸಿರುವ ಉಮಾಶ್ರೀಯವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಸಿಕ್ಕೇ ಸಿಗುತ್ತದೆ ಎಂಬ ಎಲ್ಲರ ಊಹೆ ನಿಜವಾಗಿದೆ. ಆದರೆ ತಕರಾರಿದ್ದಿರುವುದು ಇತರೆ ಪ್ರಶಸ್ತಿಗಳ ಸುತ್ತ.


ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರಕ್ಕೆ ಮೂರನೆ ಸ್ಥಾನ ಸಿಕ್ಕಿರುವುದರಿಂದ ಅದರ ನಿರ್ಮಾಪಕ ಕೊಬ್ರಿ ಮಂಜು ಕೆಂಡಾಮಂಡಲವಾಗಿದ್ದಾರಂತೆ. ವಿಷ್ಣುವರ್ಧನ್ ಅವರ ಭಂಟ ಕಂ ಸಿನಿಮಾ ನಿರ್ಮಾಪಕ ಕಂ ಬಿಜೆಪಿ ಸದಸ್ಯ ವಿಜಯ್ ಕುಮಾರ್ ಅವರು ಆಯ್ಕೆ ಮಂಡಳಿಯಲ್ಲಿದ್ದರೂ ತಮ್ಮ ಚಿತ್ರಕ್ಕೆ ಮೂರನೇ ಸ್ಥಾನ ಸಿಕ್ಕಿದ್ದು ಹೇಗೆಂಬುದು ಮಂಜುಗೆ ಬಿಡಿಸಲಾಗದ ಒಗಟಾಗಿದೆಯಂತೆ.

ಅಂದಹಾಗೆ, ಪ್ರತಿ ವರ್ಷದ ಕೊನೆಯಲ್ಲಿ ಪ್ರಶಸ್ತಿ ಪಡೆಯಲೆಂದೇ ಆತುರಾತುರವಾಗಿ ಸಿನಿಮಾ ಒಂದನ್ನು ಸುತ್ತುವ ರಾಮದಾಸ್ ನಾಯ್ಡು ನಿರ್ದೇಶನದ 'ಮೊಗ್ಗಿನ ಜಡೆ' ಚಿತ್ರಕ್ಕೆ ಎರಡನೆ ಪ್ರಶಸ್ತಿ ಬಂದಿದ್ದಾದರೂ ಹೇಗೆ ಎಂಬುದು ಎಲ್ಲರನ್ನು ಕಾಡುತ್ತಿರುವ ಪ್ರಶ್ನೆ. ಅತ್ತ ಮಕ್ಕಳ ಚಿತ್ರವೂ ಅಲ್ಲದ, ಇತ್ತ ಉತ್ತಮ ಚಿತ್ರವೂ ಅಲ್ಲದ, ಇನ್ನೊಂದೆಡೆ ಬಿಡುಗಡೆಯಂತೂ ಕಂಡಿರದ ಈ ಚಿತ್ರವನ್ನು ಯಾವ ಮಾನದಂಡದ ಮೇಲೆ ಆಯ್ಕೆ ಮಾಡಲಾಯಿತು ಎಂಬ ಪ್ರಶ್ನೆ ಎಲ್ಲೆಡೆಯಿಂದ ಕೇಳಿಬರುತ್ತಿದೆ. ಈ ಮಧ್ಯೆ ಕೆಲ ಕಿಡಿಗೇಡಿಗಳು "ಇದು ನಾಯ್ಡುಗಾರುಗಳ ಸಂಚು" ಎಂದು ಆರೋಪಿಸುತ್ತಿದ್ದಾರೆ. ಅಶೋಕ್ ನಾಯ್ಡು ಎಂಬ ಛಾಯಾಗ್ರಾಹಕ ಆಯ್ಕೆ ಮಂಡಳಿಯಲ್ಲಿದ್ದು, ಕಟ್ಟಾ ಸುಬ್ರಮ್ಹಣ್ಯ ನಾಯ್ಡು ಎಂಬ ಮಂತ್ರಿಯೋರ್ವ ಪ್ರಭಾವ ಬೀರಿದ್ದಕ್ಕೆ ನಾಯ್ಡು ಅವರ 'ಮೊಗ್ಗಿನ ಜಡೆ'ಯಲ್ಲಿ ಪ್ರಶಸ್ತಿ ಎಂಬ ರತ್ನ ಸಿಕ್ಕಿಹಾಕಿಕೊಂಡಿದೆ ಎಂಬುದು ಕಿಡಿಗೇಡಿಗಳ ಉವಾಚ.

ಇವನ್ನೆಲ್ಲ ಬದಿಗಿಟ್ಟು ಹೇಳುವುದಾದರೆ ಹಿರಿಯ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು (ಇಷ್ಟು ತಡವಾಗಿಯಾದರೂ) ಕೊಟ್ಟಿರುವುದು ಮತ್ತು ವಿಷ್ಣುವರ್ಧನ್ ಅವರಿಗೆ ರಾಜ್ ಪ್ರಶಸ್ತಿ ನೀಡಿರುವುದು ಸ್ವಾಗತಾರ್ಹ.



ಪಿ. ಲಂಕೇಶರಿಗೆ ಮತ್ತೊಂದು ಪ್ರಶಸ್ತಿ!



ಪತ್ರಕರ್ತರಾಗುವ ಮುನ್ನ ಚಿತ್ರ ನಿರ್ದೇಶಕರಾಗಿದ್ದ ಪಿ. ಲಂಕೇಶರು ತಮ್ಮ ಅನುಪಸ್ಥಿತಿಯಲ್ಲಿ ಮತ್ತೊಂದು ಪ್ರಶಸ್ತಿಯನ್ನು ಗಳಿಸಿದ್ದಾರೆ.

ಅವರ ಪ್ರಥಮ ನಿರ್ದೇಶನದ ಚಿತ್ರವಾದ 'ಪಲ್ಲವಿ' 1976 ರಲ್ಲಿ ಹಲ... ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿತ್ತು. 1977 ರಲ್ಲಿ ತೆರೆಕಂಡ 'ಅನುರೂ... ಕೂಡ ಕೆಲ ರಾಜ್ಯ ಪ್ರಶಸ್ತಿಗಳನ್ನು ಗಳಿಸಿತ್ತು. ಹಾಗೆಯೇ 1980 ರಲ್ಲಿ ಅವ... ನಿರ್ದೇಶಿಸಿದ ಕೊನೆಯ ಚಿತ್ರ 'ಎಲ್ಲಿಂದಲೋ ಬಂದವರು' ಕೂಡ ರಾಜ್ಯ ಪ್ರ... ಪಡೆದಿತ್ತು.

ಅವರು ನೋಡಿದ ಕೊನೆ ಕನ್ನಡ ಚಿತ್ರ 'ದೇವೀರಿ.' ಅದನ್ನು ಅವರ ಕ... ಕಾದಂಬರಿ 'ಅಕ್ಕ' ಆಧರಿಸಿ ಅವರ ಪುತ್ರಿ ಕವಿತಾ ಲಂಕೇಶ್ ನಿರ್ದೇಶಿಸಿದ್ದ... ಆ ಚಿತ್ರಕ್ಕೂ ಹಲವಾರು ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗ... ಬಂದಿದ್ದವು.

ಈಗ ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂ... ಕಾದಂಬರಿಯನ್ನಾಧರಿಸಿ ಕವಿತಾ ಲಂಕೇಶ್ ನಿರ್ದೇಶಿಸಿರು... 'ಅವ್ವ' ಚಿತ್ರಕ್ಕೆ ಪಿ. ಲಂಕೇಶರಿಗೆ ಅತ್ಯುತ್ತಮ ಕತೆ ಪ್ರ... ಲಭಿಸಿದೆ.

ಇದು ಲಂಕೇಶ್ ಅಭಿಮಾನಿಗಳಿಗೆ ಸಂತ... ಕೊಡುವ ವಿಷಯ!

ಕನ್ನಡ ಚಿತ್ರರಂಗದ ಯಡವಟ್ಟು – ಬಾಲಿವುಡ್‌ನ ಒಗ್ಗಟ್ಟು





ಈ ವಾರ ಪೂಜಾ ಗಾಂಧಿ ನಟಿಸಿದ 'ಅನು', ಜಗ್ಗೇಶ್ ಮತ್ತು ಎಸ್. ನಾರಾಯಣ್ ಜೋಡಿಯ 'ಚಿಕ್ಕಪೇಟೆ ಸಾಚಾಗಳು', ಹೊಸಬರು ನಿರ್ಮಿಸಿದ 'ಟ್ಯಾಕ್ಸಿ ನಂ. 1' ಮತ್ತು ಆನೇಕಲ್ ಬಾಲರಾಜ್ ತನ್ನ ಮಗನಿಗಾಗಿ ನಿರ್ಮಿಸಿದ 'ಕೆಂಪ'.... ಹೀಗೆ ನಾಲ್ಕು ಚಿತ್ರಗಳು ಒಂದೇ ದಿನ ತೆರೆಕಂಡಿವೆ.

ಮುಂದಿನ ವಾರ ಕೆ.ಜಿ.ರಸ್ತೆಯಲ್ಲಿ ಅಕ್ಕಪಕ್ಕ ಇರುವ ತ್ರಿವೇಣಿ ಮತ್ತು ಅಪರ್ಣ ಚಿತ್ರಮಂದಿರಗಳಲ್ಲಿ ಎರಡು ದೊಡ್ಡ ಸಿನಿಮಾಗಳು ತೆರೆ ಕಾಣಲಿವೆ. ಅಪರ್ಣದಲ್ಲಿ ಗಣೇಶ್ ನಟನೆಯ 'ಸರ್ಕಸ್', ಪಕ್ಕದ ಥಿಯೇಟರ್‌ನಲ್ಲಿ 'ಶಿವಮಣಿ'. ಕಳೆದವಾರ ಮೂರು ಚಿತ್ರಗಳು ತೆರೆಕಂಡು ಎಲ್ಲಾ ಎಕ್ಕುಟ್ಟಿಹೋಗಿದ್ದವು.

ಕನ್ನಡ ಚಿತ್ರರಂಗದಲ್ಲಿ ಪ್ರತಿ ಶುಕ್ರವಾರ ಹೀಗೆ ಮೂರ್ನಾರು ಚಿತ್ರಗಳು ತೆರೆಕಂಡು ನಿರ್ಮಾಪಕರು ಮನೆಮಠ ಕಳೆದುಕೊಳ್ಳುವಂತಾಗಿದೆ. ಪ್ರತಿವಾರವೂ ಥಿಯೇಟರ್‌ಗಾಗಿ ನಿರ್ಮಾಪಕರು ಚೇಂಬರ್‌ನಲ್ಲಿ ಹೊಡೆದಾಡಿಕೊಳ್ಳುವ ಪರಿಸ್ಥಿತಿ ಬಂದಿದೆ.

ವಿಮರ್ಶಕರಿಂದ ಒಳ್ಳೆಯ ಚಿತ್ರವೆನಿಸಿಕೊಂಡಿದ್ದ 'ನೀನ್ಯಾರೇ' ಚಿತ್ರವನ್ನು ಒಂದೇ ವಾರಕ್ಕೆ ಎತ್ತಂಗಡಿ ಮಾಡಲಾಯಿತು. ಆ ಚಿತ್ರದ ನಿರ್ಮಾಪಕರ ಅಳಲನ್ನು ಗಾಂಧಿನಗರದಲ್ಲಿ ಕೇಳುವವರ್ಯಾರು ಇರಲಿಲ್ಲ. ಆದಾದ ನಂತರ ಈಗ 'ರಾಕಿ' ಚಿತ್ರಕ್ಕೆ ಅದೇ ದುರ್ಗತಿ ಒದಗಿ ಬಂದಿದೆ. ಚಿತ್ರ ಗಳಿಕೆ ಪರವಾಗಿಲ್ಲ ಎಂದೆನಿಸಿಕೊಂಡಿದ್ದರೂ ಅವರೀಗ 'ಶಿವಮಣಿ'ಗೆ ದಾರಿ ಬಿಟ್ಟುಕೊಡಲೇಬೇಕಾಗಿದೆ. ತೆಲುಗಿನ 'ಅನಸೂಯ' ಚಿತ್ರವನ್ನು 'ಅನು' ಎಂದು ಕನ್ನಡಕ್ಕೆ ಭಟ್ಟಿ ಇಳಿಸಿದ ನಿರ್ಮಾಪಕರ ಸಂಕಷ್ಟವನ್ನು ಹೇಳತೀರಲಾಗದು. ಚಿತ್ರ ಬಿಡುಗಡೆಯಾಗುತ್ತೋ ಇಲ್ಲವೋ ಎಂದು ಗುರುವಾರದ ತನಕವೂ ನಿರ್ಮಾಪಕರಿಗೆ ನಂಬಿಕೆ ಇರಲಿಲ್ಲ. ಕೊನೆಗೆ ಅಭಿನಯ್ ಥಿಯೇಟರ್‌ನ ಮಾಲೀಕರು ಮೂರು ದಿನಗಳಿಗೆ ಮಾತ್ರ ಥಿಯೇಟರ್ ನೀಡಿದ್ದಾರೆ. ಚಿತ್ರರಂಗದ ಇತಿಹಾಸದಲ್ಲೇ ಹೀಗೆ ಮೂರೇ ದಿನಕ್ಕೆ ಥಿಯೇಟರ್ ನೀಡಿರುವುದು ಇದೇ ಮೊದಲ ಬಾರಿ. ಈ ಎಲ್ಲಾ ಸಂದರ್ಭದಲ್ಲೂ ಚೇಂಬರಿನ ಪದಾಧಿಕಾರಿಗಳು ಮತ್ತು ನಿರ್ಮಾಪಕರ ಸಂಘದ ಪದಾಧಿಕಾರಿಗಳು ಯಾರಿಗೂ ಏನೂ ಸಹಾಯವನ್ನೂ ಮಾಡಲಿಲ್ಲ, ಅಥವಾ ಕನಿಷ್ಠ ಮಾರ್ಗದರ್ಶನವನ್ನೂ ನೀಡಲಿಲ್ಲ ಎಂಬುದೇ ಖೇದದ ವಿಷಯ.



ಕನ್ನಡ ಚಿತ್ರರಂಗದ ದುರ್ಗತಿ ಹೀಗಾದರೆ ಅತ್ತ ಬಾಲಿವುಡ್‌ನಲ್ಲಿ ಎಂತಹ ಸೌಹಾರ್ದ ಪೂರ್ಣ ವಾತಾವರಣವಿದೆ ಗೊತ್ತಾ? ವಾಸ್ತವವಾಗಿ, ಅಮೀರ್ ಖಾನ್ ನಟಿಸಿದ 'ಗಜನಿ' ಮತ್ತು ಅಕ್ಷಯ್ ಕುಮಾರ್ ನಟನೆಯ 'ಚಾಂದಿನಿ ಚೌಕ್ ಟು ಚೀನ' ಎಂಬ ಎರಡು ಚಿತ್ರಗಳು ಒಂದೇ ದಿನ ಬಿಡುಗಡೆಯಾಗಬೇಕಿತ್ತು. ಆದರೆ ತೆರೆಮರೆಯಲ್ಲಿ ಎರಡು ಚಿತ್ರದ ನಿರ್ಮಾಪಕರು ತಮ್ಮ ನಾಯಕ ನಟರೊಂದಿಗೆ ಮಾತುಕತೆ ನಡೆಸಿ ತಮ್ಮತಮ್ಮಲ್ಲೇ ಒಂದು ಸಂಧಾನ ಸೂತ್ರವನ್ನು ಮಾಡಿಕೊಂಡರು.

ಅದರಂತೆ 'ಗಜನಿ' ಮೊದಲಿಗೆ ಬಿಡುಗಡೆಯಾಗಿ ಒಂದು ತಿಂಗಳ ನಂತರ 'ಚಾಂದಿನಿ ಚೌಕ್ ಟು ಚೀನ' ಬಿಡುಗಡೆ ಮಾಡುವುದೆಂದು ನಿರ್ಣಯಿಸಿದರು. ಈ ನಿರ್ಣಯಕ್ಕಾಗಿ ಅವರು ಸಿನಿಮಾರಂಗದ ಯಾವುದೇ ಸಂಘದ ಸಹಕಾರವನ್ನೂ ಕೋರದೆ ತಾವುತಾವೇ ಸಂಧಾನ ಮಾಡಿಕೊಂಡಿದ್ದೇ ವಿಶೇಷ.

ಎರಡೂ ಚಿತ್ರ ಒಂದೇ ದಿನ ಬಿಡುಗಡೆಯಾದಲ್ಲಿ ಇಬ್ಬರೂ ನಿರ್ಮಾಪಕರೂ ಸಾಕಷ್ಟು ಆರ್ಥಿಕ ನಷ್ಟ ಅನುಭವಿಸುತ್ತಿದ್ದರು ಎಂಬುದರಲ್ಲಿ ಸಂಶಯ ಇಲ್ಲ. ಈಗ 'ಗಜನಿ' ಬಿಡುಗಡೆಯಾಗಿ ಇನ್ನೂರು ಕೋಟಿ ಲಾಭದ ಗಡಿಯನ್ನು ದಾಟಿ ಬಾಲಿವುಡ್ ಚಿತ್ರರಂಗದ ಇತಿಹಾಸದಲ್ಲೇ ದಾಖಲೆ ಸೃಷ್ಟಿಸಿ ಮುನ್ನಡೆಯುತ್ತಿದೆ.

ಅದೇ ರೀತಿ ಅಷ್ಟೇ ದೊಡ್ಡ ನಿರೀಕ್ಷೆಯನ್ನು ಹುಟ್ಟು ಹಾಕಿರುವ ಅಕ್ಷಯ್ ಕುಮಾರ್‌ನ 'ಚಾಂದಿನಿ ಚೌಕ್ ಟು ಚೀನ' ಚಿತ್ರ ಕೂಡಾ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಬಹುದು ಎಂಬ ಮಾತು ಕೇಳಿಬರುತ್ತಿದೆ.

ಇವೆರಡೂ ಸಿನಿಮಾ ಬಿಡುಗಡೆಯಾಗುತ್ತಿರುವ ಸಂದರ್ಭದಲ್ಲಿ ಅಮೀರ್ ಖಾನ್ ಅಪ್ಪಿತಪ್ಪಿಯೂ 'ಚಾಂದಿನಿ....' ಬಗ್ಗೆಯಾಗಲೀ ಅಥವಾ ಅಕ್ಷಯ್ 'ಗಜನಿ' ಬಗ್ಗೆಯಾಗಲಿ ಆರೋಪ, ಟೀಕೆಗಳನ್ನು ಮಾಡಲಿಲ್ಲ ಎಂಬುದೂ ಗಮನಾರ್ಹ.


ಬಾಲಿವುಡ್ ಚಿತ್ರರಂಗದ ಇಂತಹ ಅನೇಕ ಕೊಟ್ಟು-ಕೊಳ್ಳುವ ಸೌಹಾರ್ದಯುತ ನಡವಳಿಕೆಗಳನ್ನು ನಮ್ಮ ಕನ್ನಡ ಚಿತ್ರರಂಗದವರು ಕಲಿತುಕೊಳ್ಳಬೇಕಾಗಿದೆ. ಪ್ರತಿವಾರವೂ ನಿರ್ಮಾಪಕರು ನ್ಯಾಯಕ್ಕಾಗಿ ಚೇಂಬರ್ ಮೆಟ್ಟಿಲನ್ನೇರುವ ಪರಿಪಾಠವನ್ನು ಕೈ ಬಿಡಬೇಕು. ಈ ಚೇಂಬರ್‌ನಿಂದಾಗಲೀ, ನಿರ್ಮಾಪಕರ ಸಂಘದಿಂದಾಗಲೀ ಉದ್ಯಮವನ್ನು ಕಾಡುವ ಯಾವುದೇ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಲು ಸಾಧ್ಯವೇ ಇಲ್ಲ. ಅವರಿಂದೇನಿದ್ದರೂ ಸಮಸ್ಯೆಗೆ ತಾತ್ಕಾಲಿಕ ತೇಪೆ ಹಾಕುವ ಕೆಲಸ ಮಾತ್ರ ಸಾಧ್ಯ.

ಹಿಂದಿಯ 'ಗಜನಿ' ಮತ್ತು 'ಚಾಂದಿನಿ..'ಯನ್ನು ನೋಡಿಯಾದರೂ ಇಲ್ಲಿನವರು ಬದಲಾಗಲಿ ಎಂಬುದಷ್ಟೇ ನಮ್ಮ ಆಶಯ.

ನಾಲ್ಕರಲ್ಲಿ ಎರಡು ನಾಲಾಯಕ್ಕು!



ಅರ್ಚನಾ ಗುಪ್ತಾ 'ಸರ್ಕಸ್'



ಈ ವಾರ ನಾಲ್ಕು ಚಿತ್ರಗಳು ತೆರೆಕಂಡಿವೆ. ಅದರಲ್ಲಿ ತೆಲುಗಿನ 'ಅನಸೂಯ' ಚಿತ್ರದ ರೀಮೇಕ್ 'ಅನು' ಬಹಳ ಮುಖ್ಯವಾದದ್ದು. ಈ ಚಿತ್ರ ಭಯಾನಕ ಮತ್ತು ಥ್ರಿಲ್ಲರ್ ಚಿತ್ರವಾಗಿದ್ದು ಮಾಮೂಲಿ ಚಿತ್ರಗಳಿಗಿಂತ ವಿಭಿನ್ನವಾಗಿದೆಯೆಂದು ಹೇಳಬಹುದು. ನಾಯಕಿ ಪೂಜಾ ಗಾಂಧಿ ದೃಷ್ಟಿಯಿಂದ ಇದೊಂದು ಒಳ್ಳೆಯ ಚಿತ್ರ. ಆದರೂ ತೆಲುಗಿನ ಜೆರಾಕ್ಸ್ ಕಾಪಿಯಂತಿರುವ ಈ ಚಿತ್ರದ ಬಗ್ಗೆ ಹೆಚ್ಚು ಹೇಳುವುದು ಸೂಕ್ತವಲ್ಲವೆನಿಸುತ್ತದೆ.


ಮತ್ತೊಂದೆಡೆ ಎಸ್.ನಾರಾಯಣ್, ಜಗ್ಗೇಶ್ ಜೋಡಿಯ 'ಚಿಕ್ಕಪೇಟೆ ಸಾಚಾಗಳು' ತೆರೆಕಂಡಿವೆ. ಇದರ ನಾಯಕರುಗಳು, ಚಿತ್ರದ ಟೈಟಲ್, ಜಾಹೀರಾತುಗಳನ್ನು ನೋಡಿದರೆ ಈ ಚಿತ್ರ ಹೇಗಿರಬಹುದೆಂದು ಸುಲಭವಾಗಿ ಊಹಿಸಬಹುದು. ಇದನ್ನು ಮಾಗಡಿ ಪಾಂಡು ನಿರ್ದೇಶಿಸಿದ್ದರೂ ನಾರಾಯಣ್ ಬ್ರಾಂಡ್‌ನ ಕಳಪೆ ಅಭಿರುಚಿಯ ಅಶ್ಲೀಲ ಜೋಕ್‌ಗಳೇ ಇದರಲ್ಲಿ ತುಂಬಿವೆ. ಬಹುಶಃ ಇದನ್ನು 'ಸಿ' ಕೇಂದ್ರದ ಪ್ರೇಕ್ಷಕರೂ ಮೆಚ್ಚಲಾರರೇನೋ?



'ಟ್ಯಾಕ್ಸಿ ನಂ.1' ಎಂಬ ಚಿತ್ರ ಯಾವಾಗ ಪ್ರಾರಂಭವಾಯಿತು? ನಾಯಕ-ನಾಯಕಿಯರು ಯಾರು? ಎಂಬುದೇ ಗೊತ್ತಿಲ್ಲ. ಆದರೂ ಈ ಚಿತ್ರ ಈ ವಾರ ತೆರೆಕಂಡಿದೆ. ಇಂತಹ ಆಗಂತುಕರ ಚಿತ್ರವನ್ನು ವೀಕ್ಷಿಸಲು ತನು-ಮನ-ಧನ ಮಾತ್ರವಲ್ಲ ಗಂಡೆದೆ ಕೂಡಾ ಬೇಕು. ಹೀಗಾಗಿ ಪೆಟ್ರೋಲ್-ಡೀಸೇಲ್ ಅಭಾವದ ಈ ಸಂದರ್ಭದಲ್ಲಿ 'ಟ್ಯಾಕ್ಸಿ'ಯನ್ನು ಯಾರು ತಾನೇ ಹತ್ತುತ್ತಾರೆ?

'ಕೆಂಪ' ಎಂಬ ಮತ್ತೊಂದು ಚಿತ್ರ ಬಗ್ಗೆ ಕುತೂಹಲವಿರಲು ಕಾರಣ ಆ ಚಿತ್ರದ ನಿರ್ಮಾಪಕ ಆನೇಕಲ್ ಬಾಲರಾಜ್ ಉದ್ಯಮಕ್ಕೆ ಪರಿಚಿತರಾಗಿರುವುದು. ಅವರ ಮೊದಲನೆಯ ಚಿತ್ರ 'ಕರಿಯ' ನಿರ್ದೇಶಕ ಪ್ರೇಮ್ ಮತ್ತು ನಾಯಕ ನಟ ದರ್ಶನ್‌ಗೆ ಬ್ರೇಕ್ ಕೊಟ್ಟಿತ್ತು. ಆನೇಕಲ್ ಬಾಲರಾಜ್ 'ಕೆಂಪ' ಚಿತ್ರದಲ್ಲಿ ಪ್ರೇಮ್ ಶಿಷ್ಯ ಜಗದೀಶ್‌ಗೆ ನಿರ್ದೇಶನದ ಅವಕಾಶ ನೀಡಿದ್ದಾರೆ. ನಾಯಕನಾಗಿ ತನ್ನ ಮಗ ಸಂತೋಷ್‌ನನ್ನೇ ಆರಿಸಿಕೊಂಡಿದ್ದಾರೆ.

ವೀರಪ್ಪನ್ ವಾಸವಾಗಿದ್ದ ಗೋಪಿನಾಥಂ ಗ್ರಾಮದಲ್ಲಿ ಎಸ್‌ಟಿಎಫ್ ಪಡೆಯವರಿಂದಾದ ದೌರ್ಜನ್ಯವೇ ಚಿತ್ರದ ಕಥಾವಸ್ತು. ಹೀಗೆ ದೌರ್ಜನ್ಯಕ್ಕೊಳಗಾದ ಕೆಂಪ ಎಂಬ ಅಮಾಯಕನ ಜೀವನ ಹೇಗೆ ಹೆಜ್ಜೆಹೆಜ್ಜೆಗೂ ಗೊಂದಲ ಮತ್ತು ಕಷ್ಟದಲ್ಲಿ ಸಿಲುಕಿಕೊಂಡು ಸಾಗುತ್ತದೆ ಎಂಬುದರ ಸುತ್ತ ಕಥೆ ಹೆಣೆಯಲ್ಪಟ್ಟಿದೆ. ನಿರ್ದೇಶಕ ಜಗದೀಶ್ ತುಂಬಾ ಜಾಣತನದಿಂದ ಕಥೆಯನ್ನು ಹೆಣೆದು ನಿರೂಪಿಸಿ ಭೇಷ್ ಎನಿಸಿಕೊಳ್ಳುವಷ್ಟರಲ್ಲೇ ಕ್ಲೈಮ್ಯಾಕ್ಸ್‌ನಲ್ಲಿ ಮುಗ್ಗರಿಸಿಬಿಟ್ಟಿದ್ದಾರೆ. ಚಿತ್ರದ ನಾಯಕ ತನ್ನ ಪಾತ್ರ 'ಕೆಂಪ'ನಿಗೆ ಜೀವ ತುಂಬಿದ್ದಾನೆ. ಹಾಗಂತ ಬೇರೆ ತರಹದ ಪಾತ್ರಗಳನ್ನು ಈ ಹುಡುಗನಿಂದ ನಿರೀಕ್ಷಿಸಲಾಗದು.



ಇನ್ನೂ ಎಚ್ಚರಿಕೆಯಿಂದ ಚಿತ್ರಕತೆಯನ್ನು ಹೆಣೆದಿದ್ದೇ ಆದಲ್ಲಿ, ಇದೊಂದು ಸಮಕಾಲೀನ ಚಿತ್ರವಾಗಿ ಸರ್ಕಾರದ ಆಡಳಿತದ ಮೇಲೆ ಕ್ಷ-ಕಿರಣವನ್ನು ಚಿಮ್ಮಬಹುದಿತ್ತೇನೋ? ಅಂತಹ ಅವಕಾಶವನ್ನು ಜಗದೀಶ್ ಕಳೆದುಕೊಂಡಿದ್ದಾರೆ. ಆದರೂ ಮೊದಲ ಪ್ರಯತ್ನದ ಬಗ್ಗೆ ಓಕೆ ಎನ್ನಬಹುದು. ಈ ನಾಲ್ಕು ಚಿತ್ರಗಳಲ್ಲಿ ಯಾವುದನ್ನು ನೋಡಬೇಕೆಂಬ ಆಯ್ಕೆ ನಿಮಗೆ ಸೇರಿದ್ದು.

■ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...